ಕನ್ನಡ ವಿಶ್ವವಿದ್ಯಾಲಯ, ಹಂಪಿ

" ತೇಜಸ್ವಿ ಅವರ ಕಥಾಸಾಹಿತ್ಯದಲ್ಲಿ ಮಾನವೀಯ ಸಂಬಂಧಗಳ ಅನಾವರಣ "

ಕನ್ನಡ ಎಂ. ಫಿಲ್ ಪದವಿಗಾಗಿ ಕಾವ್ಯಮಂಡಲದ ವತಿಯಿಂದ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ನಿಬಂಧ

ಮಾರ್ಗದರ್ಶಕರು
ಡಾ. ಪ್ರೊ. ಕರಂ ನಾಗರಾಜ

Reg. No. 7005 (2006-07)

ಸಂಶೋಧನಾ ವಿದ್ಯಾರ್ಥಿ
ಕೃಷ್ಣೋಜಿರಾವ್. ಟಿ.ಎಂ.

ಕಾವ್ಯಮಂಡಲ
೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ, ಬೆಂಗಳೂರು-೦೪.

2007

590

ದೃಢೀಕರಣ ಪತ್ರ

ಕೃಷ್ಣೋಜಿರಾವ್. ಟಿ.ಎಂ. ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ "ತೇಜಸ್ವಿಯವರ ಕಥಾಸಾಹಿತ್ಯದಲ್ಲಿ ಮಾನವೀಯ ಸಂಬಂಧಗಳ ಅನಾವರಣ" ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವೀಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಬೆಂಗಳೂರು

ದಿನಾಂಕ : 5. 9. 2008

ಮಾರ್ಗದರ್ಶಕರು

(signature)

590

ಪ್ರಮಾಣ ಪತ್ರ

"ತೇಜಸ್ವಿಯವರ ಕಥಾಸಾಹಿತ್ಯದಲ್ಲಿ ಮಾನವೀಯ ಸಂಬಂಧಗಳ ಅನಾವರಣ" ಎಂಬ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ~~ಡಾ.~~ ಶ್ರೀ. ಕೆ. ರಂಗನಾಥಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಕೃಷ್ಣೋಜಿರಾವ್. ಟಿ.ಎಂ.

ಸ್ಥಳ : ಬೆಂಗಳೂರು

ದಿನಾಂಕ : 5-9-2008

ಕೃಷ್ಣೋಜಿರಾವ್. ಟಿ.ಎಂ.
ಸಂಶೋಧನಾ ವಿದ್ಯಾರ್ಥಿ

ಪರಿವಿಡಿ

ಅಧ್ಯಾಯ - ೧

ಪೀಠಿಕೆ

ರಾಷ್ಟ್ರಕವಿ ಕುವೆಂಪುರವರು ಎರಡು ರೀತಿಯಲ್ಲಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಒಂದು ಅವರ ಶ್ರೇಷ್ಠ ಕನ್ನಡ ಸಾಹಿತ್ಯ ರಚನೆಯ ಮೂಲಕವಾದರೆ, ಇನ್ನೊಂದು ಅವರ ಶ್ರೇಷ್ಠ ಪುತ್ರ ತೇಜಸ್ವಿಯವರ ಮೂಲಕ ಶ್ರೇಷ್ಠ ಸಾಹಿತಿಗಳ ಪುತ್ರರಲ್ಲಿ ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿಗೆ ಪಾತ್ರರಾದ ಇಬ್ಬರಲ್ಲಿ ತೇಜಸ್ವಿಯವರು ಒಬ್ಬರು. (ಇನ್ನೊಬ್ಬರು ಡಿ.ವಿ.ಜಿಯವರ ಪುತ್ರ, ಬಿ.ಜಿ.ಎಲ್ ಸ್ವಾಮಿಯವರು) ಅದೇ ರೀತಿ ಕರ್ನಾಟಕದ ಪ್ರತಿಷ್ಠಿತ 'ಪಂಪ ಪ್ರಶಸ್ತಿ' ಯು ಕುವೆಂಪು ಹಾಗೂ ತೇಜಸ್ವಿ ಇಬ್ಬರಿಗೂ ಸಂದಿರುವುದು ಒಂದು ವಿಶೇಷ. 'ಪೂಚಂತೇ' ಎಂದೇ ಅವರು ಪ್ರಸಿದ್ಧರು.

ತೇಜಸ್ವಿಯವರು ಬಹುಮುಖ ಪ್ರತಿಭೆ, ಸದಾ ಹೊಸದರ ಅನ್ವೇಷಣೆಯಲ್ಲಿರುವವರು ಅವರೊಬ್ಬ ಖ್ಯಾತ ಬರಹಗಾರ, ಪರಿಸರಿವಾದಿ, ಪ್ರತಿಭಟನಕಾರ, ಗಂಭೀರ ವಿಚಾರವಾದಿ, ಕುಂಚ ಹಿಡಿದ ಕಲಾವಿದ, ಛಾಯಚಿತ್ರ ಗ್ರಾಹಕ, ಜೊತೆಗೆ ಕಂಪ್ಯೂಟರ್ ಮೂಲಕ ಗ್ರಂಥ ಸೃಷ್ಠಿ ಮತ್ತು ಚಿತ್ರಕಲೆ ಮಾಡುವುದರಲ್ಲೂ ಇವರಿಗೆ ಹೆಚ್ಚಿನ ಆಸಕ್ತಿ.

ಸುಂದರ ಗಿರಿವನಗಳಿಂದೊಡಗೂಡಿದ ಮಲೆನಾಡಿ ಸಹ್ಯಾದ್ರಿ ಶ್ರೇಣಿಯಲ್ಲಿರುವ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕುಪ್ಪಳ್ಳಿ ಎಂಬ ಗ್ರಾಮ ತೇಜಸ್ವಿಯವರ ಹುಟ್ಟೂರು, ತಾಯಿ ಹೇಮಾವತಿ, ತಂದೆ ಪ್ರಸಿದ್ಧ ಕವಿ ಕುವೆಂಪುರವರು. ಪೂರ್ಣಚಂದ್ರತೇಜಸ್ವಿ ತಮ ಬಾಲ್ಯದ ಬಹು ಭಾಗವನ್ನು ಮಲೆನಾಡಿನ ಹೃದಯ ಭಾಗವಂತಿರುವ ಶಿವಮೊಗ್ಗೆಯಲ್ಲಿಯೇ ಕಳೆದಿದ್ದಾರೆ. ಹೀಗಾಗಿ ಅವರ ಬರಹಗಳಲ್ಲಿ ಮಲೆನಾಡಿನ ದಟ್ಟ ಅನುಭವಗಳ ವಿವರಣೆ ಕಂಡು ಬರುತ್ತದೆ. ಅವರೇ ಹೇಳುವಂತೆ ಅವರ ಸಾಹಿತ್ಯದ ಆಸಕ್ತಿ ಕೂಡ ಚಿಗುರೊಡೆದಿದ್ದು ಮಲೆನಾಡಿನಲ್ಲಿಯೇ ಪ್ರಾಥಮಿಕ ಶಾಲಾ ವ್ಯಾಸಂಗವನ್ನು ಮುಗಿಸಿ ಕಾಲೇಜು ವ್ಯಾಸಂಗವನ್ನು ಶಿವಮೊಗ್ಗದಲ್ಲಿ ಪ್ರಾರಂಭಿಸಿದ ಪೂರ್ಣಚಂದ್ರ ತೇಜಸ್ವಿಯು ನಂತರ ಕನ್ನಡ ಬಿ.ಎ. ಆನರ್ಸ್ ಹಾಗೂ ಕನ್ನಡ ಎಂ.ಎ. ಪದವಿಗಳನ್ನು ಮೈಸೂರಿನ ಮಹಾರಾಜ ಕಾಲೇಜು ಹಾಗೂ ಮೈಸೂರು

ವಿಶ್ವವಿದ್ಯಾನಿಲಯದಿಂದ ಪಡೆದಿದ್ದಾರೆ. ಇವರಿಗೆ ಒಬ್ಬ ಸಹೋದರ ಕೋಕಿಲೋದಯ, ಚೈತ್ರ, ಎಂಜಿನಿಯರಿಂಗ್ ಓದಿ ಈಗ ಆಸ್ಟ್ರೇಲಿಯಾದಲ್ಲಿ ಕೆಲಸ ಮಾಡುತ್ತಿದ್ದಾರೆ. ಇಬ್ಬರು ಸಹೋದರಿಯರಿದ್ದರು. ಇಂದುಕಲಾ ಮತ್ತು ತಾರಿಣಿ ಎಂದು. ಇಂದುಕಲಾ ವೈದ್ಯರಾದ ಡಾ. ಸುರೇಂದ್ರ ಅವರೊಡನೆ ವಿವಾಹ ಆಗಿ ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ತಾರಿಣಿಯು ಇಂಜಿನಿಯರಾದ ಡಾ. ಚಿದಾನಂದಗೌಡ ಅವರ ಪತ್ನಿಯಾಗಿ ಮೈಸೂರಿನಲ್ಲಿ ವಾಸಿಸುತ್ತಿದ್ದಾರೆ.

ತೇಜಸ್ವಿಯವರ ಸಾಹಿತ್ಯದಲ್ಲಿ ಕಾಣುವ ವಿಶಿಷ್ಟ ಗುಣವೆಂದರೆ ಪ್ರಕೃತಿಯ ಭವ್ಯ ದೃಶ್ಯಸೌಂದರ್ಯಗಳ ಮುಂದೆ ಮಗು ಸಹಜ ಕುತೂಹಲ, ಅಪ್ಪಟ ಮುಗ್ಧತೆಗಳು. ಈ ಅಂಶಗಳನ್ನು ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಸಾಹಿತ್ಯ ದೃಷ್ಟಿಯಲ್ಲಿ ಇಂದಿಗೂ ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ. ಪೂರ್ಣಚಂದ್ರ ತೇಜಸ್ವಿಯವರಿಗೆ ಮನೆಗಿಂತ ಕಾಡು, ನದಿ, ಬೆಟ್ಟ, ಗುಡ್ಡ, ಕೊಳ ಅಲ್ಲಿ ಈಜಾಡುವ ಮೀನುಗಳು ಅವುಗಳನ್ನು ಗಾಳ ಹಾಕಿ ಹಿಡಿಯುವ ತಂತ್ರಗಾರಿಕೆ ಇವೆಲ್ಲ ಹೆಚ್ಚು ಇಷ್ಟವಾಗಿ ಕಾಣುತ್ತವೆ. ಪೂರ್ಣಚಂದ್ರ ತೇಜಸ್ವಿಯವರು ಎಂ.ಎ. ಪದವಿಯ ಅನಂತರ ಚಿಕ್ಕಮಂಗಳೂರು ಜಿಲ್ಲೆಯ ಮೂಡಿಗೆರೆಯ ಸಮೀಪದಲ್ಲಿ 'ಚಿತ್ರಕೂಟ'ಎಂಬ ತೋಟದ ಮನೆಯನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ''೧೯೬೬ ರಲ್ಲಿ ಆರ್. ರಂಗಪ್ಪನವರ ಪುತ್ರಿ ಆರ್. ರಾಜೇಶ್ವರಿರವರನ್ನು ವಿವಾಹವಾದರು.ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಸುಶ್ಮಿತಾ ಮತ್ತು ಈಶಾನ್ಯ ಎಂದು ಅವರ ಹೆಸರು. ಪ್ರಕೃತಿಯ ಆರಾಧಕರಾಗಿ ಗುಡ್ಡಬೆಟ್ಟಗಳ ದಟ್ಟ ವನರಾಶಿಯ ನಡುವೆ ವಾಸವಾಗಿರುವ ಪೂರ್ಣಚಂದ್ರ ತೇಜಸ್ವಿಯವರಿಗೆ ಅನೇಕ ಹವ್ಯಾಸಗಳಿವೆ. ಕೃಷಿ, ಛಾಯಾಚಿತ್ರ, ಪಕ್ಷಿ ವೀಕ್ಷಣೆ, ಬೇಟೆ, ವಿಜ್ಞಾನದ ಅಧ್ಯಯನ ಮುಂತಾದ ಅನೇಕ ಆಸಕ್ತಿಗಳನ್ನು ಮೈಗೂಡಿಸಿಕೊಂಡಿರುವ ಅವರು ಯಾವಾಗಲೂ ಕಾರ್ಯನಿರತರಾಗಿರುತ್ತಾರೆ. ಪೂರ್ಣಚಂದ್ರ ತೇಜಸ್ವಿಯವರು ಸರಳ ಹೃದಯದ, ಜಂಬದ ಸೋಂಕಿಲ್ಲದ ಮನುಷ್ಯ. ಇವರಿಗೆ ನಾಯಿ ಸಾಕುವಿಕೆಯಲ್ಲಿ ಬಹಳ ಆಸಕ್ತಿ. 'ಕರ್ವಾಲೊ' ಕಾದಂಬರಿಯಲ್ಲಿ ಬರುವ 'ಕಿವಿ'ಮತ್ತು ಅದರ ಮರಿ ಇವರಿಗೆ ಬಹಳ ಪ್ರಾಣ ಸ್ನೇಹಿತರು. ನಾಯಿಗೆ ಇವರ ಮನೆಯಲ್ಲಿ ಮನಷ್ಯನ ಸ್ಥಾನವಿದೆ.

ಪೂರ್ಣಚಂದ್ರ ತೇಜಸ್ವಿಯವರು ಶಿವಮೊಗ್ಗದಲ್ಲಿ ಅಭ್ಯಸಿಸುತ್ತಿರುವಾಗಲೇ ಅಲ್ಲಿ ಸತತವಾಗಿ ನಡೆಯುತ್ತಿದ್ದ ಸಾಹಿತ್ಯ ಚಟುವಟಿಕೆಗಳಿಂದ ಪ್ರಭಾವಿತರಾಗಿ ಸಾಹಿತ್ಯದೆಡೆಗೆ

ಆಕರ್ಷಿತರಾದರು. ಅದೇ ಸಂದರ್ಭ ಯು.ಆರ್.ಅನಂತಮೂರ್ತಿಯವರು ಇವರಿಗೆ ಅಧ್ಯಾಪಕರಾಗಿ ಬಂದಿದ್ದು, ಇವರ ಸಾಹಿತ್ಯಾಸಕ್ತಿಗಳಿಗೆ ಇಂಬು ಸಿಕ್ಕಿತು.ಅವರಿಂದಲೇ ಅನೇಕ ಸಾಹಿತ್ಯ ಸಿದ್ಧಾಂತ ಮತ್ತು ರಾಜಕೀಯ ಸಿದ್ಧಾಂತಗಳ ಪರಿಚಯವೂ ಆಯಿತು.

ಪೂರ್ಣಚಂದ್ರ ತೇಜಸ್ವಿಯವರೇ ಹೇಳಿಕೊಂಡಿರುವಂತೆ ಅವರ ಬರವಣಿಗೆಯ ಮೇಲೆ ಆಳವಾಗಿ ಪ್ರಭಾವ ಬೀರಿರುವುದು ಮೂರು ಅಂಶಗಳು.

೧. ಲೋಹಿಯ ಅವರ ತತ್ವ ಚಿಂತನೆ

೨. ಕುವೆಂಪು ಅವರ ಕಲಾ ಸೃಷ್ಠಿ

೩. ಕಾರಂತರ ಜೀವನ ಪ್ರಯೋಗ ಶೀಲತೆ ಮತ್ತು ಸಾಹಸ''[1]

ಅವರ ಸಾಹಿತ್ಯದಲ್ಲಿ ಪರಿಸರ ಹಾಗೂ ಸಮಾಜದ ಬಗ್ಗೆ ಅತ್ಯಂತ ಕಾಳಜಿಗಳು ಹಾಗೂ ಪ್ರಗತಿಪರ ಚಿಂತನೆಗಳು ಕಂಡುಬರುತ್ತದೆ. ಜೀವನದಲ್ಲಿ ಕಂಡುಂಡ ಅನುಭವಗಳನ್ನು ಅವರು ತಮ್ಮ ಸಾಹಿತ್ಯದ ಮೂಲಕ ನಮ್ಮೊಡನೆ ಹಂಚಿಕೊಂಡಿದ್ದಾರೆ. ಅವರ ಬರವಣಿಗೆಯಲ್ಲಿ ಒಂದು ರೀತಿಯ ಶಿಸ್ತು ಕಾರ್ಯೋನ್ಮುಖವಾಗಿರುವುದು ನಮಗೆ ಕಂಡು ಬರುತ್ತದೆ. ನಿರೂಪಣೆಯಲ್ಲಿನ ಒಂದು ರೀತಿಯ ನಿರ್ಲಿಪ್ತತೆ ಹಾಗೂ ನವಿರಾದ ಹಾಸ್ಯ ಪ್ರಜ್ಞೆ ಹಾಗೂ ವಿಸ್ಮಯಕಾರಿ ಪತ್ತೇಗಾರಿಕೆ ಅವರ ಕೃತಿಗಳಲ್ಲಿ ಕಂಡುಬರುತ್ತವೆ. ಪೂರ್ಣಚಂದ್ರ ತೇಜಸ್ವಿಯವರ ಬರಹಗಳಲ್ಲಿ ಅವರ ಬಹುಮುಖ ಪ್ರತಿಭೆಯನ್ನು ಹಾಗೂ ಅನನ್ಯ ಆಸಕ್ತಿಗಳನ್ನು ನಾವು ಗುರುತಿಸಬಹುದು.

ಅತೀವ ಸಾಮಾಜಿಕ ಕಳಕಳಿಯನ್ನು ಹೊಂದಿರುವ ಅವರು ನಮ್ಮ ಯುವ ಪೀಳಿಗೆಯನ್ನು ಹತಾಶರನ್ನಾಗಿ ಮಾಡುವ ಈ ದೇಶದ ನೈತಿಕ ಅಧಃಪತನದ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಾರೆ. ಅದೇ ರೀತಿ ನಮ್ಮ ಪರಿಸರ ಸಂಸ್ಕೃತಿಯನ್ನು ವಿಕಾರಗೊಳಿಸುವ ಸಾಮಾಜಿಕ, ರಾಜಕೀಯ ಭ್ರಷ್ಟಾಚಾರ ವ್ಯವಸ್ಥೆಗಳನ್ನು ಕುರಿತು ಗಂಭೀರ ಚಿಂತನೆ ಮಾಡುತ್ತಾರೆ. ಮೂಢನಂಬಿಕೆ, ಆಷಾಡಭೂತಿತ್ವ, ಶೋಷಣೆ ಹಾಗೂ ಸಭ್ಯತೆಯ ಸೋಗನ್ನು ಅವರೆಂದೂ ಸಹಿಸರು, ವೈಚಾರಿಕ ದೃಷ್ಟಿಕೋನ ಹೊಂದಿರುವ ಪೂರ್ಣಚಂದ್ರ ತೇಜಸ್ವಿಯವರು ನಿಷ್ಠುರವಾದಿಗಳು ಆಗಿದ್ದು ಪ್ರಶಸ್ತಿ ಸನ್ಮಾನಗಳನ್ನು ಅರಿಸಿಕೊಂಡು ಹೋದವರಲ್ಲ.

---

1. ಡಾ. ಎಚ್.ಎಂ. ಮಹೇಶ್ವರಯ್ಯ, ವಿಜಯಕರ್ನಾಟಕ ದಿನಪತ್ರಿಕೆ, ಏಪ್ರಿಲ್-6, 2007.

ಕನ್ನಡ ಎಂ.ಎ. ಪದವೀಧರರಾದ ಅವರು ಉಪನ್ಯಾಸಕ ವೃತ್ತಿಯನ್ನು ತಿರಸ್ಕರಿಸಿ ಕೃಷಿ ಜೀವನವನ್ನು ಆರಿಸಿಕೊಂಡರು. ಈಕೃಷಿ ಬದುಕೆ ಅವರ ಪ್ರಯೋಗ ಶೀಲತೆಗೆ ಕಾರಣವಾಗಿದೆ. ಕೃಷಿಕರಾದುದರಿಂದಲೇ ಅವರ ಸಾಹಿತ್ಯದಲ್ಲಿ ಕೃಷಿಗೆ ಸಂಬಂಧಿಸಿದ ಅನೇಕ ವಿವರಗಳು ಕಂಡು ಬರುತ್ತವೆ. ಕಾಫಿಬೆಳೆ, ಜೇನು ಬೇಸಾಯ, ಏಲಕ್ಕಿ ಬೆಳೆ, ಬೆಳೆಗಳಿಗೆ ಬರುವ ರೋಗಗಳು ಅವುಗಳಿಗೆ ನೀಡುವಂಥ ಔಷಧಿಗಳ ವಿವರಗಳು ಅವರ ಸಾಹಿತ್ಯದಲ್ಲಿ ಪದೇ ಪದೇ ಕಂಡುಬರುತ್ತವೆ. ವಿನಾಶದ ಅಂಚಿನಲ್ಲಿರುವ ಕಾಡು, ಹದಗೆಡುತ್ತಿರುವ ಪರಿಸರ ಅದಕ್ಕೆ ಕಾರಣರಾಗಿರುವ ವ್ಯಕ್ತಿಗಳು - ಈ ಎಲ್ಲಾ ಸಂಗತಿಗಳನ್ನು ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಕೃತಿಗಳಲ್ಲಿ ಸವಿವರವಾಗಿ ಚಿತ್ರಿಸಿರುತ್ತಾರೆ.

ಪೂರ್ಣಚಂದ್ರತೇಜಸ್ವಿಯವರಿಗೆ ಶಿಕಾರಿ ಎಂದರೆ ಪಂಚಪ್ರಾಣ. ತಮ್ಮ ಬಿಡುವಿನ ವೇಳೆಯಲ್ಲಿ ಕೋವಿಯನ್ನು ಹೆಗಲಿಗೇರಿಸಿ ಬೇಟೆಯಾಡಲು ಕಾಡು ಮೇಡುಗಳನ್ನು ಅಲೆಯುತ್ತಾರೆ. ಹೀಗಾಗಿ ಪಕ್ಷಿ-ಪ್ರಾಣಿಗಳ ಸ್ವಭಾವ ಹಾಗೂ ಅವುಗಳ ವೈಶಿಷ್ಟ್ಯಗಳನ್ನು ಅರ್ಥ ಮಾಡಿಕೊಂಡಿದ್ದಾರೆ. ಕೋವಿ ಹಿಡಿದು ಎಚ್ಚರಿಕೆಯಿಂದ ಶಿಕಾರಿಗಾಗಿ ಕಾಯುತ್ತಿರುವ ಸಂದರ್ಭದಲ್ಲಿ ಕಾಡಿನ ಅಗಾಧವಾದ ಮೌನದ ನಿಟ್ಟುಸಿರು, ನಿಶ್ಯಬ್ಧದಲ್ಲಿ ತೂರಿಬರುವ ಶಬ್ಧದ ಗ್ರಹಿಕೆಯ ವಿವರಗಳು ಅವರ ಬರಹಗಳಲ್ಲಿ ವಿಶಿಷ್ಟವಾಗಿ ಮೂಡಿ ಬಂದಿವೆ. ಅವರೇ ಹೇಳುವಂತೆ ಶಿಕಾರಿಯೆಂದರೆ ಒಂದು ಸಾವು-ಬದುಕಿನ ಹೋರಾಟ. ಇಡೀ ಮಾನವನ ಬದುಕಿನ ಪರಿಯೇ ಶಿಕಾರಿಯೆಂದು ಅವರು ಅರ್ಥೈಸುತ್ತಾರೆ. ಸ್ವರೂಪ ಕಾದಂಬರಿಯಲ್ಲಿ ಶಿಕಾರಿಯನ್ನು ಮಾಡುವ ಶ್ರೀನಿವಾಸನ ಪಾತ್ರದ ಹಾಗೂ ಕರ್ವಾಲೋದಲ್ಲಿ ಕಾಡಿನ ಬಗ್ಗೆ ದೇಶೀಯ ಜ್ಞಾನವನ್ನು ಹೊಂದಿರುವ ಮಂದಣ್ಣನ ಪಾತ್ರದ ಮೂಲಕ ಬೇಟೆಗೆ ಸಂಬಂಧಿಸಿದ ತಮ್ಮ ವಿಶಿಷ್ಟ ಅನುಭವಗಳನ್ನು ಅವರು ನಿರೂಪಿಸಿದ್ದಾರೆ.

ಇವರ ವೈಚಾರಿಕ ಬರಹಗಳು

'ಲಿಂಗ ಬಂದ' ಎಂಬ ಕಥೆಯನ್ನು ಬರೆಯುವುದರ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ಪೂರ್ಣಚಂದ್ರ ತೇಜಸ್ವಿ ಕಥೆ, ಕಾದಂಬರಿ, ಕಾವ್ಯ, ವೈಚಾರಿಕ ಬರಹ, ವೈಜ್ಞಾನಿಕ ಬರಹ, ಅನುವಾದ ಕೃತಿಗಳ ಮೂಲಕ ಕನ್ನಡದಲ್ಲಿ ಮನೆಮಾತಾಗಿದ್ದಾರೆ. ಪೂರ್ಣಚಂದ್ರ ತೇಜಸ್ವಿಯವರು ಪ್ರಕೃತಿ ಸೌಂದರ್ಯ, ಪರಿಸರ ವಿನಾಶ, ಜಗತ್ತಿನ ನಿಗೂಢತೆ, ಮನುಷ್ಯನ ವೈಫಲ್ಯ ನಿರಂತರ ಹೋರಾಟ ಮುಂತಾದವುಗಳನ್ನು ತಮ್ಮ

ಬರಹಗಳಲ್ಲಿ ಅಳವಡಿಸಿಕೊಂಡು ಕೃತಿಯಿಂದ ಕೃತಿಗೆ ಬೆಳೆಯುತ್ತಾ ಹೋಗಿದ್ದಾರೆ. ಅವರ ಆಳವಾದ ಅಧ್ಯಯನ, ಜ್ಞಾನ ಶಾಖೆಗಳ ಪರಿಚಯ, ವಿಭಿನ್ನ ವಲಯುಗಳಲ್ಲಿ ತಿರುಗಾಟ-ಇವುಗಳಿಂದಾಗಿ ಅವರ ಬರಹಗಳಲ್ಲಿ ಹೊಸದೊಂದು ಚೈತನ್ಯ ಕಂಡು ಬರುತ್ತದೆ.

ಸ್ವಗತ ಲಹರಿಯಲ್ಲಿ ಕವನಗಳನ್ನು 'ಯಮಳ ಪ್ರಶ್ನೆ' ಎಂಬ ನಾಟಕವನ್ನು ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು, ಕಿರಗೂರಿನ ಗಯ್ಯಾಳಿಗಳು ಎಂಬ ಕಥಾ ಸಂಕಲನಗಳನ್ನು ಸ್ವರೂಪ, ನಿಗೂಢ, ಮನುಷ್ಯರು ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿಕ್ರಾಸ್ ಎಂಬ ಕಾದಂಬರಿಗಳನ್ನು, ಅಲೆಮಾರಿಯ ಅಂಡಮಾನ್ ಮತ್ತು ನೈಲ್ ನದಿ ಎಂಬ ಪ್ರವಾಸ ಕಥನಗಳನ್ನು ಬರೆದಿರುವ ತೇಜಸ್ವಿಯವರು ಶಿವರಾಮ ಕಾರಂತರಂತೆ ಅನೇಕ ಪ್ರಯೋಗಾತ್ಮಕ ಬರಹಗಳನ್ನು ಬರೆದಿದ್ದಾರೆ. 'ಪರಿಸರದ ಕಥೆ', ಫ್ಲೈಯಿಂಗ್ ಸಾಸರ್ಸ್, ಅದ್ಭುತ ಜಗತ್ತು, ಕನ್ನಡ ನಾಡಿನ ಹಕ್ಕಿಗಳು, ಕಾಡಿನ ಕಥೆಗಳು, ವಿಸ್ಮಯ, ಸಹಜ ಕೃಷಿ, ಮಿಸ್ಸಿಂಗ್ ಲಿಂಕ್, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು ಮುಂತಾದ ವೈಜ್ಞಾನಿಕ ಕೃತಿಗಳನ್ನು ರಚಿಸಿರುವ ತೇಜಸ್ವಿಯವರ ಬರಹಗಳಲ್ಲಿ ವಿಷಯ - ವೈವಿಧ್ಯ ಕಂಡುಬರುತ್ತದೆ. ಇವರ ಬರಹಗಳಲ್ಲಿ ಸಂಶೋಧನಾಸಕ್ತಿಯೂ ಅಡಕವಾಗಿರುತ್ತದೆ. ಪ್ರಕೃತಿ-ಪರಿಸರಗಳ ನಿಗೂಢತೆಯ ಬಗೆಗೆ ಸಂಶೋಧನೆ ಮಾಡಿರುವ ಮಾನವಶಾಸ್ತ್ರ, ಇತಿಹಾಸ, ರಾಜಕೀಯ ಮುಂತಾದ ಜ್ಞಾನ ಶಾಖೆಗಳ ತಿಳುವಳಿಕೆಯನ್ನು ಹೊಂದಿರುವ ಪೂರ್ಣಚಂದ್ರರ ತೇಜಸ್ವಿಯವರು ತಮ್ಮ ಕೃತಿಗಳಲ್ಲಿ ಸಂಶೋಧನಾ ಸೂಕ್ಷ್ಮ ದೃಷ್ಟಿ, ವೀಕ್ಷಣಾ ಶಕ್ತಿ ಮತ್ತು ತಾರ್ಕಿಕ ಚಿಂತನೆಯ ಪರಿಯನ್ನು ಮೆರೆದ್ದಿದಾರೆ. ಕುಬಿ ಮತ್ತು ಇಯಾಲದಲ್ಲಿ ಮೌಢ್ಯಗಳ ನಡುವೆ ನಡೆಯುವ ಸಂಘರ್ಷವನ್ನು ಯಶಸ್ವಿಯಾಗಿ ಚಿತ್ರಿಸಿದ್ದಾರೆ. ಹೀಗೆ ಅವರ ಸಂಶೋಧನಾ ಪ್ರವೃತ್ತಿ ಅವರ ಹಲವಾರು ಸಾಹಿತ್ಯ ಕೃತಿಗಳಲಿ ವ್ಯಕ್ತವಾಗುತ್ತಾ ಸಾಗಿದೆ.

ಇವರ ಲವಲವಿಕೆಯ ಬರವಣಿಗೆಗಳು, ವೈವಿಧ್ಯಮಯ ವಿಷಯದ ಆಯಾಮಗಳು ಅವರ ಬದುಕಿನಷ್ಟೆ ಸಮೃದ್ಧವಾಗಿವೆ. ಅವರು ಅನುವಾದಿಸಿರುವ 'ಕಾಡಿನ ಕಥೆಗಳು'(ಭಾಗ ೧, ೨, ೩) ಕೆನೆತ್ ಆ್ಯಂಡರ್ಸ ನ್ ಅವರ ಅನುಭವಗಳ ಸಂಗ್ರಹದ ರೂಪಾಂತರಗಳಾಗಿವೆ. ಇವರ ಮತ್ತೊಂದು ಅನುವಾದಿತ ಕೃತಿ 'ರುದ್ರ ಪ್ರಯೋಗದಗ ಭಯಾನಕ ನರಭಕ್ಷಕ'' ಜಿಮ್ ಕಾರ್ಬೇಟ್'' ಅವರ ಮ್ಯಾನ್ ಈಟಿಂಗ್ ಲೆಪರ್ಡ್ ಆಫ್ ರುದ್ರ ಪಯಾಗ' ಎಂಬ ಪುಸ್ತಕದ ರೂಪಾಂತರವಾಗಿದೆ. ಪ್ಲೈಯಿಂಗ್ ಸಾಸರ್ ಮುಂತಾದ ವೈಜ್ಞಾನಿಕ ಕೃತಿಗಳು

ಕೂಡ ಅವರ ಸರಳ ಸುಂದರ ಅನುವಾದ ಮತ್ತು ರೂಪಾಂತರಗಳಿಗೆ ಸಾಕ್ಷಿಗಳಾಗಿವೆ. ಅನೇಕ ಸಂದರ್ಭಗಳಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಅನುವಾದಿತ ಬರಹಗಳು ಹಾಗೂ ರೂಪಾಂತರಗಳು ಸ್ವತಂತ್ರ ಕೃತಿಗಳಷ್ಟೆ ಲವಲವಿಕೆಯಿಂದ ಓದಿಸಿಕೊಂಡು ಹೋಗುತ್ತವೆ.

ಪೂರ್ಣಚಂದ್ರ ತೇಜಸ್ವಿಯವರ ಬರವಣಿಗೆಯ ಕ್ರಮದ ಒಂದು ಚಿಂತನೆ

ಶ್ರೇಷ್ಠ ಸಾಮಾಜಿಕ ಚಿಕಿತ್ಸಕರಾದ ಪೂರ್ಣಚಂದ್ರ ತೇಜಸ್ವಿ ಸಮಾಜದ ಹತ್ತು ಹಲವು ರೋಗಗಳನ್ನು ಸಮರ್ಥವಾಗಿ ಗುರುತಿಸುತ್ತಾರೆ. ಮಲೆನಾಡಿನ ಜನರ ಬದುಕಿನ ಆರ್ಥಿಕ ಅಸಮಾನತೆಗಿಂತ ಸಾಂಸ್ಕೃತಿಕ ಅಸಮಾನತೆಯ ಚಿತ್ರಣಗಳನ್ನು ನೀಡುತ್ತಾರೆ. ಕಲಾತ್ಮಕ ಕಾದಂಬರಿಗಳನ್ನು ಕೊಡುಗೆಯಾಗಿ ನೀಡಿದ ಕೀರ್ತಿ ಇವರದು. ನವಿರಾದ ಹಾಸ್ಯ ಪ್ರಜ್ಞೆ, ವಿಸ್ಮಯಗಳ ಶೋಧನೆಗಳು ಅವರ ಎಲ್ಲಾ ಕೃತಿಗಳಲ್ಲಿ ಕಂಡು ಬರುತ್ತವೆ. ಪೂರ್ಣಚಂದ್ರ ತೇಜಸ್ವಿ ಕೃತಿಗಳಲ್ಲಿ ವ್ಯಕ್ತವಾಗುವ ವರ್ತಮಾನ ಸಂವೇದನೆಗಳ ಸ್ವರೂಪ ಯಾವುದು ? ಎಂಬ ಪ್ರಶ್ನೆಗೆ ಕೇವಲ ಯಾವುದೋ ಒಂದು ಕಥೆ ಉತ್ತರ ನೀಡಲಾಗದು. ಅವರ ಬರವಣಿಗೆಯ ಕೇಂದ್ರದಲ್ಲಿಯೇ ವರ್ತಮಾನದ ತಳಮಳಗಳು ಬದುಕಿನ ಪ್ರಶ್ನೆಗಳು ಕಳೆದುಕೊಳ್ಳುತ್ತಿರುವ ನಮ್ಮ ವ್ಯಕ್ತಿತ್ವದ ವಿಶಿಷ್ಟತೆಗಳು ಒಂದಕ್ಕೊಂದು ಸೆಣಸಾಡುತ್ತಿರುವ ಚಿತ್ರಗಳು ಗೋಚರವಾಗುತ್ತವೆ. ಸಂವೇದನೆ ಎನ್ನುವುದು ಒಂದು ಕ್ರಿಯೆಯಾಗಿ ಗೋಚರವಾಗುವುದು ನಮ್ಮ ಚಿಂತನೆ ಮತ್ತು ಅನುಭವಗಳು ಏಕೀಕರಣಗೊಂಡಾಗ ನಮ್ಮ ಪ್ರಜ್ಞೆಯ ಮಹತ್ವದ ಭಾಗವಾದ ಸಂವೇದನೆ ಬದುಕಿನ ಅನೇಕ ಸ್ಥರಗಳಲ್ಲಿ ವ್ಯಕ್ತವಾಗುತ್ತಾ ಹೋಗುತ್ತದೆ. ಪೂರ್ಣಚಂದ್ರ ತೇಜಸ್ವಿಯವರು ವರ್ತಮಾನದ ಮೇಲೆ ನಿಂತು ಬದುಕನ್ನು ತಾವು ಗ್ರಹಿಸಿದಂತೆ ಬಿಚ್ಚಿಡಲು ಪ್ರಯತ್ನಿಸುತ್ತಾರೆ. ಅವರ ಕೃತಿಗಳಲ್ಲಿ ಬದುಕಿನ ನಿಗೂಢತೆ ಮತ್ತು ಸರಳತೆಗಳ ಮುಖಾಮುಖಿ ಎದುರಾಗುತ್ತದೆ. ಸೂಕ್ಷ್ಮ ಬರಹಗಾರರಾದ ಪೂರ್ಣಚಂದ್ರ ತೇಜಸ್ವಿ ಹಳ್ಳಿಯ ಪರಿಸರದಲ್ಲಿ ಅವಕಾಶವಿಲ್ಲದೆ ಕಮರಿ ಹೋಗುತ್ತಿರುವ ಕಲಾವಂತಿಕೆ ಹಾಗೂ ಸೌದಂರ್ಯದ ದುರಂತ ಚಿತ್ರಣವನ್ನು ತಮ್ಮ ಬರವಣಿಗೆಯಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ.

ಜಾಗತೀಕರಣ ಪ್ರಕ್ರಿಯೆಯ ಅಬ್ಬರವನ್ನು ನಾವು ಕಾಣುತ್ತಿದ್ದೇವೆ. ಪೂರ್ಣಚಂದ್ರತೇಜಸ್ವಯವರು ತಮ್ಮ ಬರವಣಿಗೆಯ ಮೂಲಕತ ೬೦ರ ದಶಕದಲ್ಲಿಯೇ ಆಧುನೀಕರಣದ ಹಿನ್ನಲೆಯು ವ್ಯಕ್ತಿಯ ಪರಿಸರಗಳಲ್ಲಿ ಆಗುತ್ತಿರುವ ವೈಪರೀತ್ಯಗಳನ್ನು ಚಿತ್ರಿಸುವುದು ಮಹತ್ವದ್ದಾಗಿದೆ. ಸ್ಪಷ್ಟ, ಸಾವು, ಪ್ರೇಮ, ಪ್ರಣಯ, ಮದುವೆ, ಸಾಹಿತ್ಯ,

ಸಂಸ್ಕೃತಿ, ಸಮಾಜ ಇತ್ಯಾದಿಗಳ ಬಗ್ಗೆ ಅವರ ಬರವಣಿಗೆಯನ್ನೆಲ್ಲಾ ತಮ್ಮದೇ ಆದ ವ್ಯಕ್ತಿ ವಿಶಿಷ್ಟವಾದ ಸಿದ್ಧಾಂತ, ತತ್ವಗಳನ್ನು ಮಂಡಿಸುತ್ತಾರೆ. ಈ ತತ್ವಗಳನ್ನು ಪರಿಶೀಲಿಸಲು ತಮ್ಮದೆ ಆದ ಸೃಜನಶೀಲತೆಗೆ ಕಥೆ, ನಾಟಕ, ಕಾದಂಬರಿಗಳನ್ನು ಪ್ರಾಯೋಗಿಕ ನೆಲೆಗಳನ್ನಾಗಿ ಮಾಡಿಕೊಳ್ಳುತ್ತಾರೆ.

ಪೂರ್ಣಚಂದ್ರ ತೇಜಸ್ವಿಯವರ ಪ್ರಕಾರ ಬರೆಯುವುದು ಎಂದರೆ ಸೃಷ್ಟಿಸೋದು, ಭಾಷೆ ಎಂಬುದು ಇತ್ಯರ್ಥ ಶಕ್ತಿಗಳ ಆಚೆಗಿನ 'ಅಭಿವ್ಯಕ್ತಿ' 'ವ್ಯಕ್ತಿ' ಜೀವನದಲ್ಲಿ ಎರಡು ಅತ್ಯಂತ ವಿರುದ್ಧವಾದುದನ್ನು ಎದುರಿಸಬೇಕಾಗುತ್ತದೆ. ಅದರಲ್ಲಿ ಒಂದು ಸೃಷ್ಟಿ, ಮತ್ತೊಂದು ಸಾವು ಇವೆರಡೂ ಬದುಕಿನಲ್ಲಿ ಬೇರ್ಪಡಿಸಬಲ್ಲ ಯಮಳ ಸ್ಥಿತಿಗಳು - ಹೀಗೆ ಸೈದ್ಧಾಂತಿಕವಾಗಿ ತಮ್ಮ ತಾತ್ವಿಕ ವಿಚಾರಗಳನ್ನು ಮಂಡಿಸುತ್ತಾರೆ. ಮತ್ತು ಈ ತಾತ್ವಿಕ ಸಿದ್ಧಾಂತಗಳನ್ನು ತಮ್ಮ ಕಾದಂಬರಿಗಳಲ್ಲಿ ಶೋಧನೆಗೆ, ಸತ್ಯಾನ್ವೇಷಣೆಗೆ ಒಡ್ಡುವುದನ್ನು ಕಾಣಬಹುದು. ನಿರೂಪಕ ಅಥವಾ ಲೇಖಕ ಸಮುದಾಯದ ಒಂದು ಭಾಗವಾಗಿದ್ದು ಅಥವಾ ಒಂದುಪಾತ್ರವಾಗಿದ್ದು ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡು ಸಮುದಾಯದ ಸಂವೇದನೆಗಳ ಜೊತೆ ಅಂತರ್ಗತವಾಗುತ್ತಲೂ ಒಂದು ರೀತಿಯ ಆತ್ಮ ಸಂವಾದದ ಅಭಿವ್ಯಕ್ತಿಯ ಸ್ವರೂಪವನ್ನು ತಮ್ಮ ಸೃಜನಶೀಲ ಬರವಣಿಗೆಯಲ್ಲಿ ಕಾಣಿಸುವುದು ಪೂರ್ಣಚಂದ್ರ ತೇಜಸ್ವಿಯವರ ವ್ಯಕ್ತಿ ವಿಶಿಷ್ಟ ಪ್ರತಿಭೆಯ ಸೋಪಜ್ಞತೆಗೆ ಸಾಕ್ಷಿಯಾಗಿದೆ.

ನವ ವಸಾಹತುಶಾಹಿ ಸಂದರ್ಭದಲ್ಲಿ ದೇಶದ ರಾಜಕಾರಣ ಹುಟ್ಟು ಹಾಕಿದ ಗೊಂದಲಗಳನ್ನು ಅಂಥ ಗೊಂದಲಗಳಿಂದ ನಿರ್ಮಾಣವಾದ ಧಾರ್ಮಿಕ ರಾಜಕೀಯ ಹಾಗೂ ಅಂತರ ರಾಷ್ಟ್ರೀಯ ಸಮಸ್ಯೆಗಳನ್ನು ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಅಂದರೆ ರಾಜಕಾರಣ ಓಟಿನ ಗಳಿಕೆಗಾಗಿ ಹುಟ್ಟು ಹಾಕಿದ ಧಾರ್ಮಿಕ ಹಾಗೂ ಮತೀಯ ಕಲಹಗಳಿಗೆ, ಅಭಿವೃದ್ಧಿಯ ನೆಪದಲ್ಲಿ ಪರಿಸರವನ್ನು ಘಾಸಿಗೊಳಿಸುವ ಅವೈಜ್ಞಾನಿಕ ನಿಲುವುಗಳಿಗೆ ಸಾರ್ವಜನಿಕ ಹಾಗೂ ಸರ್ಕಾರಿ ಇಲಾಖೆಗಳ ಅಮಾನವೀಯ ಧೋರಣೆಗಳ ಬಗೆಗೆ ತಾವು ತಳೆದ ನಿಲುವುಗಳನ್ನು ತಮ್ಮ ಕೃತಿಗಳಲ್ಲಿ ಬೆಂಬಲಿಸುತ್ತಾರೆ. ಸ್ವಾತಂತ್ರ್ಯಾನಂತರ ನಮ್ಮ ವಿದ್ಯಾಭ್ಯಾಸ ಪದ್ಧತಿ ಹುಟ್ಟು ಹಾಕಿದ ಅಸಂಬದ್ಧತೆಗಳನ್ನು ಹಾಗೂ ವಿದ್ಯಾವಂತ ಎಂಬ ಬೇಧಗಳನ್ನು ಕಲ್ಪಿಸಿ ಅನುಭವದಿಂದ ದತ್ತವಾಗುವ ಸಹಜ ಜ್ಞಾನವನ್ನು ಒಂದಲ್ಲ ಒಂದು ರೀತಿಯಲ್ಲಿ ವ್ಯಂಗ್ಯಕ್ಕೆ ಗುರಿಪಡಿಸುತ್ತವೆ.

ಕನ್ನಡ ಸಾಹಿತಿಗಳು ಶುದ್ಧ ವೈಜ್ಞಾನಿಕ ಚಿಂತನೆಯ ಬಗ್ಗೆ ಸ್ಪಂದಿಸುವುದು ಕಡಿಮೆಯಾದರೂ ತಂತ್ರಜ್ಞಾನ ತರುವ ಹಿಂಸಾಪಥದ ಕಥನವನ್ನು ತೀವ್ರವಾಗಿ ಹೇಳಿದ್ದಾರೆ. ಆದರೆ ಪರಿಶುದ್ಧ ವೈಜ್ಞಾನಿಕ ಚಿಂತನೆ ಒಂದು ಶ್ರದ್ಧೆಯಿಂದ ಕುವೆಂಪು ಅವರ ಸೃಜನಶೀಲ ಸಾಹಿತ್ಯದಲ್ಲಿ ಅಪ್ರಜ್ಞಾಪೂರ್ವಕವಾಗಿ ಸಮುಚಿತವಾಗಿ ಬೆರೆಸಿದ್ದರೆ, ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದಲ್ಲಿ ಅದು ಪ್ರಜ್ಞಾಪೂರ್ವಕವಾಗಿ ಬಳಕೆಯಾಗಿವೆ. ಪೂರ್ಣಚಂದ್ರ ತೇಜಸ್ವಿಯವರು ವಿಜ್ಞಾನದಲ್ಲಿ ಒಂದು ರೀತಿಯ ಧಾರ್ಮಿಕ ಶ್ರದ್ಧೆಯಿಂದ ಆರಾಧಿಸಿದ್ದಾರೆ. ಹಾಗೂ ಕಥನದ ವಿಶ್ಲೇಷಣೆಗೆ ಬಳಸಿದ ಆ ಚಿಂತನೆಗಳನ್ನು ಕಲೆಯ ಮಟ್ಟಕ್ಕೆ ಒಯ್ದಿದ್ದಾರೆ. ವೈಜ್ಞಾನಿಕ ಕತೆಗಾರ ಎಂಬ ಸಂಕುಚಿತಾರ್ಥ ಪದಕ್ಕೂ ವೈಜ್ಞಾನಿಕತೆಯನ್ನು ಬಳಸಿಕೊಳ್ಳುವ ವಿಶಾಲಾರ್ಥದ ಪರಿಕಲ್ಪನೆಗೂ ಅಜಗಜಾಂತರ ವ್ಯತ್ಯಾಸವಿದೆ.

ಕೇವಲ ಪಾತ್ರಗಳ ಕಾರಣಕ್ಕೆಂಬಂತೆ ಕತೆ ಸೃಷ್ಟಿಯಾಗಬೇಕಾದ ತುರ್ತನ್ನು ಪೂರ್ಣಚಂದ್ರ ತೇಜಸ್ವಿಯವರು ಎಂದಿಗೂ ಎದುರುಗೊಳ್ಳುವುದಿಲ್ಲ. ಐತಿಹ್ಯ ದಂತಕತೆಗಳೊಂದಿಗೆ ಸತ್ಯದರ್ಶನದ ಹಂಬಲವೇ ಸಾಹಿತ್ಯವಾಗುತ್ತದೆ. ಜುಗಾರಿ ಕ್ರಾಸ್‌ನಲ್ಲಿ ಪ್ಲಾಸ್ಟಿಕ್ ಬಳಕೆಯೇ ಮೇದರಹಳ್ಳಿಯ ಅವನತಿಗೆ ಕಾರಣವಾಗುವುದು. ಈ ಹೊತ್ತಿನ ವರ್ತಮಾನದ ಬಹುದೊಡ್ಡ ಸಮಸ್ಯೆಯ ಧ್ವನಿಯೂ ಆಗುತ್ತದೆ. ಇದನ್ನು ಸಮಕಾಲೀನಕತೆಯ ಅರ್ಥದಲ್ಲಿಯೇ ಗ್ರಹಿಸಬೇಕು.

ವಸ್ತು ತಂತ್ರ ಮತ್ತು ಅಭಿವ್ಯಕ್ತಿಯ ಏಕತಾನತೆಯ ಆಚೆಗೆ ಹುಡುಕಾಟದ ಪ್ರಶ್ನೆಯ ನೆಲೆಗಳೇ ಪ್ರಧಾನವಾಗುವಂತೆ ಈ ಲೇಖಕರ ಪ್ರಯತ್ನಗಳು ಕಾಣುತ್ತವೆ. ಪೂರ್ಣಚಂದ್ರ ತೇಜಸ್ವಿಯವರ ಶೈಲಿ ಹುಡುಕಾಟದ ಅಥವಾ ಶೋಧನೆಯ ನೆಲೆಯು ಮುಖ್ಯವಾಗಿರುತ್ತವೆ. ಪೂರ್ಣಚಂದ್ರ ತೇಜಸ್ವಿಯವರ ಹುಡುಕಾಟದಲ್ಲಿ ಎರಡು ಬಗೆಗಳಿವೆ. ಪರಿಸರ ಒಂದಾದರೆ ಮನುಷ್ಯನ ಹುಡುಕಾಟ ಎರಡನೆಯದು ಅವುಗಳ ಪರಸ್ಪರತೆಯ ಪ್ರಶ್ನೆಯ ಒಳಗೆ ವೈರುಧ್ಯಗಳ ಹುಡುಕಾಟ ತನ್ನಷ್ಟಕ್ಕಿರುವ ನಿಸರ್ಗ ಮತ್ತು ಸುಮ್ಮನಿರಲಾಗದ ಮನುಷ್ಯ-ಈ ನಡುವೆ ತನ್ನಿಷ್ಟಕ್ಕೆ ದೊಡ್ಡದಾಗಿರುವ ಬದುಕು. ಈ ಚಿಂತನೆಗಳ ವಿಭಿನ್ನ ನೆಲೆಗಳಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯವನ್ನು ವಿಶ್ಲೇಷಿಸಬಹುದು.

ಪೂರ್ಣಚಂದ್ರ ತೇಜಸ್ವಿಯವರ ಶೈಲಿಯಲ್ಲಿ ನಿರೂಪಣೆಯ ಶೈಲಿಯು ಬಹುಮುಖ್ಯವಾದುದು. ಕೃತಿಕಾರ ಕೃತಿಯಾಚೆಗಿದ್ದು ಹೇಳುವ ಮಾತು ಕಡಿಮೆ. ತಾನು ಒಳಗಿದ್ದು, ಅನುಭವಿಸುವಲ್ಲಿ ನಿಕಟವಾಗುವ ಆಲೋಚನೆ ದಟ್ಟವಾದಂತಿದೆ. ಭಾಷೆಯೂ

ಕ್ಲಿಷ್ಟವಾದುದಲ್ಲ. ಆಯಾಕತೆಯ ಹಂದರ ಅಪೇಕ್ಷಿಸುವ ಭಾಷೆ ತೀರಾ ಸಹಜವಾಗಿ ರೂಪುಗೊಳ್ಳುತ್ತದೆ. ಇವರ ನಿರೂಪಣೆಯ ವಿಧಾನದಲ್ಲಿ ಲಘು ಅನುಕರಣೆಯ ನಿರೂಪಣಾ ಮಾದರಿ ಇವೆ. ಈ ಲಘು ಅನುಕರಣೆಯ ಪರಿಕಲ್ಪನೆಯನ್ನು ಬಳಸಿದವರು ಕೆನಡಾದ ಮೀಮಾಂಸಕ ನಾರ್ಥ್‌ಫ್ ಫ್ರೈ. ಈ ನಿರೂಪಣಾ ವಿಧಾನವನ್ನು ಟಿ.ಪಿ. ಅಶೋಕರವರು 'ಕಾಮಿಕ್' ದೃಷ್ಟಿಕೋನ' ಎಂದು ಕರೆದಿದ್ದಾರೆ. ನಿರೂಪಕ ಎಲ್ಲಾ ಪಾತ್ರಗಳನ್ನು ದೂರ ನಿಂತುಕೊಂಡು ಒಂದು ವಿನೋದದ ಶೈಲಿಯಲ್ಲಿ ಆ ಪಾತ್ರಗಳ ವರ್ತನೆಯನ್ನು ಪರಿಶೀಲಿಸುತ್ತಾ ಸತ್ಯವನ್ನು ಗ್ರಹಿಸುವ ಕಲ್ಪನೆ ಇಲ್ಲಿದೆ.

''ಪೂರ್ಣಚಂದ್ರ ತೇಜಸ್ವಿಯವರು ವರ್ಣಿಸುವ ವಿದ್ಯಮಾನಗಳು ಏಕಕಾಲದಲ್ಲಿ ನಿರ್ದಿಷ್ಟ ಐತಿಹಾಸಿಕ ಸಂದರ್ಭಗಳಾಗಿಯೂ, ಮಾನವೇತಿಹಾಸಕ್ಕೆ ಅತೀತವಾದ ಸೃಷ್ಟಿಯ ರೀತಿಗಳಾಗಿಯೂ ಕಾಣುತ್ತವೆ. ಹೀಗೆ ಜೀವನವನ್ನು ಒಂದು ರೀತಿಯಾಗಿ ಪರಿಭಾವಿಸುವ ರೀತಿಯಿಂದಾಗಿ ಒಂದು ಬಗೆಯ ಕಾಮಿಕ್ ಧಾಟಿ ಪೂರ್ಣಚಂದ್ರ ತೇಜಸ್ವಿಯವರ ಬರವಣಿಗೆಗೆ ತಾನಾಗಿ ಬಂದು ಬಿಡುತ್ತವೆ. ಇದು ಅವರ ಒಟ್ಟಾರೆ ಜೀವನ ದೃಷ್ಟಿಗೆ ಸಂಬಂಧಪಟ್ಟ ಮಾತು ಎಂಬುದನ್ನು ಒತ್ತಿ ಹೇಳಬೇಕಿಲ್ಲ. ಕೇವಲ ಹಾಸ್ಯವನ್ನು ಸೃಷ್ಟಿಸುವುದು ಪೂರ್ಣಚಂದ್ರ ತೇಜಸ್ವಿಯವರ ಉದ್ದೇಶವಲ್ಲ, ಪೂರ್ಣಚಂದ್ರ ತೇಜಸ್ವಿಯವರ ಹಾಸ್ಯಲೇಖಕರೂ ಅಲ್ಲ, ವೈನೋದಿಕ ದರ್ಶನದಲ್ಲಿ ಅವರು ಎಲ್ಲವನ್ನು ಪರಿಭಾವಿಸುವುದು ಹಾಗಾಗಿ ಮನುಷ್ಯ ಸಂಬಂಧದ ಭೀಕರ, ಭೀಭತ್ಸ ಚಿತ್ರಗಳನ್ನು ಕಟ್ಟಿಕೊಡುವಾಗಲೂ ಪೂರ್ಣಚಂದ್ರ ತೇಜಸ್ವಿಯವರ ಬರವಣಿಗೆ ಅತಿ ಭಾವುಕತೆಗೆ ಅಥವಾ ರಂಜಕತೆಗೆ ಎಡೆಮಾಡಿಕೊಡುವುದಿಲ್ಲ. ಅದು ನಮ್ಮನ್ನು ದುಃಖ ಅಥವಾ ಕರುಣೆಗಳಲ್ಲಿ ಅದ್ದಿ ತೆಗೆಯುವುದಿಲ್ಲ. ಬದಲಿಗೆ ನಾವು ಎಲ್ಲವನ್ನೂ ಒಂದು ವೈನೋದಿಕ ಅಂತರದಿಂದ ಕಾಣುವ ಹಾಗೆ ಮಾಡುತ್ತದೆ.''[2]

ತೇಜಸ್ವಿಯವರ ಬರವಣಿಗೆಯಲ್ಲಿ ಮತಧರ್ಮ-ವಿಜ್ಞಾನ, ಗ್ರಾಮ-ಪಟ್ಟಣ, ಶೂದ್ರ-ಬ್ರಾಹ್ಮಣ, ಕನ್ನಡ-ಇಂಗ್ಲೀಷ್, ಪೂರ್ವ-ಪಶ್ಚಿಮ ಇಂಥ ದ್ವಿದಳ ವಿಭಜನೆಯ ಮಾರ್ಗದಲ್ಲಿ ಅವರಿಗೆ ಆಸಕ್ತಿ ಇಲ್ಲ. ಇವೆಲ್ಲದರಿಂದ ಸಂಶ್ಲೇಷಣೆಗೊಂಡ ಹೊಸ ಬದುಕಿನ ಕಾಣ್ಕೆಯತ್ತ ಅವರ ದೃಷ್ಟಿ.

2. ತೇಜಸ್ವಿ ಕಥನ - ಟಿ.ಪಿ. ಅಶೋಕ, ಪುಟ-22.

ಪೂರ್ಣಚಂದ್ರತೇಜಸ್ವಿಯವರ ಬರವಣಿಗೆಯಲ್ಲಿ ಸಂತ, ಋಷಿ ಪ್ರವಾದಿಗಳಿಲ್ಲ. ಈ ಎಲ್ಲಾ ಗುಣಗಳನ್ನು ಹೊಂದಿರುವವರು ಆ ಬಗ್ಗೆ ಪ್ರಜ್ಞಾಪೂರ್ವಕ ತಿಳುವಳಿಕೆಯೇ ಇಲ್ಲದ ಅನಕ್ಷರಸ್ಥರು ಮತ್ತು ಆಧುನಿಕ ವಿಜ್ಞಾನದ ಎಲ್ಲಾ ಸತ್ವವನ್ನು ಮೈಗೂಡಿಸಿಕೊಂಡ ಡಾಕ್ಟರ್ ಕುಬಿಯಂತಹ ವಿಜ್ಞಾನಿಗಳು ಮಾತ್ರ ಎಂಬುದು ಗಮನಾರ್ಹ. ವಿಜ್ಞಾನಿಯೇ ಸಂತನಾಗಬಲ್ಲ, 'ಅಜ್ಞಾನಿ'ಗಳೆಂದು ನಾವು ತಿಳಿದವರ ವಿಜ್ಞಾನದ ನೆಲೆ ನಮಗೆ ದಕ್ಕಬಲ್ಲ ಹೊಸ ನಾಗರೀಕತೆಯತ್ತ ಪೂರ್ಣಚಂದ್ರ ತೇಜಸ್ವಿಯವರ ಬರಹವಿದೆ.

ತಾನು ನಿಯಂತ್ರಿಸಲಾಗದ ಆಮೂರ್ತದ ಅಗಾಧತೆಯ ಎದುರು ಮನುಷ್ಯನ ಕ್ರಿಯೆಗಳು ಅರ್ಥಹೀನವಾಗಿಯೂ ಹಾಸ್ಯಾಸ್ಪದವಾಗಿಯೂ ಕಾಣುತ್ತವಷ್ಟೆ. ಇಂಥ ದರ್ಶನ ಪೂರ್ಣಚಂದ್ರ ತೇಜಸ್ವಿಯವರ ಮೊದಲ ಹಂತದ ಬರವಣಿಗೆಗಳಾದ 'ಯಮಳ ಪ್ರಶ್ನೆ', 'ನಿಗೂಢ ಮನುಷ್ಯರು' 'ಸ್ವರೂಪ'ಗಳಲ್ಲಿ ಸ್ಪಷ್ಟವಾಗಿಯೇ ಕಾಣುತ್ತವೆ.

ಪೂರ್ಣಚಂದ್ರ ತೇಜಸ್ವಿಯವರ ಬರವಣಿಗೆಯಲ್ಲಿ ಶಿಕ್ಷಣದ ಬಗೆಗಿನ ಕಾಳಜಿಯನ್ನು ಗಮನಿಸಬೇಕು. ''ಕಳೆದ ಮುನ್ನೂರು ವರ್ಷಗಳ ಗುಲಾಮಗಿರಿಯನ್ನು ನಾವಿನ್ನೂ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಆಡಳಿತ ಪದ್ಧತಿಯಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಮಹಾಯುದ್ಧಗಳಿಗೆ, ಆಟಂ ಬಾಂಬಿನ ಧಾಳಿಗೆ ತುತ್ತಾದ ದೇಶಗಳು ಸಹ ಸರ್ವನಾಶವಾಗಿದ್ದ ಸ್ಮಶಾನ ಸದೃಶ ದೇಶವನ್ನು ಬಹುಬೇಗ ಅಭಿವೃದ್ಧಿಪಡಿಸಿ ಮುಂದುವರಿದವು. ಸ್ವಾತಂತ್ರ್ಯ ಬಂದು ನಲವತ್ತು ವರ್ಷಗಳು ಕಳೆದರೂ ನಾವಿನ್ನೂ ಗುಲಾಮೀ ಸಂತತಿಯಾಗೇ ಮುಂದುವರಿಯುತ್ತಿದ್ದೇವೆ. ಇದನ್ನೆಲ್ಲಾ ಬದಲಿಸಬೇಕೆಂಬ ಇಚ್ಛಾಶಕ್ತಿಯು ಯಾರಲ್ಲಿಯೂ ಇಲ್ಲ. ಅಸಹ್ಯವಾದ ಅನುಕರಣೆಯಲ್ಲಿ ಕಾಲ ಕಳೆಯುತ್ತಿದ್ದೇವೆ. ನಮ್ಮ ವಿದ್ಯಾಭ್ಯಾಸವೇ ನಿಧಾನವಾಗಿ ಪರಕೀಯರನ್ನಾಗಿ ಮಾಡುತ್ತಿದೆ. ಪ್ರತಿಭಾವಂತರಾದ ವಿದ್ಯಾರ್ಥಿಗಳೆಲ್ಲರ ಹೃದಯದ ಆಳದಲ್ಲಿ ಪಾಶ್ಚಿಮಾತ್ಯರ ಆರಾಧನೆ ಹುದುಗಿರುತ್ತದೆ. ಎಲ್ಲರ ಆದರ್ಶದಲ್ಲೂ ಹೇಗೋ ಮಾಡಿ ವೀಸಾ ಗಿಟ್ಟಿಸಿ ಅಮೇರಿಕಾಕ್ಕೋ, ಇಂಗ್ಲೇಂಡಿಗೋ ಹೋಗಿಬಿಡಬೇಕೆಂಬ ಹಂಬಲ ಇರುತ್ತದೆ. ಮಕ್ಕಳಲ್ಲಿ ಇಂಥ ಕನಸುಗಳನ್ನು ಬಿತ್ತುತ್ತಾ ಬಾಯಲ್ಲಿ ನಾವು ಸನಾತನಧರ್ಮ, ದೇಶಪ್ರೇಮ, ಭಾರತೀಯತೆಯ ಬಗ್ಗೆ ಮಾತನಾಡುತ್ತೇವೆ. ಲಕ್ಷಾಂತರ ರೂಪಾಯಿ ಕ್ಯಾಪಿಟೇಶನ್ ತೆತ್ತು ಇಂಗ್ಲೀಷ್ ಮಾಧ್ಯಮದ ಕಾನ್ವೆಂಟ್ ಸ್ಕೂಲಿಗೆ ಸೇರಿಸುವ ಈ ಹಿರಿಯರ ಮಾತುಗಳನ್ನು ಮಕ್ಕಳು ಅನುಕರಿಸುತ್ತಾರೋ ಅವರ ನಡವಳಿಕೆಗಳನ್ನು ಅನುಕರಿಸುತ್ತಾರೋ ನೀವೇ ಯೋಚಿಸಿ ಹುಟ್ಟಿದ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದ

ಶಿಶುವಿಹಾರಗಳು ಇವೆಯೆಂದಾದ ಮೇಲೆ ಅಂಥ ಗುಲಾಮ ದೇಶಕ್ಕೆ ಉದ್ಧಾರ ಉಂಟೇ ಯೋಚಿಸಿ''.[3]

ಶಿಕ್ಷಣ ಪದ್ಧತಿಯ ಬಗ್ಗೆ ಬೇಸರ ಹೊಂದಿ ''ಈಗ ನಮ್ಮೆದುರಿರುವ ಭೀಕರ ಪ್ರಶ್ನೆ ನಮ್ಮ ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾಯಿಸಬೇಕೆಂದುದೇನೋ ಸರಿ. ಆದರೆ ಅದನ್ನು ಬದಲಾಯಿಸುವವರು ಯಾರು ? ಆರಂಭವಾಗುವುದು ಎಲ್ಲಿಂದ ? ಹೇಗೆ ? ಎನ್ನುವುದು ಕಾರ್ಯತಃ ಮಾಡುವುದಕ್ಕೂ ಮೊದಲು ತಾತ್ವಿಕವಾಗಿಯಾದರೂ ಒಗಟನ್ನು ಬಿಡಿಸಲು ನಮ್ಮಿಂದ ಸಾಧ್ಯವಿಲ್ಲ''.[4]

ಪರಿಸರದ ಬಗೆಗೆ ಮಕ್ಕಳಿಗೆ ಎಸ್.ಎಲ್.ಎಲ್.ಸಿ. ವರೆಗಾದರೂ ಸಹಜ ಅನುಭವದೊಂದಿಗೆ ಶಿಕ್ಷಣ ಕೊಡಬೇಕೆಂದು ಪೂರ್ಣಚಂದ್ರ ತೇಜಸ್ವಿಯವರ ಆಶಯ, ಪೂರ್ಣಚಂದ್ರ ತೇಜಸ್ವಿಯವರ ಬರವಣಿಗೆಯಲ್ಲಿ ಜಾಗತೀಕರಣ ಮತ್ತು ಪರಿಸರದ ಕಾಳಜಿಯು ಎದ್ದು ಕಾಣುವ ಅಂಶಗಳು, ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಕೃತಿಗಳಲ್ಲಿ ಜಾಗತೀಕರಣದ ಪ್ರಭಾವದಿಂದ ಸ್ಥಳೀಯ ಸಂಸ್ಕೃತಿ, ಗುಡಿಕೈಗಾರಿಕೆ, ಸ್ಥಳೀಯ ತಂತ್ರಜ್ಞಾನದ ಮೇಲೆ ಆಗುತ್ತಿರುವ ಆಕ್ರಮಣವನ್ನು ತೀವ್ರವಾಗಿ ವಿರೋಧಿಸುತ್ತಾರೆ. ಜಾಗತೀಕರಣದ ಪರಿಣಾಮವಾಗಿ ಭತ್ತದ ಮೇಲೆ, ಏಲಕ್ಕಿ ಮೇಲೆ ಸ್ಥಳೀಯ ಕೈಗಾರಿಕೆಗಳ ಮೇಲೆ ಆಗಿರುವ ದುಷ್ಪರಿಣಾಮಗಳನ್ನು ತಮ್ಮ ಕಾದಂಬರಿಗಳಲ್ಲಿ ಗುರುತಿಸಿದ್ದಾರೆ. ಇವರ ''ಜುಗಾರಿ ಕ್ರಾಸ್'' ಕಾದಂಬರಿಯಲ್ಲಿ ''ಮೇದರಳ್ಳಿಯ ಅವಸಾನ'' ಎಂಬ ಎರಡನೇ ಅಧ್ಯಾಯನವೇ ಇದಕ್ಕೆ ಸಾಕ್ಷಿಯಾಗಿದೆ. ಜುಗಾರಿ ಕ್ರಾಸ್ ಅನ್ನು ವಿಶ್ವಸಂಸ್ಥೆಯ ಮಾದಕ ವಸ್ತು ಜಾಲದ ವ್ಯಾಪ್ತಿಯಲ್ಲಿ ಗುರುತಿಸುವಂತೆ ಮಾಡಿದ್ದು ಜಾಗತೀಕರಣ. ಈ ಜಾಗತೀಕರಣ ಊರನ್ನು ಆ ಊರಿನ ಜನರನ್ನು, ಊರಿನ ಕಸುಬನ್ನು ಬಲಿತೆಗೆದು ಕೊಂಡಿತು. ಜಾಗತೀಕರಣ ಪರಿಣಾಮಗಳನ್ನು ಇಂದು ನಾವು ಎದುರಿಸುತ್ತಿರುವುದನ್ನು ಪೂರ್ಣಚಂದ್ರ ತೇಜಸ್ವಿಯವರು ಬಹಳ ಹಿಂದೆಯೇ ಗುರುತಿಸಿದ್ದರು.

ಕುವೆಂಪು ಅವರ ಬರವಣಿಗೆ ಸಮೃದ್ಧಗೊಳ್ಳುವುದು ಪ್ರಕೃತಿಯ ಜೀವಂತ ವಿವರಗಳಿಂದ. ಕುವೆಂಪು ಅವರಿಗೆ ಕಾಜಾಣದ ಸೌಂದರ್ಯ ಮತ್ತು ಅದರ ಧ್ವನಿ ಭಾವನಾತ್ಮಕವಾಗಿ ಮುಖ್ಯವೆನಿಸಿದರೆ, ಪೂರ್ಣಚಂದ್ರ ತೇಜಸ್ವಿಯವರಿಗೆ ಕಾಜಾಣದ

---

3. ತೇಜಸ್ವಿಯೊಳಗೊಬ್ಬ ಕಲಾವಿದ. ಪುಟ. 5
4. ತೇಜಸ್ವಿಯೊಳಗೊಬ್ಬ ಕಲಾವಿದ. ಪುಟ. 6

ಬದುಕಿನ ವಿವರಗಳು, ಅದರ ಸ್ವರೂಪದ ವಿವರಣೆಗಳಲ್ಲಿ ಹೆಚ್ಚು ಆಸಕ್ತಿ . ಆಷ್ಟರಮಟ್ಟಿಗೆ ಕುವೆಂಪು ಅವರ ಪ್ರಕೃತಿ ಪ್ರಿಯತೆಯ ಮುಂದುವರಿದ ಭಾಗವಾಗಿ ಪೂರ್ಣಚಂದ್ರ ತೇಜಸ್ವಿಯವರ ಪ್ರಾಕೃತಿಕ ವಿಜ್ಞಾನದ ಬರವಣಿಗೆಗಳಿವೆ.

''ಪ್ರಕೃತಿ ನಮ್ಮ ಬದುಕಿನ ಭಾಗವಲ್ಲ, ನಾವು ಪ್ರಕೃತಿಯ ಒಂದು ಭಾಗ. ಮನುಷ್ಯ ಒಂದು ಭಾಗ. ಮನುಷ್ಯ ಶಿಲಾಯುಗದಲ್ಲಿ ಪ್ರಕೃತಿಯನ್ನು ಎಷ್ಟು ಅವಲಂಬಿಸಿದ್ದನೋ ಈಗಲೂ ಅಷ್ಟೇ ಅವಲಂಭಿಸಿದ್ದಾನೆ ಎನ್ನುವುದು ವಾಸ್ತವ ಸಂಗತಿ. ನಮಗೆ ಬೇಕಾದ ಗಾಳಿ, ನೀರು ಆಹಾರಗಳಿಗೆ ಈವತ್ತು ನಾವು ಪ್ರಕೃತಿಯನ್ನೇ ಅವಲಂಭಿಸಿಲ್ಲವೇ ? ಮನುಷ್ಯ ತನಗೆ ಕರಗತವಾಗಿರುವ ತಂತ್ರಜ್ಞಾನದ ಸಹಾಯದಿಂದ ಅನೇಕ ಪ್ರತಿಕೂಲ ಪರಿಸರಗಳಲ್ಲೂ ಬದುಕಲು ಸಾಧ್ಯ ಮಾಡಿ ಕೊಂಡಿದ್ದಾನೆನ್ನುವುದು ನಿಜ. ಆದರೆ ಪ್ರಕೃತಿಯ ಅವಲಂಬನೆ ಮಾತ್ರ ಎಂದಿನಂತೆಯೇ ಇಲ್ಲವೇ ? ಮನುಷ್ಯ ಪ್ರಕೃತಿಯ ಭಾಗ ಮತ್ತು ಅದರೊಡನಿರುವ ಆತನ ಅವಿನಾಭಾವ ಸಂಬಂಧದ ಎಳೆಗಳು ತುಂಬಾ ಸೂಕ್ಷ್ಮವಾದವು, ಪರೋಕ್ಷವಾದವು, ಅನೇಕ ವೇಳೆ ಅಗೋಚರವಾದವು. ಆದ್ದರಿಂದಲೇ, ಪ್ರಕೃತಿಯಲ್ಲಿನ ಯಾವೊಂದರ ಅವಸಾನವೂ ಎಲ್ಲರ ಅವಸಾನದ ಮುನ್ನುಡಿಯನ್ನು ತಿಳಿಯುವುದು ಜನರಿಗೆ ಕಷ್ಟ. ಆಧುನಿಕ ನಾಗರೀಕತೆ ಮತ್ತು ವಿಜ್ಞಾನ ವಿಶ್ಲೇಷಣಾತ್ಮಕ ಪ್ರತಿಭೆಯ ಮೇಲೆ ನಿಂತಿದೆ. ಎಲ್ಲವನ್ನೂ ಬಿಡಿಸಿ, ಒಡೆದು, ಸೀಳಿ ಅರ್ಥ ಮಾಡಿಕೊಳ್ಳುತ್ತದೆ. ಈ ಮಾರ್ಗದಲ್ಲಿ ಮನುಷ್ಯನ ತಿಳುವಳಿಕೆ ಒಂದರ ಮೇಲೊಂದು ಇಟ್ಟಿಗೆ ಇಟ್ಟು ಕಟ್ಟಿದ ಹಾಗೆ ತರ್ಕಬದ್ಧವಾಗಿ ರೂಪುಗೊಳ್ಳುತ್ತದೆ. ಆದರೆ ಇಕಾಲಜಿಯ ಸತ್ಯಗಳನ್ನು ಅರಿಯಲು ಸಂಶ್ಲೇಷಣಾತ್ಮಕ ಪ್ರತಿಭೆ ಅಗತ್ಯ. ಅದು ಒಂದನ್ನೊಂದು ಸಂಯೋಜಿಸುವ ಖಂಡಖಂಡವಾಗಿ ಕಂಡದನ್ನು ಅಖಂಡವಾಗಿ ಗ್ರಹಿಸುವ ಸಂಶ್ಲೇಷಣಾ ಕ್ರಿಯೆ, ಭಾರತೀಯ ಸಂಸ್ಕೃತಿಗೆ ಇದೇನೂ ಹೊಸತಲ್ಲ. ಆದರೆ ನಮ್ಮ ಋಷಿಗಳೂ, ಅನುಭವಿಗಳೂ ಆಡಿದ ದಾರ್ಶನಿಕ ಸತ್ಯಗಳನ್ನು ಈವತ್ತು ಅವರಿಗಿಂತ ಹೆಚ್ಚು ಖಚಿತವಾಗಿ, ವೈಜ್ಞಾನಿಕವಾಗಿ, ನಿರ್ದಿಷ್ಟವಾಗಿ ಅಂಧಾನುಕರಣೆಯ ಅಗತ್ಯವಿಲ್ಲದಂತೆ ಇಕಾಲಜಿ ನಮಗೆ ತೋರಿಸಿಕೊಡುತ್ತಾ ಇದೆ. ಈ ಹೊಸ ವಿಧಾನದ ಪರಿಭಾವನೆ, ಅಲೋಚನಾಕ್ರಮ ಗ್ರಹಿಕೆ ನಮಗೆ ಸಿದ್ಧಿಸಿದ ಹೊರತೂ ಇಕಾಲಜಿಯ ಸತ್ಯಗಳನ್ನು ಅರಿಯುವುದು ಕಷ್ಟ ಅಲ್ಲಿಯವೆವಿಗೂ ಪರಿಸರದ ಬಗೆಗಿನ ನಮ್ಮ ಘೋಷಣೆಗಳೂ, ಸೆಮಿನಾರುಗಳೂ, ವೇದೋಪನಿಷತ್ತುಗಳ ಅರ್ಥವರಿಯದಗಪುರೋಹಿತರ ಗೊಣಗಾಟದಂತೆಯೇ ಅಸಂಗತವಾದುದು''.[5]

5. ತೇಜಸ್ವಿಯೊಳಗೊಬ್ಬ ಕಲಾವಿದ. ಪುಟ. 5

ಪರಿಸರ ನಾಶದ ಬಗ್ಗೆ, ಒಂದು ಸಂಸ್ಕೃತಿ ಕಣ್ಮರೆಯಾಗುತ್ತಿರುವ ಬಗ್ಗೆ ಗಾಢ ವಿಷಾದದಿಂದ ಬರೆಯುವಾಗಲು ಅದು ಅಳುಬುರುಕುತನವಾಗದಂತೆ ತಡೆಯುವ ಬೌದ್ಧಿಕ ವಿಧಾನವಾಗಿ ಕೂಡ ವಿನೋದ ದುಡಿಯುತ್ತದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅರ್ಥಪೂರ್ಣವಾದದ್ದನ್ನು ವೈಚಾರಿಕ ಭಾರವಿಲ್ಲದ ಸರಳ ಆಪ್ತ ಧಾಟಿಯಲ್ಲಿ ಸೂಚಿಸುವುದು ಲೇಖಕರಿಗೆ ಸಾಧ್ಯವಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ತೇಜಸ್ವಿಯವರ ಬರವಣಿಗೆಯ ಸ್ವರೂಪ ಸರಳ ನೈತಿಕ ನೆಲೆಗಳಲ್ಲಿ ತೀರ್ಪು ಕೊಡುವುದಿಲ್ಲ. ತಮ್ಮ ಸುತ್ತಲ ಪರಿಸರಕ್ಕೆ ಇಂದ್ರಿಯಗಳನ್ನು ತೆರೆದುಕೊಂಡು ಅವರ ರಹಸ್ಯವನ್ನು -ಅದು ಬಿಟ್ಟುಕೊಟ್ಟದ್ದು - ಭಾಷೆಯಲ್ಲಿ ಒಳಗೊಳ್ಳುವಂಥದ್ದು, ಗಾಢವಾದ ರಾಜಕೀಯ ಪ್ರಜ್ಞೆ, ಸಾಮಾಜಿಕ ಎಚ್ಚರ, ಸಾಂಸ್ಕೃತಿಕ ಕಾಳಜಿ ಇಟ್ಟುಕೊಂಡು ಬರೆಯುವಾಗಲೂ ತೇಜಸ್ವಿ ಸಾಕ್ಷಿ ಪ್ರಜ್ಞೆಯನ್ನು ಶುದ್ಧವಾಗಿಟ್ಟುಕೊಳ್ಳುವ ಪ್ರಬುದ್ಧರು. ಅವರು ಕೆಲವು ನಿಲುವುಗಳನ್ನು ತೆಗೆದುಕೊಳ್ಳುವುದಿಲ್ಲವೆಂದಲ್ಲ, ಆದರೆ ಅವುಗಳನ್ನು ಕಪ್ಪು-ಬಿಳುಪು ವರ್ಗೀಕರಣ ಮಾಡಿಕೊಳ್ಳುವುದಿಲ್ಲ ಅಷ್ಟೆ.

ಪಶ್ಚಿಮದ ವೈಜ್ಞಾನಿಕ ನಾಗರೀಕತೆ ಪ್ರಭಾವಿಸಿದ ಚಿಂತನೆ ಮತ್ತು ಪೂರ್ವದ ಪರಂಪರಾಗತ ಸ್ಥಳೀಯ ಸಾಮಾನ್ಯ ಜ್ಞಾನವನ್ನು ಆಧರಿಸಿದ ನಂಬಿಕೆಗಳ ನಡುವೆ ತಮ್ಮ ಧೋರಣೆಗಳನ್ನು ಖಚಿತಪಡಿಸಿಕೊಳ್ಳಲು ಇವೆರಡರ ಬಗ್ಗೆಯೂ ಏಕಮುಖ ಒಪ್ಪಿಗೆ ತಿರಸ್ಕಾರಗಳಿಲ್ಲದ ಅನುಮಾನಗಳನ್ನು ಕಾಯ್ದುಕೊಳ್ಳಲು ಈ ವೈನೋದಿಕ ಧಾಟಿಯು ಪೂರ್ಣಚಂದ್ರ ತೇಜಸ್ವಿಯವರಿಗೆ ಒದಗಿ ಬಂದಿದೆ.

ತೇಜಸ್ವಿರವರಿಗಾದ ಪ್ರಭಾವ ಮತ್ತು ಪ್ರೇರಣೆ

ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯ ಕೃತಿಗಳಿಗೆ ಪೂರಕ ಪ್ರಚೋದಕವಾದ ಅಂಶಗಳನ್ನು ತನ್ನ ಪರಿಸರದಿಂದ ತೆಗೆದುಕೊಂಡರು. ಬಹುಶಃ ಅವರು ಮೂಡಿಗೆರೆಗೆ ಹೋಗಿರದೇ, ಮೈಸೂರಿನ ಉದಯರವಿಯಲ್ಲೇ ವಾಸವಾಗಿದ್ದಿದ್ದರೆ ಅವರಿಂದ ಈ ಬಗೆಯ ಸಾಹಿತ್ಯ ಬರುತ್ತಿರಲಿಲ್ಲ. ಅವರು ಬೇರೆಂದು ಬಗೆಯ ಸಾಹಿತ್ಯವನ್ನು ನೀಡುತ್ತಿದ್ದರು. ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದ ಕೇಂದ್ರ ಪ್ರಜ್ಞೆಯೇ 'ಪರಿಸರ'

ಪರಿಸರ ಎಂದಾಕ್ಷಣ ಕೇವಲ ಮರ-ಗಿಡ-ಪಕ್ಷಿಗಳಷ್ಟೇ ಅಲ್ಲ. ಇಲ್ಲಿ ಸಾಮಾಜಿಕ ಪರಿಸರವಿದೆ. ಒಂದು ನೈಸರ್ಗಿಕ ಪರಿಸರವಿದೆ. ಬೌದ್ಧಿಕವಾದ ಪರಿಸರವೂ ಇದೆ. ಈ

ಕಾರಣದಿಂದ ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದ ಕೇಂದ್ರ ಪ್ರಜ್ಞೆ ಈ ಪರಿಸರ. ಪರಿಸರವೆಂದರೆ ಅಖಂಡವಾದ ಜಗತ್ತು. ಅದರೊಳಗಿರುವ ಮನುಷ್ಯರು, ಅವರ ಆಲೋಚನಾ ಕ್ರಮಗಳು, ಮಾಡುವ ರಾಜಕಾರಣ, ಅವರು ನಡೆಸುವ ಸರ್ಕಾರ, ಅವರು ಮರಗಿಡಗಳ ಮೇಲೆ ಉಂಟು ಮಾಡುವ ಪರಿಣಾಮ, ಅಲ್ಲಿರುವ ಗುಡ್ಡಗಳು, ಬೆಟ್ಟಗಳು ನದಿಗಳು, ನಾವು ಮಾಡುವ ರಾಜಕಾರಣದಿಂದ ಅವುಗಳ ಮೇಲಾಗುವ ಪರಿಣಾಮ ಈ ಎಲ್ಲವನ್ನೂ ಪ್ರಚೋದಿಸುವುದು. ಅವರ ಮನಸ್ಸೊಳಗೆ ಅಂತರ್ಗತವಾಗದಿರುವುದು ಆ ಪರಿಸರದ ವಿಸ್ಮಯ.

ಕಾರಂತರಿಗೂ ಕುವೆಂಪು ಅವರಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಕುವೆಂಪು ನೈಸರ್ಗಿಕ ಪರಿಸರವನ್ನು ಅವರ ಸಾಹಿತ್ಯದ ಅವಿಭಾಜ್ಯ ಅಂಗವಾಗಿ ಬಳಸಿಕೊಂಡರು. ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಾಗಲೀ, ವೈಚಾರಿಕ ಭಾಷಣ ಮಾಡಲು;ಅವರು ಅದರಲ್ಲಿ ನಾವು ಗಮನಿಸಬಹುದಾದ್ದು ಎಂದರೆ ಕುವೆಂಪು ಅವರನ್ನು ಅವರ ಪರಿಸರದಿಂದ ಪ್ರತ್ಯೇಕಿಸಲಾಗದ ಒಂದು ಮನೋಧರ್ಮ ಕಾಣಸಿಗುತ್ತದೆ. ಸಮಷ್ಠಿ ಪ್ರಜ್ಞೆ ಅವರ ಭಾಷೆಯಲ್ಲಿಯೇ ಅಂತರ್ಗತ ಆಗಿದೆ. ಪರಿಸರ ಅವರ ಸಾಹಿತ್ಯದಲ್ಲಿ ಬೆಸೆದು ಹೋಗಿದೆಯನ್ನಬಹುದು. ಆದರೆ ಕುವೆಂಪು ಮತ್ತು ತೇಜಸ್ವಿ ಅವರಿಗೂ ಇರುವ ವ್ಯತ್ಯಾಸವೆಂದರೆ ಕುವೆಂಪು ಪರಿಸರವನ್ನು ನೋಡಿ ದಿಗ್ಭ್ರಮೆಗೊಂಡು ಆಧ್ಯಾತ್ಮಕದೆಡೆಗೆ ಹೋಗಿ ಬಿಡುತ್ತಾರೆ ಒಂದು ಕೋಗಿಲೆ ಕೂಗಿದರೆ ರೋಮಾಂಚನ ಆಗುತ್ತೆ. ಆಮೇಲೆ ಈ ಕೋಗಿಲೆ ಕೂಗುತ್ತಿರುವುದು ''ಕುಹೂ, ಕುಹೂ, ಕುಹೂ ಕೋಕಿಲವಾಣಿ ಮೈಜಗ ಝುಮ್ಮೆಂದಿತು ಅದಕೇಳಿ'' ಎಂದು ಹೇಳುತ್ತಾ ಇದೊಂದು ದೇವರ ಲೀಲೆ ಎಂದು ಅದನ್ನು ಆದ್ಯಾತ್ಮೀಕರಣಗೊಳಿಸಿ ಬಿಡುತ್ತಾರೆ.

ತೇಜಸ್ವಿ ಅವರು ಅದಕ್ಕೊಂದು ಪರ್ಯಾಯ ವ್ಯವಸ್ಥೆಯನ್ನು ಸೃಷ್ಟಿಸಿದರು. ಆಧ್ಯಾತ್ಮೀಕರಣ ಎಲ್ಲೋ ಒಂದೆಡೆ ಧರ್ಮ ಮತ್ತು ಜಾತಿ ಈ ವ್ಯವಸ್ಥೆಗಳ ಜೊತೆಗೆ ತಳಕು ಹಾಕಿಕೊಂಡಿರುವುದರಿಂದ ಮತ್ತು ವೈಜ್ಞಾನಿಕ ಮನಸ್ಸೆಂದು ಕುವೆಂಪು ಹೇಳಿದರೂ ಕೂಡ ಆಧ್ಯಾತ್ಮಿಕತೆಯ ಮೂಲಕ ಮೌಢ್ಯಕ್ಕೆ ಕಾರಣ ಆಗುತ್ತದೆ ಎನ್ನುವುದನ್ನು ಗುರುತಿಸಿಕೊಂಡರು. ಆದುದರಿಂದಲೇ ತೇಜಸ್ವಿ ಅವರು ಕುವೆಂಪು ಅವರ ವೈಚಾರಿಕ ಚಿಂತನೆಗಳನ್ನೆಲ್ಲಾ ಕಲಾಸೃಷ್ಟಿ ಎಂದು ಮಾತ್ರ ತೆಗೆದುಕೊಂಡದ್ದು.

ಕಾರಂತರ ವೈಚಾರಿಕ ಪ್ರಜ್ಞೆ ಬಹಳ ಜಾಗೃತವಾಗಿದೆ. ಆದ್ದರಿಂದ ಕಾರಂತರಿಗೆ ಇಡೀ ಕಾಡು, ಬೆಟ್ಟಗುಡ್ಡ ಎಲ್ಲಾ ಹೇಗೆ ಕಾಣಿಸುತ್ತದೆ ಎಂದರೆ ಒಂದು ವಿಕಾಸದ ವೈಜ್ಞಾನಿಕ ದೃಷ್ಟಿಕೋನದ ವಿಶ್ಲೇಷಣಾತ್ಮಕವಾಗಿ ರೂಪಕವಾಗಿ ಕಾಣಿಸುತ್ತದೆಯಾದ್ದರಿಂದ ಅಲ್ಲಿ ನಿಸರ್ಗ ಮತ್ತು ಮನುಷ್ಯನಿಗಿರುವ ಸಂಬಂಧ ಯಾವುದು ಎಂದರೆ ನಿರಂತರವಾದ ಒಂದು ಸೆಣೆಸಾಟ ಅಥವಾ ಒಂದು ಹೋರಾಟ ಅದು 'ಕುಡಿಯರ ಕೂಸು', 'ಚೋಮನದುಡಿ' 'ಬೆಟ್ಟದ ಜೀವ' ಇತ್ಯಾದಿ ಕಾರಂತರ ಮುಖ್ಯವಾದ ಕೃತಿಗಳಲ್ಲಿ ಗುರುತಿಸಬಹುದು.

ಕಾರಂತರಿಗಿಂತ ಒಂದು ಭಿನ್ನವಾದ ರೂಪವನ್ನು ತೇಜಸ್ವಿ ಪರ್ಯಾಯವಾಗಿ ತೆಗೆದುಕೊಂಡರು. ಜೊತೆಗೆ ತೇಜಸ್ವಿಯವರಿಗೆ ತಮ್ಮ ನೈಜ ಅನುಭವದಿಂದಲೂ ಅದ್ಭುತವಾದ ಕಲಾ ಸೃಷ್ಟಿಯನ್ನು ಪಡೆದುಕೊಂಡರು. ಜೀವನ ಅನುಭವಗಳನ್ನು ತೆಗೆದುಕೊಂಡವರು ನಾಲ್ಕೈದು ಜನರು ಮಾತ್ರ. ಮೊದಲನೆಯವರು ಕುವೆಂಪು ಕಾವ್ಯದಲ್ಲಿ ಬೇಂದ್ರೆ, ಕಾದಂಬರಿಗಳಲ್ಲಿ ಕಾರಂತರು, ದಲಿತ ಸಾಹಿತ್ಯದಲ್ಲಿ ದೇವನೂರು ಮಹಾದೇವ, ಸಣ್ಣಕಥೆಗಳಲ್ಲಿ ಮಾಸ್ತಿ.

ತೇಜಸ್ವಿಯವರು ಬರೆದಿರುವುದರಲ್ಲಿ ಶೇಕಡ ಐವತ್ತುಅವರ ಅನುಭವ. ಇನ್ನುಳಿದಿದ್ದು ಅದನ್ನು ನೋಡಿ ಮಾಡಿದ್ದಾರೆ. ಅಲ್ಲದಿದ್ರೆ ಆಗಿ ಕೊಡಲಿಕ್ಕೆ ಆಗುವುದಿಲ್ಲ. ಸೈನ್ಸ್ ಥರ ಕೊಡಲಿಕ್ಕೆ ಆಗುವುದಿಲ್ಲ. ಅದರಿಂದಲೇ ಅವರು ಆಗಿರುವುದು.೧.

ನವ್ಯ ಸಾಹಿತ್ಯದಿಂದಲೂ ತೇಜಸ್ವಿಯವರು ಸಾಕಷ್ಟು ಪ್ರೇರಣೆಯನ್ನು ಪಡೆದಿದ್ದರು. ಆದರೆ ಅಬಚೂರಿನ ಪೋಸ್ಟಾಫೀಸು (೧೯೭೩) ಕಥಾ ಸಂಕಲನದ ಹೊತ್ತಿಗೆ ಅವರ ತಾತ್ವಿಕ ವಿಚಾರಗಳಲ್ಲಿ ಸಂಪೂರ್ಣ ಬದಲಾವಣೆ, ಸ್ವಂತಿಕೆ ಇದೆ. ಅಂದರೆ ನವ್ಯ ಸಾಹಿತ್ಯದ ಸಾಂಕೇತಿಕ ಗೊಂದಲಗಳಿಂದ ಮುಕ್ತಿ ಪಡೆದು ಬದುಕಿನ ಪ್ರಯೋಗ ಶೀಲತೆಯ ಕಡೆಗೆ ತೇಜಸ್ವಿ ಅವರ ವೈಚಾರಿಕತೆ ಮುನ್ನಡೆದಿರುವುದನ್ನು ''ಹೊಸ ದಿಗಂತದೆಡೆಗೆ'' ಅವರ ಸಂವೇದನೆಯು ಪಲ್ಲಟಗೊಳ್ಳುತ್ತಿರುವುದನ್ನು ಕಾಣುತ್ತೇವೆ. ಇದಕ್ಕೆ ಅವರೇ ಉತ್ತರಿಸುವಂತೆ---

''ನವ್ಯ ಕಾವ್ಯ ಚಳುವಳಿಯಿಂದ ದೂರವಾಗುವುದಕ್ಕೆ ಸಾಹಿತ್ಯೇತರ ಕಾರಣಗಳು ತುಂಬಾ ಇವೆ. ನಾನು ಎಂ.ಎ. ಮುಗಿಸಿ ನಂತರ ಲೋಹಿಯಾರವರ ಎಸ್.ಎಸ್.ಪಿ. ಪಕ್ಷ ಸೇರಿ ಸಮಾಜವಾದಿ ಚಳುವಳಿಗೆ ಧುಮುಕಿದೆವು. ನಾವು ಕ್ರಿಯಾತ್ಮಕ ಚಟುವಟಿಕೆಗಳಿಗೆ ತೊಡಗಿ ಕೂಡಲೇ ನವ್ಯಕಾವ್ಯದ ಸ್ಪಷ್ಟ ಧೋರಣೆಗಳೆಲ್ಲ ತುಂಬಾ ಅಸಮರ್ಪಕವಾಗಿ ಕಾಣತೊಡಗಿದವು. ಕನ್ನಡ ಸಾಹಿತ್ಯದ ಹಳೆಯ ಅನೇಕ ಆಂದೋಲನಗಳು ಒಂದು ಬಗೆಯ

ಪೂರ್ಣ ಪ್ರಮಾಣದ ಆಂದೋಲನಗಳು, ವಚನ ಸಾಹಿತ್ಯ ಚಳುವಳಿಯೇ ಆಗಲಿ, ನವೋದಯ ಚಳುವಳಿಯೇ ಆಗಲಿ, ಪ್ರಗತಿಶೀಲ ಸಾಹಿತ್ಯ ಚಳುವಳಿಯೇ ಆಗಲಿ, ಅದಕ್ಕೆ ಸಾಮಾಜಿಕ, ರಾಜಕೀಯ ಆರ್ಥಿಕ ಆಯಾಮಗಳೂ, ಉದ್ದೇಶಗಳೂ ಇದ್ದವು. ಹಾಗಾಗಿ ಆಯಾ ಸಾಹಿತ್ಯದ ಚಳುವಳಿಗೆ ಸಂವಾದಿಯಾಗಿ ಬೇರೆ ಬೇರೆ ಕ್ಷೇತ್ರಗಳಲ್ಲೂ ಆಂದೋಲನಗಳು ನಡೆಯುತ್ತಾ, ಅವೆಲ್ಲಕ್ಕೂ ಸಾವಯವ ಸಂವಾದ ಇರುತ್ತಿತ್ತು. ನವ್ಯ ಚಳುವಳಿಗೆ ಮಾತ್ರ ಅಂಥದ್ದು ಯಾವುದೂ ಇರಲಿಲ್ಲ. ಅದೊಂದು ಕೇವಲ ಸಾಹಿತ್ಯಾಸಕ್ತರ ನಡುವಿನ ಚಳುವಳಿಯಾಗಿತ್ತು. ಆದ್ದರಿಂದಲೇ ನಾವು ಕ್ರಿಯಾಶೀಲ ಆಂದೋಲನಗಳಿಗೆ ಕೈ ಹಾಕಿದ ಕೂಡಲೇ ಮೌಲ್ಯಗಳ ಘರ್ಷಣೆಯು ಶುರುವಾಯ್ತು.

''ನಾವು ಸಮಾಜವಾದಿ ಚಳುವಳಿಯಲ್ಲಿ ಪ್ರತಿಪಾದಿಸುತ್ತಿದ್ದ ಲೋಹಿಯಾ ಮೌಲ್ಯಗಳಿಗೂ ನವ್ಯ ಕಾವ್ಯದ ವಿಚಾರಧಾರೆಗೂ ಬಲವಾದ ಬೌದ್ಧಿಕ ಘರ್ಷಣೆ ಆರಂಭವಾಗಿ ನವ್ಯ ಕಾವ್ಯ ಸಂದರ್ಭದಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದ ಅಷ್ಟುಜನ ಬ್ರಾಹ್ಮಣೇತರ ಬರಹಗಾರರಿಗೆ ನವ್ಯ ಚಳುವಳಿ ಪಕ್ಕಾ ಪ್ರತಿಗಾಮಿಯಾಗಿ ಕಾಣತೊಡಗಿತು. ನಾನು ನವ್ಯ ಕಾವ್ಯಕ್ಕೆ ವಿದಾಯ ಹೇಳಿದ ಸಂದರ್ಭದ ಚಾರಿತ್ರಿಕ ಹಿನ್ನೆಲೆ ಇದು''[6]

''ಅಬಚೂರಿನ ಪೋಸ್ಟಾಫೀಸು'' ಕೃತಿಯ ಆರಂಭದಲ್ಲಿ ತೇಜಸ್ವಿಯವರು ತಮ್ಮ ಸಾಹಿತ್ಯ ಕೃತಿಗಳ ಹಿಂದಿನ ವೈಚಾರಿಕತೆ ಯಾವುದೆಂಬುದನ್ನು ಸ್ಪಷ್ಟವಾಗಿಯೇ ಘೋಷಿಸಿಕೊಂಡಿದ್ದಾರೆ. ಲೋಹಿಯಾರ ತತ್ವಚಿಂತನೆ, ಕುವೆಂಪು ಅವರ ಕಲಾಸೃಷ್ಟಿ, ಕಾರಂತರ ಜೀವನದೃಷ್ಟಿ ಮತ್ತು ಅವರ ಬದುಕಿನಲ್ಲಿ ಪ್ರಯೋಗ ಶೀಲತೆ ಈ ಮೂರೇ ಚೈತನ್ಯ ಶಕ್ತಿಯಾಗಬಲ್ಲವೂ ಎಂಬ ಧೋರಣೆಯನ್ನು ತಾಳುತ್ತಾರೆ.

ತೇಜಸ್ವಿ ಅವರ ಕೃತಿಗಳ ಅಧ್ಯಯನಕ್ಕೆ ತೊಡಗುವ ಮುನ್ನ ೧೯೬೦ರ ನಂತರದ ಕನ್ನಡ ಸಾಂಸ್ಕೃತಿಕ ಬದುಕಿನ ದಾಖಲೆಗಳನ್ನು ಪರಿಶೀಲಿಸುವುದು ಅಗತ್ಯವೆಂದು ತೋರುತ್ತದೆ. ಇದಕ್ಕೆ ಜಾತಿ ವಿನಾಶ ಸಮ್ಮೇಳನ, ೧೯೭೪ರ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ರಚನೆ ಮತ್ತು ಅದರ ಹೋರಾಟದ ಸ್ವರೂಪಗಳನ್ನು ಗಮನಿಸುವುದು ಸೂಕ್ತವಾದದ್ದು. ಡಾ. ಲೋಹಿಯಾ ಮತ್ತು ಪ್ರಪಂಚದ ಪರಿಸರ ಚಿಂತನೆಗದಳು ತೇಜಸ್ವಿ ಅವರ ಕೃತಿಗಳಲ್ಲಿ ಗಾಢವಾದ ಮೈ ಪಡೆದಿವೆ. ಪುರೋಹಿತ ಶಾಹಿ ವರ್ಗದ ಬೌದ್ಧಿಕ ದಬ್ಬಾಳಿಕೆ, ನವ್ಯ ಸಾಹಿತ್ಯದ ಯಾಂತ್ರಿಕತೆ ಹಾಗೂ ಸೀಮಿತಗೊಂಡ ಸಾಮಾಜಿಕ

6. ತೇಜಸ್ವಿ ಸಾಹಿತ್ಯಕೃಷಿ.

ಜವಾಬ್ದಾರಿಗಳ ಮತ್ತು ಕ್ರಾಂತಿಕಾರಕತನದ ಬಗ್ಗೆ ಅದು ತೆಗೆದುಕೊಂಡ ನಿರ್ಣಯಗಳು ಅವರ ಕೃತಿಗಳ ಹಿಂದೆ ಕೆಲಸ ಮಾಡಿವೆ.

ಸಮಾಜ ಸಾಹಿತ್ಯ ತತ್ವಜ್ಞಾನ ಮತ್ತು ವಿಜ್ಞಾನದ ವಿದ್ಯಾರ್ಥಿಯಾದ ತೇಜಸ್ವಿ ಅವರ ಸಾಹಿತ್ಯವನ್ನು ಅವಲೋಕಿಸಿದಾಗ ವೈಜ್ಞಾನಿಕ ಚಿಂತನೆಯ ದೃಷ್ಟಿಯಿಂದ ಅವರು ಎರಡು ಸಿದ್ಧಾಂತಗಳನ್ನು ಪ್ರಭಾವಿತರಾಗಿರುವುದು ಸ್ಪಷ್ಟವಾಗುತ್ತದೆ. ಮೊದಲನೆಯದು ಡಾರ್ವಿನ್ ಪ್ರಣೀತ ವಿಕಾಸವಾದ, ಎರಡನೆಯದು ಐನ್‌ಸ್ಟೀನ್, ಮ್ಯಾಂಕ್ಸ್ ಪ್ಲಾಂಕ್ ಇತರ ಭೌತ ವಿಜ್ಞಾನಿಗಳ ಕ್ವಾಂಟಂ ಮೆಕಾನಿಕ್ಸ್. ೧೮೫೯ರಲ್ಲಿ ಪ್ರಕಟವಾದ ಡಾರ್ವಿನ್ ಸಿದ್ಧಾಂತ ನಂತರದ ಒಂದು ದಶಕದ ಅವಧಿಯಲ್ಲಿ ಇಡೀ ಮನುಕುಲದ ಎಲ್ಲಾ ಬಗೆಯ ಚಿಂತನೆಯ ಮೇಲೆ ಗಾಢ ಪರಿಣಾಮ ಬೀರಿತು. ಸಾವಿರಾರು ವರ್ಷಗಳಿಂದ ಘನೀಕೃತವಾಗಿದ್ದ ಧಾರ್ಮಿಕ ನಂಬಿಕೆಗಳು ಬುಡಮೇಲಾದವು. ಅಷ್ಟೇ ಅಲ್ಲ ವಿಕಾಸವಾದ ಸಿದ್ಧಾಂತವನ್ನು ಎಲ್ಲಾ ಬಗೆಯ ಅಧ್ಯಯನಕ್ಕೆ ಬಳಸಬಹುದೆಂದು ತತ್ವಜ್ಞಾನಿ ಸ್ಪೆನ್ಸರ್ ಹೊಸ ನೋಟವೊಂದನ್ನು ಮಂಡಿಸಿದ. ಇದರಿಂದಾಗಿ ಸಾಹಿತ್ಯವೂ ಸೇರಿದಂತೆ ಎಲ್ಲಾ ಬಗೆಯ ಜ್ಞಾನದ ಶಿಸ್ತುಗಳು ವಿಕಾಸವಾದಕ್ಕೆ ಗೌರವ ತೋರಿಸಲಾರಂಭಿಸಿದವು. ಹದಿನೇಳನೆಯ ಶತಮಾನದಲ್ಲಿ ತಾತ್ವಿಕ ಚಿಂತನೆಯ ಮೇಲೆ ಗಣಿತ, ವಿಜ್ಞಾನ ಗಾಢ ಪ್ರಭಾವ ಬೀರಿದ ರೀತಿಯಲ್ಲಿಯೇ ಹತ್ತೊಂಭತ್ತನೆಯ ಶತಮಾನದ ತಾತ್ವಿಕ ಚಿಂತನೆಗೆ ವಿಕಾಸವಾದ ಬೆನ್ನೆಲುಬಾಯಿತು. ನಾಗರೀಕತೆ, ಸಂಸ್ಕೃತಿಗಳ ವಿಕಾಸವನ್ನು ಜೀವ ವಿಕಾಸದ ದೃಷ್ಟಿಕೋನದಿಂದಲೇ ನೋಡುವ ಪರಿಪಾಠ ಆರಂಭವಾಯಿತು. ಈ ವಿಕಾಸವಾದದ ನಿಯಮಗಳನು ತೇಜಸ್ವಿ ಅವರು ತುಂಬು ಗೌರವದಿಂದ ಆರಾಧಿಸಿದ್ದಾರೆ.

ವ್ಯಾಪ್ತಿಯ ವಿಸ್ತೃತತೆಯೇ ತೇಜಸ್ವಿ ಅವರ ಸಾಹಿತ್ಯದ ಮುಖ್ಯ ಲಕ್ಷಣ. ಆದ್ದರಿಂದಲೇ ಕರ್ವಾಲೋ, ನಿಗೂಢ ಮನುಷ್ಯರು, ಜುಗಾರಿಕ್ರಾಸ್, ಚಿದಂಬರ ರಹಸ್ಯ - ಕಾದಂಬರಿಗಳ ಒಳತೋಟಗಳೆಲ್ಲ ಒಂದು ನೇರದ ನೆಲೆಯಲ್ಲಿ ಶೋಧದ ವಿಸ್ತಾರಕ್ಕೆ ಮೈಚಾಚುತ್ತದೆ.

ಟಿ.ಪಿ. ಅಶೋಕರು ತೇಜಸ್ವಿಯವರ ಪ್ರತಿಭೆಯನ್ನು ಸಂಶ್ಲೇಷಣಾ ಪ್ರತಿಭೆಯ ಫಲ ಎಂದಿದ್ದಾರೆ. ತೇಜಸ್ವಿಯವರೇ ಪ್ರತಿಭೆಯ ಬಗ್ಗೆ ಕುರಿತು ''ಅಣ್ಣನ ನೆನಪು'' ನಲ್ಲಿ ವಿವರಣೆ ನೀಡಿದ್ದಾರೆ. ತೇಜಸ್ವಿ ಬರಹಗಳ ಹಿಂದಿನ ಪ್ರೇರಣೆ ಮತ್ತು ಸ್ವರೂಪಗಳ ಬಗ್ಗೆ ಕೆಲವು ಮಹತ್ವಪೂರ್ಣ ಒಳನೋಟಗಳನ್ನೆಲ್ಲ ''ಅಣ್ಣನ ನೆನಪು'', ''ಪರಿಸರದ ಕತೆ'' ಈ

ಎರಡು ಕೃತಿಗಳಲ್ಲಿ ಕಾಣಬಹುದಾಗಿದೆ. ತೇಜಸ್ವಿಯವರ 'ಅಣ್ಣನ ನೆನಪು'' ನಲ್ಲಿ ಬರೆಯುತ್ತಾ ''ಮನಸ್ಸಿನ ವ್ಯಾಪಾರದಲ್ಲಿ ನಾವು ಎರಡು ಬಗೆಯ ಅರಿವುಗಳನ್ನು ನೋಡಬಹುದು. ಒಂದು ವಿಭಜಿಸಿ ಪ್ರತ್ಯೇಕಿಸಿ ವಿವರಿಸಿ ಅರ್ಥಮಾಡಿಕೊಳ್ಳಬೇಕು. ಇದನ್ನು ನಾವು ವಿಶ್ಲೇಷಣಾತ್ಮಕ ಪ್ರತಿಭೆ ಎನ್ನುತ್ತೇವೆ. ಇನ್ನೊಂದು ಸಂಶ್ಲೇಷಣಾತ್ಮಕ ಪ್ರತಿಭೆ. ಒಂದರೊಳಗೊಂದನ್ನು ಮಿತಗೊಳಿಸಿ ಸಂಯೋಜಿಸಿ ಒಟ್ಟು ಮಾಡಿ ಒಟ್ಟಂದದಲ್ಲಿ ಅರ್ಥಮಾಡಿಕೊಳ್ಳುವುದು. ವಿಶ್ಲೇಷಣಾ ವಿಧಾನದಲ್ಲಿ ಬಿಡಿಬಿಡಿಯಾಗಿ ನೋಡುವ ಮನಸ್ಸುಗಳಿಗೆ ಪ್ರಶಂಶಿಸುವುದಾಗಲೀ, ಟೀಕಿಸುವುದಾಗಲೀ ಸುಲಭ. ಹಾಗೆಂದು ವಿಶ್ಲೇಷಣೆ ವಿವರಣೆ ತ್ಯಾಜ್ಯ ವಿಶ್ಲೇಷಣಾತ್ಮಕ ಪ್ರತಿಭೆ ಕೀಳಾದುದು ಎಂದು ನಾವು ತಿಳಿಯಬಾರದು. ಇಡೀ ಆಧುನಿಕ ಸಮಾಜವೇ ಮನುಷ್ಯನ ವಿಶ್ಲೇಷಣಾತ್ಮಕ ಪ್ರತಿಭೆಯ ಗಡಿಯಾಚೆಗೆ ನಿಲುಕದೆ ಉಳಿಯುತ್ತವೆ. ವಿಶ್ಲೇಷಿಸುತ್ತ, ವಿಭಜಿಸುತ್ತ ಬಹುದೂರ ಬಂದಿರುವ ನಮ್ಮ ವೈಜ್ಞಾನಿಕ ನಾಗರೀಕತೆಗೆ ಇದು ಪರಿಸರ ವಿಜ್ಞಾನ ಅಥವಾ ಇಕಾಲಜಿ ಸತ್ಯದ ಹೊಸ ಹೊಸ ಆವಿಷ್ಕಾರಗಳನ್ನು ಅರಿವಿನ ಸಂಶ್ಲೇಷಿತ ರೂಪಗಳನ್ನು ತೋರಿಸುತ್ತದೆ. ವಿಶ್ಲೇಷಣಾ ಪ್ರತಿಭೆಗೆ ಪರಿಮಿತಿಗಳಿರುವಂತೆಯೇ ಸಂಶ್ಲೇಷಣಾ ಪ್ರತಿಭೆಗೂ ಪರಿಮಿತಿಗಳಿರುತ್ತದೆ.[7]

ಈ ಹಿನ್ನೆಲೆಯಲ್ಲಿಯೇ ಟಿ.ಪಿ. ಅಶೋಕರು ತೇಜಸ್ವಿ ಚರ್ಚೆಯ ಅಂದಿನ ತಾತ್ವಿಕತೆಯನ್ನು ನಾವು ನಿರ್ಲಕ್ಷಿಸಬಾರದು. ಒಂದು ಒಟ್ಟಾರೆ ಜೀವನ ದೃಷ್ಟಿ ಎಂಬಂತೆ ಹೇಳುವುದಾದರೆ ತೇಜಸ್ವಿಯವರ ಪ್ರತಿಭೆ ಸಂಶ್ಲೇಷಣಾತ್ಮಕವಾದದ್ದು ಎಂದಿದ್ದಾರೆ.

ಒಟ್ಟಾರೆ ಹೇಳಬೇಕೆಂದರೆ ಕನ್ನಡ ಗದ್ಯದ ಮಟ್ಟಿಗಂತೂ ತೇಜಸ್ವಿಯವರು ಕಾರಂತ ಮತ್ತು ಕುವೆಂಪು ಅವರ ಅರ್ಥಪೂರ್ಣ ಮುಂದುವರಿಕೆ. ಕನ್ನಡ ಜನತೆ ತೇಜಸ್ವಿಯವರನ್ನು ಕೇವಲ ಲೇಖಕರೆಂದು ಭಾವಿಸಿಲ್ಲ. ಕುವೆಂಪು, ಕಾರಂತ, ಅನಂತಮೂರ್ತಿ, ಲಂಕೇಶ್, ಕೆ.ವಿ.ಸುಬ್ಬಣ್ಣ, ಕಂಬಾರ, ದೇವನೂರು ಮಹಾದೇವರಂತೆ ತೇಜಸ್ವಿಯವರನ್ನು ''ಸಾಂಸ್ಕೃತಿಕ ವ್ಯಕ್ತಿತ್ವ''ವೆಂದೇ ಭಾವಿಸಿದ್ದಾರೆ.

ಪ್ರಸ್ತುತ ಪ್ರಬಂಧದಲ್ಲಿ ತೇಜಸ್ವಿಯವರ ಕಥಾಸಂಕಲನಗಳಾದ 'ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಫೀಸು' ಮತ್ತು 'ಕಿರುಗೂರಿನ ಗಯ್ಯಾಳಿಗಳು' ಎಂಬ ಮೂರು ಕಥಾಸಂಕಲನಗಳನ್ನು ಈ ಅಧ್ಯಯನದಲ್ಲಿ ಆಯ್ಕೆಮಾಡಿಕೊಂಡಿದ್ದೇನೆ.

---

7 ತೇಜಸ್ವಿ ಸಾಹಿತ್ಯ ಕೃಷಿ - ಪುಟ-109.

ಅಧ್ಯಾಯ - ೨

ಮಾನವ ಮತ್ತು ಪ್ರಕೃತಿ ನಡುವಿನ ಸಂಘರ್ಷ

''ಪರಿಸರವೇ ಕೇಂದ್ರವನ್ನಾಗಿ ವಿಜ್ಞಾನವನ್ನೂ ಕನ್ನಡದಲ್ಲಿ ಜನಪ್ರಿಯಗೊಳಿಸಿದವರಲ್ಲಿ ತೇಜಸ್ವಿ ಮುಖ್ಯರಾಗಿದ್ದಾರೆ. ನಿಸರ್ಗದೊಂದಿಗಿನ ಮನುಷ್ಯ ಸಂಬಂಧಗಳನ್ನು ಹಾಸ್ಯಪ್ರಜ್ಞೆಯ ಮೂಲಕ ತಮ್ಮದೇ ಆದ ವಿಶಿಷ್ಟ ಅನುಕರಣಶೀಲವಲ್ಲದ ಭಾಷೆಯನ್ನು ಬಳಸುತ್ತಾರೆ. ನಿಸರ್ಗದ ಬಗ್ಗೆ ತೇಜಸ್ವಿಯವರಿಗಿರುವ ಗಾಢಪ್ರೇಮ ಅವರ ಎಲ್ಲಾ ಬರವಣಿಗೆಯಲ್ಲಿ ಕಾಣಬಹುದಾಗಿದೆ.''

ರೈತಾಪಿ ವರ್ಗದ ಕೃಷಿಯನ್ನು ಅವರು ಪ್ರಯೋಗ ಕ್ಷೇತ್ರವನ್ನಾಗಿಸಿಕೊಂಡು ಕೃಷಿಕರು ಎದುರಿಸುವ ಅನೇಕ ಸವಾಲುಗಳಿಗೆ ಉತ್ತರವನ್ನು ಕಂಡುಕೊಳ್ಳುತ್ತಾ ವಿನಾಶದ ಅಂಚಿನಲ್ಲಿರುವ ಕಾಡು, ಪರಿಸರನಾಶಕ್ಕೆ ಕಾರಣವಾಗುತ್ತಿರುವ ಘಟನೆಗಳನ್ನು, ವ್ಯಕ್ತಿಗಳನ್ನು ಕುರಿತು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ದಾಖಲಿಸಿದ್ದಾರೆ. 'ಶಿಕಾರಿ' ಎಂದರೆ ಪಂಚಪ್ರಾಣವಾದ ಇವರಿಗೆ ಪ್ರಾಣಿ-ಪಕ್ಷಿಗಳ ಚಲನವಲನ ವೀಕ್ಷಿಸಿ ಛಾಯಾಚಿತ್ರ ತೆಗೆಯುವ ಜೊತೆಜೊತೆಗೆ, ಶಿಕಾರಿಗಾರಿ ಕಾಯುತ್ತಿರುವಾಗ ಕಾಡಿನ ಮೌನ, ನಿಶ್ಯಬ್ಧದಲ್ಲಿ ತೂರಿಬರುವ ಶಬ್ಧದ ಗ್ರಹಿಕೆಗಳು ಅವರ ಬರಹಗಳಲ್ಲಿ ಸಹಜವಾಗಿ ಮೂಡಿಬಂದಿದೆ. ಶಿಕಾರಿ ಎಂದರೆ ಒಂದು ಸಾವು - ಬದುಕಿನ ಹೋರಾಟ. ಮಾನವನ ಬದುಕೇ ಒಂದು ಶಿಕಾರಿ ಎಂದೂ ಅರ್ಥೈಸುತ್ತಾರೆ. ಸ್ವತಂತ್ರವಾದ ವೈಚಾರಿಕತ ಆಲೋಚನೆಗಳನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ನಿಗೂಢತೆಗಳನ್ನು ಅನಾವರಣಗೊಳಿಸುತ್ತಾರೆ.

ವಿಷಯ-ವೈವಿಧ್ಯಗಳಿಂದ, ಪ್ರಕೃತಿ ಪರಿಸರಗಳು ಕುರಿತು ಸಂಶೋಧನೆ ನಡೆಸುತ್ತಾ ಇತಿಹಾಸ, ರಾಜಕೀಯ, ಮಾನವಶಾಸ್ತ್ರ ಮುಂತಾದ ವಿವಿಧ ಜ್ಞಾನಶಾಖೆಗಳನ್ನೂ ಓದುಗರಿಗೆ ಪರಿಚಯಿಸುತ್ತಾರೆ. ಜನರ ಮೌಢ್ಯ, ವಿಜ್ಞಾನದ ಮುನ್ನಡೆಗಳನ್ನು ತಮ ಪ್ರಖರವಾದ ಚಿಂತನೆಗಳ ಮೂಲಕ ಚಿತ್ರಿಸುತ್ತಾರೆ. ಕ್ಲಿಷ್ಟವಾದ ವಿಜ್ಞಾನ ವಿಸ್ಮಯಗಳನ್ನು ಪರಿಸರ ಕುರಿತ ವಿವರಗಳನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ಬರೆಯುತ್ತಾರೆ.

ಸಾಮಾನ್ಯ ಹಳ್ಳಿಯ ಮುಗ್ಧತೆ ಮತ್ತು ಇಂದಿನ ವಿಜ್ಞಾನ ವಿಷಯಗಳನ್ನು ಮುಖಾಮುಖಿಯಾಗಿಸಿ, ನಡೆಯುವ ಸಂಘರ್ಷಗಳನ್ನು ಯಶಸ್ವಿಯಾಗಿ ಕಟ್ಟಿಕೊಡುತ್ತಾರೆ.

ಜೀವನದ ದ್ವಂದ್ವಗಳನ್ನು ವಿಚಾರಶೀಲತೆಯನ್ನು ನವಿರಾದ ಹಾಸ್ಯಪ್ರಸಂಗಗಳ ಮೂಲಕ ಚಿತ್ರಿಸಿದ್ದಾರೆ. ವ್ಯಕ್ತಿಗಳ ನಡುವಿನ ಅಂತರಂಗ ಬಹಿರಂಗಗಳ ಘರ್ಷಣೆಗಳನ್ನು ವಿಶ್ಲೇಷಿಸುತ್ತಾ ಓದುಗರನ್ನು ಚಿಂತನೆಗೆ ಒಳಪಡಿಸುತ್ತಾರೆ. ಒಬ್ಬನೇ ವ್ಯಕ್ತಿ ಬೇರೆಯಾಗುತ್ತಾ ಆತನ ಸುತ್ತ ಇರುವ ಪ್ರಕೃತಿಯ ಅನುಭವಗಳೂ ವಿವಿಧ ಆಯಾಮ ಪಡೆದುಕೊಳ್ಳುತ್ತವೆ.

ತೇಜಸ್ವಿಯವರು ಪ್ರಕೃತಿಯನ್ನೇ ಒಂದು ವಿಸ್ಮಯವಾಗಿ ಕಾಣುತ್ತಾರೆ. ಪ್ರಕೃತಿಯೇ ಅವರಿಗೆ ಕೇಂದ್ರವಸ್ತು. ಇತರ ಪರಿಕರಗಳು ಆ ಪ್ರಕೃತಿಯೊಂದಿಗೆ ಸಮ್ಮಿಳಿತಗೊಂಡು ವ್ಯವಹರಿಸುತ್ತವೆ ಎಂದು ನಂಬಿದವರಾಗಿದ್ದಾರೆ

ಭೌತಪ್ರಪಂಚವೊಂದೇ ವಾಸ್ತವ ಎಂದು ತೇಜಸ್ವಿ ಎಂದೂ ನಂಬಿಲ್ಲ. ಕಾಣುವಿಕೆ ಮತ್ತು ಕಟ್ಟುವಿಕೆಯ ನಡುವೆ ಒಂದು ಇರುವಿಕೆ ಇದೆ. ಅದೇ ವಾಸ್ತವ ಪ್ರಪಂಚ ಎನ್ನುತ್ತಾರೆ.

ನಮ್ಮದಲ್ಲದ ಅನುಭವ ಲೋಕಕ್ಕೆ ಕಾಲಿಟ್ಟಾಗ ಪ್ರವೇಶಿಸಿದಾಗ ಅಲ್ಲಿ ವಿಸ್ಮಯ ಹುಟ್ಟುತ್ತದೆ. ಆ ವಿಸ್ಮಯವೇ ಪ್ರಕೃತಿ ಎನ್ನುತ್ತಾರೆ.

ತೇಜಸ್ವಿಯವರು ಪ್ರಕೃತಿಯಲ್ಲಿ ಅಡಗಿದ ಜೀವ-ಜಗತ್ತಿನ, ವಿಜ್ಞಾನದ ವಿಸ್ಮಯಗಳ ಬಗ್ಗೆ ಬರೆದಿದ್ದಾರೆ. ಹಕ್ಕಿಗಳ ಬಗ್ಗೆ, ನದಿ, ಸಮುದ್ರ, ಸಾಗರಗಳ ಬಗ್ಗೆ ಅಂತರಿಕ್ಷದ ವಿದ್ಯಮಾನಗಳ ಬಗ್ಗೆ. ಮನುಷ್ಯ ನಾಗರೀಕತೆಯ ವಿವಿಧ ಘಟ್ಟಗಳ ಬಗ್ಗೆ ಬರೆಯುವ ಅವರ ಕುತೂಹಲವು ಒಂದು ಪಾತ್ರದ ಭಾವಲೋಕದಿಂದ ಪ್ರಾರಂಭವಾಗಿ ಇಡೀ ಬ್ರಹ್ಮಾಂಡದತ್ತ ಹಬ್ಬಿದೆ. ಆದರೆ ಇದು ಕೇವಲ ಮಾನವಶಾಸ್ತ್ರೀಯ ಕುತೂಹಲವಲ್ಲದ (ದೃಷ್ಟಿಯಿಂದ ಸಮಷ್ಠಿಗೆ ಹಬ್ಬಿದೆ) ಈ ಜಗತ್ತಿನ ಜ್ಞಾನವನ್ನೇ ತನ್ನ ಮುಷ್ಠಿಯೊಳಗೆ ತಂದುಬಿಡುತ್ತೇನೆಂಬ ಗ್ರಾಹಕ ದುರಾಸೆಯಿಂದ ಅಲ್ಲದೆ ಇದೊಂದು ಬಗೆಯ ಆಧ್ಯಾತ್ಮಿಕ ಹುಡುಕಾಟ.

'ತೇಜಸ್ವಿ ಜಗತ್ತಿನಲ್ಲಿ ದೇವರು ಇಲ್ಲ. ದೇವರಿಲ್ಲದ ಜಗತ್ತಿನಲ್ಲಿ ಮತಧರ್ಮಗಳ ಸೋಂಕಿಲ್ಲದ, ಆಧ್ಯಾತ್ಮಿಕ ಶೋಧ ತೇಜಸ್ವಿ ಬರವಣಿಗೆಯ ಪ್ರಮುಖ ಲಕ್ಷಣ, ತನ್ನನ್ನು ಇಡೀ ಬ್ರಹ್ಮಾಂಡದ ಸಂಬಂಧದಲ್ಲಿ ಕಂಡುಕೊಳ್ಳುವ ಪ್ರಯತ್ನ ಇದಾಗಿದೆ. ಹಾಗೆಯೇ ತೇಜಸ್ವಿ ಮತಧರ್ಮಗಳಿಗೆ ಪರ್ಯಾಯವಾಗಿ ಆಧುನಿಕ ವಿಜ್ಞಾನವನ್ನು ಕೂಡ ಪರಮವೆಂದು ಭಾವಿಸುವುದಿಲ್ಲ. ಮತಧರ್ಮಗಳನ್ನು ವಿಮರ್ಶಿಸುವಂತೆ ಅವರು ವಿಜ್ಞಾನವನ್ನು ವಿಮರ್ಶಿಸುತ್ತಾರೆ. ಅಥವಾ ಅದನ್ನೂ ಹೀಗೂ ಹೇಳಬಹುದು. ಮತಧರ್ಮ - ವಿಜ್ಞಾನ, ಗ್ರಾಮ-ಪಟ್ಟಣ, ಶೂದ್ರ - ಬ್ರಾಹ್ಮಣ, ಕನ ನಡ-ಇಂಗ್ಲೀಷ್, ಪೂರ್ವ-ಪಶ್ಚಿಮ

ಇಂಥ ದ್ವಿದಳ ವಿಭಜನೆಯ ಮಾರ್ಗದಲ್ಲಿ ಅವರಿಗೆ ಆಸಕ್ತಿ ಇಲ್ಲ. ಇವೆಲ್ಲದರಿಂದ ವಿಶ್ಲೇಷಣೆಗೊಂಡ ಹೊಸ ಬದುಕಿನ ಕಾಣ್ಕೆಯತ್ತ ಅವರ ದೃಷ್ಟಿಯಿದೆ. ಪ್ರತಿಯೊಂದು ಅಂಶವು ಆಯಾ ಪರಿಸರದಲ್ಲಿ ಜರುಗುವಂತಹವಾಗಿದ್ದು ಅದೆಲ್ಲ ಪ್ರಕೃತಿಯ ಒಂದು ಭಾಗವಾಗಿ ಅಲ್ಲಿ ಪ್ರಕೃತಿ ಮತ್ತು ಮನುಷ್ಯನ ನಡುವೆ ಹೊಂದಾಣಿಕೆ ಸಾಧ್ಯವಾದರೆ ಅಲ್ಲಿ ಸೌಹಾರ್ದಯುತ ಬಂಧವು ಏರ್ಪಡುತ್ತದೆ. ಒಂದು ವೇಳೆ ಮಾನವ ಮತ್ತು ಆಯಾ ಪ್ರಕೃತಿ ನಡುವೆ ಹೊಂದಾಣಿಕೆ ಸಾಧ್ಯವಿಲ್ಲದಾದಾಗ ಅಲ್ಲಿ ಘರ್ಷಣೆ ಏರ್ಪಡುತ್ತದೆ.

ಒಟ್ಟಾರೆಯಾಗಿ ಮನುಷ್ಯನ ಜೀವನ ಎಂದರೇನೇ ಅದು ಪ್ರಕೃತಿ ನಡುವಿನ ಸೌಹಾರ್ದ ಮತ್ತು ಘರ್ಷಣೆಯಾಗಿದೆ.

ಹೀಗಾಗಿ ಪ್ರಕೃತಿಯ ಒಂದು ಭಾಗವಾದ 'ಸಾವು' ಎಂಬುದನ್ನು ಕೂಡ ಭಿನ್ನ ನೆಲೆಯಲ್ಲಿಯೇ ಅರ್ಥೈಸುತ್ತಾರೆ. ಅವರ ಪ್ರಕಾರ 'ಸಾವು' ಎಂದರೆ ಬದುಕುವುದು ಎಂದರ್ಥ.

ಆದರೆ ಸಾವು ವ್ಯಕ್ತಿ ಪರಿಪೂರ್ಣವಾದಾಗ ಅಂದರೆ ಪಕ್ವವಾದಾಗ ಬರುವಂತಹದ್ದಾಗಿರಬೇಕೆ ವಿನಃ ತಾನೇ ಸಾವಿಗೆ ಶರಣಾಗಬಾರದು. ಉದಾಹರಣೆಗೆ 'ಹೂವು-ಪಿಂದೆ-ಕಾಯಿ-ಹಣ್ಣು' ಹೇಗೋ ಹಾಗೆ 'ಬಾಲ್ಯ-ಯೌವ್ವನ (ಬ್ರಹ್ಮಚರ್ಯ)-ದಾಂಪತ್ಯ-ಮುಪ್ಪು' ಒಂದಾದ ನಂತರ ಮತ್ತೊಂದು ಜರುಗಬೇಕು. ಹಣ್ಣು ಹೇಗೆ ಒಪ್ಪವಾಗಿರುತ್ತದೋ ಹಾಗೆ ಮುಪ್ಪು ಸಹ ಮನುಷ್ಯನನ್ನು ಪರಿಪಕ್ವವಾಗಿರಿಸುತ್ತದೆ. ಅಲ್ಲಿಯವರೆಗೆ ಅವನು ಬದುಕಿದ್ದು ಸಾಧಿಸಬೇಕಾಗುತ್ತದೆ ಎನ್ನುತ್ತಾರೆ.

ಜೀವಜಗತ್ತಿನ ಅಪೂರ್ವ ವಿಸ್ಮಯವೊಂದನ್ನು ಪುಸ್ತಕದ ಜ್ಞಾನದಿಂದ ಪಡೆದಷ್ಟೇ ನೇರವಾಗಿ ಪ್ರಕೃತಿಯಿಂದಲೂ, ಜೀವನದಿಂದಲೂ ಪಡೆಯಬಹುದು ಎಂಬುದು ಅವರ ನಿಲುವಾಗಿದೆ. ಆದ್ದರಿಂದಲೇ ಅವನಿಗೆ ''ಯಾವುದು ಅಮುಖ್ಯವಲ್ಲ. ಯಾರೂ ಅಮುಖ್ಯರಲ್ಲ.'' ಅಲ್ಲಿ ಬರುವ ಒಂದು ಸಣ್ಣ ಜೀವ ಜಗತ್ತಿನಿಂದ ಹಿಡಿದು ಅಲ್ಲಿನ ಭೌತ ಮತ್ತು ಅಭೌತ ಎರಡೂ ಪ್ರಪಂಚದಲ್ಲೂ ಅವರು ಪ್ರಕೃತಿಯ ವಿಸ್ಮಯವನ್ನು ಕಾಣತೊಡಗುತ್ತಾರೆ.

ತೇಜಸ್ವಿಯವರು ಸಹ್ಯಾದ್ರಿಯ ಪರಿಸರದಿಂದ ಬಂದ ಕುವೆಂಪು ಅವರಂತೆಯೇ ಕನ್ನಡದಲ್ಲಿ ವಿಶಿಷ್ಟಸಾಹಿತ್ಯವನ್ನು ರಚಿಸಿದ್ದಾರೆ. ಮೂಡಿಗೆರೆಯನ್ನು ಕೇಂದ್ರವಾಗಿಸಿದ ಇವರ ಬರವಣಿಗೆಯಲ್ಲಿ ಪ್ರಕೃತಿಯ ಭವ್ಯದೃಶ್ಯ ಸೌಂದರ್ಯಗಳ ಮುಂದೆ ಮಗು ಸಹಜ

ಕುತೂಹಲ, ಅಪ್ಪಟ ಮುಗ್ಧತೆಗಳು, ಈ ಅಂಶಗಳನ್ನು ತಮ್ಮ ಸಾಹಿತ್ಯ ಸೃಷ್ಟಿಯಲ್ಲಿ ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ. ಇವರಿಗೆ ಮನೆ ಪರಿಸರಕ್ಕಿಂತ ಕಾಡು, ನ ದಿ, ಬೆಟ್ಟ, ಗುಡ್ಡ, ಕೊಳ, ಅಲ್ಲಿ ಈಜಾಡುವ ಮೀನು, ಹಕ್ಕಿ, ಪ್ರಾಣಿಗಳಲ್ಲಿ ಎಲ್ಲಿಲ್ಲದ ಕುತೂಹಲ ಕಾಣಬಹುದು.

ಇವರ ಆರಂಭದ ಬರಹವಾದ ''ಹುಲಿಯೂರಿನ ಸರಹದ್ದು'' ಕಥಾಸಂಕಲನದಲ್ಲಿ ಬರುವ 'ಸ್ವರೂಪ' ಮತ್ತು 'ನಿಗೂಡ ಮನುಷ್ಯನಲ್ಲಿ ಮಾನವ ಮತ್ತು ಪ್ರಕೃತಿ ನಡುವಿನ ಸಂಬಂಧವನ್ನು ಅನಾವರಣಗೊಳಿಸಿದ್ದಾರೆ.

'ನಿಗೂಢ ಮನುಷ್ಯರು' ಹೆಸರೇ ಸೂಚಿಸುವಂತೆ ಮನುಷ್ಯ-ಮನುಷ್ಯ ಮತ್ತು ಮನುಷ್ಯ -ಪ್ರಕೃತಿಗಳ ನಡುವಣ ಸಂಬಂಧದ ನಿಗೂಢತೆಯನ್ನು ಶೋಧಿಸ ಬಯಸುವ ಕೃತಿಯಾಗಿದೆ. ಒಂದು ಮಾನವೀಯ ಘಟನೆಯ ಮುಖಾಂತರ ಇಡೀ ಪರಿಸ್ಥಿತಿಯ ಅಸಂಗತತೆ ಮತ್ತು ಅಸಂಬದ್ಧತೆಗಳನ್ನು ಕಾಣಿಸುವುದು ತೇಜಸ್ವಿಯವರ ಪ್ರಧಾನ ಆಶಯವೆಂಬಂತೆ ತೋರುತ್ತದೆ. ಅರ್ಥಕ್ಕೆ ಸಿಗದ ಒಂದು ವಿಶ್ವಾತ್ಮಕ ವ್ಯವಸ್ಥೆಯಲ್ಲಿನ ಮನುಷ್ಯನ ಪಾಡನ್ನು ಧ್ಯಾನಿಸುವ ತತ್ವಶಾಸ್ತ್ರಕ್ಕೆ ಸಮೀಪವಾದಂತೆ ಗೋಚರಿಸುತ್ತದೆ.

ತೇಜಸ್ವಿ ಪ್ರಕಾರ ಬದುಕೇ ಒಂದು ತತ್ವ. ಈ ತತ್ವ ಮುಚ್ಚಿದ ತತ್ವವಲ್ಲ. ಅದು ಸತ್ಯವನ್ನು ಸದಾ ತೆರೆದಿಟ್ಟಿರುವ ಸತ್ಯದ ಎಲ್ಲಾ ಸ್ವರೂಪ, ಸಾಧ್ಯತೆಗಳಿಗೂ ತೆರೆದುಕೊಂಡಿರುವ ತತ್ವ ಇದು.

ಮನುಷ್ಯ ಎಷ್ಟೇ ನಿಗೂಢವಾಗಿದ್ದರೂ ಪ್ರಕೃತಿಯ ನಿಗೂಢತೆಯ ಎದುರು ಅಥವಾ ಎಲ್ಲಾ ನಿಗೂಢತೆಯೂ ಅನಾವರಣಗೊಳ್ಳಲೇ ಬೇಕಾಗುವ ಒಂದು ಸಾರ್ವತ್ರಿಕ ಸತ್ಯವನ್ನು ತೇಜಸ್ವಿಯ ಬರಹದಲ್ಲಿ ಕಾಣಬಹುದು.

ನಿಗೂಢ ಮನುಷ್ಯರು

ಕಿರು ಕಾದಂಬರಿ ಎಂದೇ ಕರೆಯಲ್ಪಡುವ ಅವರ 'ನಿಗೂಢ ಮನುಷ್ಯರು' ಕಥೆಯಲ್ಲಿಯೂ ವಸ್ತುವಿನ್ಯಾಸ ಪಾತ್ರಗಳ ಕ್ರಿಯೆಯಿಂದ ಅದು ಪಡೆದುಕೊಳ್ಳುವ ಆಳ-ಅಗಲಗಳು ಓದುಗರಿಗೆ ವಿಶಾಲವಾದ ಅನುಭವವನ್ನು ನೀಡುತ್ತದೆ. ಇಲ್ಲಿ ಮಾನವನ ಅಸ್ಥಿತ್ವದ ಬಗ್ಗೆ ಹುಟುಕಾಟವಿದೆ. ಅದೇ ಇಲ್ಲಿ ಕೇಂದ್ರ ''ವಿಮರ್ಶಕರು ಗುರುತಿಸಿರುವಂತೆ ಸ್ವರೂಪ ಮತ್ತು ನಿಗೂಢ ಮನುಷ್ಯರು'' ನಲ್ಲಿನ ಚಲನೆ ಚಿರವಾಸ್ತವದಿಂದ ಚರವಾಸ್ತವದ

ಕಡೆಗೆ ಸಾಗುತ್ತದೆ. ವ್ಯಕ್ತಿ ತಾನು ಏರ್ಪಡಿಸಿಕೊಳ್ಳುವ ಸಂಬಂಧಗಳು ಅದನ್ನು ಅರಿಯುವಲ್ಲಿ ಇರುವ ತೊಡಕುಗಳು ಕಥಾ ವಿನ್ಯಾಸದಲ್ಲಿ ಸಮರ್ಥವಾಗಿ ನಿರೂಪಿಸಲ್ಪಟ್ಟಿದೆ.

ಅವಿವಾಹಿತ ಬರಹಗಾರರಾದ ಜಗನ್ನಾಥ ಹಾಗೂ ಎಕ್ಸೈಸ್ ಖಾತೆಯಲ್ಲಿ ಪೋಲೀಸ್ ಆಗಿರುವ ಗೆಳೆಯ ರಂಗಪ್ಪರಿಬ್ಬರೂ ನಗುಬೀಡಿನಿಂದ ನವಿಲುಗುಂದದತ್ತ ಕಾರಿನಲ್ಲಿ ಹೊರಟಾಗ, ಅರಣ್ಯದ ನಡುವೆ ಹೊಡೆದ ಅನಿರೀಕ್ಷಿತ ಮಳೆಯಿಂದಾಗಿ 'ಉರಗಾಡಿ' ಊರಿನ ಸಮೀಪ ಕಾರಲ್ಲಿ ಸಿಕ್ಕಿಹಾಕಿಕೊಂಡು ಇಡೀ ರಾತ್ರಿಯೆಲ್ಲಾ ಕಾರಿನಲ್ಲಿ ಕಳೆಯುತ್ತಾರೆ. ಘಾಟಿಯ ಏರುತಗ್ಗು,ಪರ್ವತದ ತಿರುವು ರಸ್ತೆ, ಏರಿಳಿತ, ಸಾಲದಕ್ಕೆ ಅವ್ಯವಸ್ಥಿತ ರಸ್ತೆಯ ಹೊಂಡಗಳ ನಡುವೆ ಸರ್ಕಸ್ ಮಾಡಿ ಆಯಾಸಗೊಂಡ ಡ್ರೈವರ್ ಜಗನ್ನಾಥ ಯಂತ್ರ ಆರಿಸಿ ಸುಮ್ಮನೆ ಕುಳಿತಾಗ ಪಾತಾಳದಿಂದ ರಭಸವಾಗಿ ಹರಿಯುವ ಎಣ್ಣೆ ಹೊಳೆ' ನೀರಿನ ಸದ್ದು, ಭೋರೆಂದು ಬೀಸುವ ಗಾಳಿ, ಯಾವುದೋ ಜಲಪಾತದ ಧುಮು ಧುಮು ಧುಮ್ಮಿಕ್ಕುವ ಸದ್ದು ಕಾರನ್ನು ಬಿಡದೆ ಮೇಣದಂತೆ ಮಣ್ಣು, ಇದೆಲ್ಲಾ ಶುದ್ಧ ಪ್ರಕೃತಿಯ ಪರಿಕರಗಳೇ ಆಗಿದ್ದು ಈ ಪರಿಸರದಿಂದ ಪಾರಾಗಲಾರದ ಸ್ಥಿತಿ ಅವರದಾಗಿದೆ. ಇಲ್ಲೆಲ್ಲ ಪ್ರಕೃತಿಯ ವಿರುದ್ಧದ ಮಾನವನ ಯತ್ನ ಸಾಗದಾಗಿರುವುದು ಕಾಣಬಹುದು. ಆಗ ಜಗನ್ನಾಥ ಹೇಳಿದ. ''ರಂಗಪ್ಪಾ ಇನ್ನೇನು ಮಾಡುವಂತಿಲ್ಲ. ಹೀಗೆ ಬೆಳಗಿನವರೆಗೂ ಹೀಗೆ ಕುಳಿತಿರುವಾಗ ಆಮೇಲೆ ಹೇಗಾಗುತ್ತದೋ ಹಾಗೆ ಜಮೀನು ಇಲ್ಲಿ ಬೇಡವೆನ್ನುವುದಾದರೆ ಇನ್ನೊಂದು ಕಡೆ ಅದಕ್ಕೆ ಬೇಸರಿಸಬೇಡ''[1] ಎಂಬ ಮಾತು ಈ ಪರಿಸರದಿಂದ ಪಲಾಯನ ಮಾಡುವುದರ ಜೊತೆಗೆ ಬದುಕುವವನಿಗೆ ಒಂದೇ ದಾರಿಯಲ್ಲಿ ಹಲವು ಮಾರ್ಗ ಸ್ಥಳಗಳಿರುವ ವಾಸ್ತವತೆಯನ್ನು ಕಟ್ಟಿಕೊಟ್ಟರೂ ಅವರು ಮಳೆಯಿಂದ ಆಶ್ರಯ ಪಡದಂತಹ ಅವರದೇ ಆದ ಆಧುನಿಕತೆ ಬಿಂಬಿಸುವ ಕಾರು ಅವರಿಗೆ ಸಂಪೂರ್ಣ ಆಶ್ರಯ ನೀಡದಿರುವ ಚಿತ್ರಣವು ವ್ಯಕ್ತಿ ಎಲ್ಲೇ ಹೋದರೂ ನೈಜ ಪ್ರಕೃತಿಯ ವಿಸ್ಮಯದಿಂದ ಪಾರಾಗಲು ಅಸಾಧ್ಯ ಎಂಬುದನ್ನು ಚಿತ್ರಿಸುತ್ತದೆ.

''ಬಟ್ಟೆಯ ಟಾಪು ಅನೇಕ ಕಡೆ ಸೋರುತ್ತಿದ್ದಿತು. ಅನೇಕ ವರ್ಷಗಳ ಸರ್ವೀಸಿನಿಂದ ಅದು ಲಾಚಾರ್ ಆಗಿ, ಅವರೆಯ ಚಪ್ಪರದಂತೆ ಕಾಣುತ್ತ ಇದ್ದಿತು. ಒಳಗೆ ಸೋರುವ ಹನಿಗಳಿಂದ ತಪ್ಪಿಸಿಕೊಳ್ಳಲು ಕಂಬಳಿ ಹೊದೆಯದೆ ಅವರಿಬ್ಬರಿಗೂ ವಿಧಿಯೇ ಇರಲಿಲ್ಲ. ಬಟ್ಟೆಯ ಟಾಪಿನ ಮೇಲೆ ಮರಳು ಉರುಳಿದಂತೆ ಮಳೆಯ ಹನಿಗಳು ಒಂದೇ ಸಮನೆ ಗರಗರ

1 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ- 93.

ಬೀಳತೊಡಗಿದ್ದವು. ಇಬ್ಬರೂ ಹೆಚ್ಚು ಮಾತನಾಡದೆ ಈ ಮಳೆಯ ಏರಿಳಿತ ಅಬ್ಬಿಯ ಅಬ್ಬರ, ಥಂಡಿ ಇತ್ಯಾದಿಗಳ ನಡುವೆ ಇವಕ್ಕೇ ತೀರಾ ಅಪರಿಚಿತವಾದ ಜಗನ್ನಾಥನಿಗೆ ನಿದ್ದೆ ಹತ್ತಲಿಲ್ಲ.''[2]

ಇಲ್ಲಿ ಆಯಾ ಪರಿಸರದ ಪರಿಚಯವಿದ್ದರೆ ಮಾತ್ರ ಅಲ್ಲಿ ಸಾಮರಸ್ಯವಾಗಿ ಬದುಕಬಲ್ಲ ಎಂಬ ಧ್ವನಿ ಮಾರ್ನುಡಿಯುತ್ತದೆ.

ಪಾನಮತ್ತರಾಗಿ ತೂರಾಡುತ್ತಾ ಬಂದ ಗೋಪಾಲಯ್ಯನ ಆಳುಗಳನ್ನು ಕಂಡು ಯಾರೋ ಸಹಾಯಕ್ಕೆ ಬಂದರೆಂದು ಸಮಾಧಾನ ಪಡುವಷ್ಟರಲ್ಲೇ ಅವರು ಓಡಿದುದನ್ನು ನೋಡಿ ರಂಗಪ್ಪನ ಪೋಲೀಸ್ ಪ್ರಜ್ಞೆಯು ಇವರು ಕಳ್ಳರೋ, ಡಕ್ಕರೋ, ಕೊರಮರೋ, ದರೋಡೆಕೋರರರೋ ಎಂಬ ಗುಮಾನಿ, ಆತಂಕ, ಭಯಗಳಿದ್ದರೂ ಅದಕ್ಕಿಂತ ಕಠೋರವಾದ ಆ ಭೀಕರ ಪ್ರಕೃತಿಯ ಆರ್ಭಟವನ್ನು ಎದುರಿಸಿಲು ''ಈ ಜನವಿಹೀನ ಘೋರ ಕಾನನದಲ್ಲಿ ಕಳ್ಳಕೊರಮನಾದರೂ ಸಂಗತಿಗಿದ್ದರೆ ಸಾಕೆನ್ನುವಂತಿತ್ತು ಪರಿಸ್ಥಿತಿ.''[3] ಇಲ್ಲಿ ಮಾನವ ಸಮೂಹಜೀವಿಯಾಗಿದ್ದು ಅವನಲ್ಲಿ ಪರಸ್ಪರವಿರೋಧಗಳಿದ್ದರೂ ಅದನ್ನು ಸರಿಪಡಿಸಿ ಸಹಜೀವನ ಸಾಗಿಸಬಹುದಾದ ಒಂದು ಸಾಧ್ಯತೆಯನ್ನೂ ಹಾಗೂ ಪರಿಸರವೇನಾದರೂ ವಿಕೋಪಗೊಂಡರೆ ಅದರೊಂದಿಗೆ ಸಾಹಚರ್ಯದ ಅಸಾಧ್ಯತೆಯನ್ನು ತಿಳಿಯಬಹುದಾಗಿದೆ. ಓಡಿದ ಆ ಜನ ಪುನಃ ಹಿಂದಿರುಗಿದಾಗಲೂ ಅವರ ವೇಷಭೂಷಣ ದೈಹಿಕ ಚರ್ಯೆಯಿಂದ ಇವರ್‍ಯಾರೋ ಪ್ರಾಕೃತ ಮಾನವರು. ಪೈಶಾಚಿಕ ಭಾಷೆಯವರೋ ಎಂದುಕೊಂಡ ಜಗನ್ನಾಥನಿಗೆ ಗವಿಯಿಂದ ಹೊರಬಿದ್ದ ಅವರು ಕನ್ನಡ ಮಾತನಾಡಿದಾಗ ಸಮಾಧಾನವಾದಂತೆ ಬಂದಂತಹ ಆಳುಗಳಿಗೂ ಇವರು ಪೋಲೀಸಿನವರೆಲ್ಲವೆಂದು ತಿಳಿದು ಸಮಾಧಾನವಾಯ್ತು. ಬಂದ ನಾಲ್ವರೂ ಕೆಸರಿನಿಂದ ಕಾರನ್ನು ಪಾರು ಮಾಡಲು ವ್ಯರ್ಥಪ್ರಯತ್ನ ಮಾಡುವುದು ಪ್ರಕೃತಿಯಿಂದಾದ ಆ 'ಕೆಸರು' ಮಾನವನಿಂದ ಸಡಿಲಗೊಳ್ಳದ ಚಿತ್ರಣವನ್ನು ಚಿತ್ರಿಸಿದ್ದಾರೆ. ಇಲ್ಲಿ 'ಭಯ'ವು ಸ್ಥಾಯಿಭಾವವಾಗಿ ಬಂದಿದೆ ರಂಗಪ್ಪ ಜಗನ್ನಾಥನ ಕಡೆಗೆ ತಿರುಗಿ ''ನೀನು ಬಹಳ ಹೆದರುತ್ತೀ ಕಣೋ''[4] ಎಂದು ಹೇಳಿದರೂ ರಂಗಪ್ಪನೂ ಆ ಅತಿಮಾನುಷ ಭೀಕರತೆಗೆ ಹೆದರುತ್ತಲೇ ಇರುತ್ತಾನೆ.

---

2 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ- 94.

3 ಅದೇ ಪುಟ-95

4 ಅದೇ ಪುಟ-97

ಇಲ್ಲೇ ಉರುಗಡಿ ಎಂಬ ಊರಿನ ಗೋಪಾಲಯ್ಯನು ಸ್ಥಳೀಯನೇ ಆದಾರು. ಈ ಪ್ರಕೃತಿಯ ವಿಕೋಪಕ್ಕೆ ಚಿಂತಾಕ್ರಾಂತನಾಗುತ್ತಾನೆ. ಯಾಕೆಂದರೆ ''ಇನ್ನೂ ಮಳೆಗಾಲಕ್ಕೆ ಸೌದೆ ಮಾಡಿಕೊಂಡಿರಲಿಲ್ಲ. ಕೊಟ್ಟಿಗೆಗೆ ಹುಲ್ಲು ಹೊದಿಸಿರಲಿಲ್ಲ. ಇದೆಲ್ಲ ಒಟ್ಟಿಗೆ ಪ್ರಜ್ಞೆಗೆ ಬರುತ್ತದೆ.''[5]

ಜನಸಾಮಾನ್ಯರಲ್ಲಿಯು ನಮ್ಮ ಸುತ್ತಮುತ್ತಲ ನಡೆಯುವ ಘಟನೆಯೆಂದೇ ಭಾಸವಾಗುವಂತೆ ನೈಜ ರೀತಿಯ ಈ ವಿವರಗಳು ಕತೆಯಲ್ಲಿ ನಮ್ಮನ್ನು ಒಂದು ಭಾಗವಾಗಿಸಿ ಬಿಡುತ್ತದೆ. ಇಲ್ಲಿ ಮತ್ತೊಂದು ವರ್ಗವನ್ನು ಮುಖಾಮುಖಿಯಾಗಿಸುತ್ತಾರೆ. ಅವರೇ ಗೋಪಾಲಯ್ಯನ ಆಳುಗಳು ಮಳೆಗೆ ರೋಸಿದ್ದಾರೆ. 'ಈ ಸನಿ ಮಳೆ ಒಂದಿಲ್ಲದಿದ್ದರೆ' ಎಂಬ ನಿರುತ್ಸಾಹದ ಮಾತನ್ನಾಡಿದರು ಸಹ ಅವರಿಗೆ ಈ ರೀತಿಯ ಮಳೆಯೇ ಪ್ರಿಯವಾಗಿರುವುದನ್ನು ತೇಜಸ್ವಿ ಬಹುಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಯಾಕೆಂದರೆ ಆ ಆಳುಗಳಿಗೆ ಬಿಡುವಿನ ವೇಳೆಯೇ ಈ ಸಮಯ ಒಂದೇ ಸಮನೆ ಮಳೆಯಿಲ್ಲದಿದ್ದರೆ ಅವರು ದಿನವಿಡೀ ಒಡೆಯನ ತೋಟದಲ್ಲಿಯೇ ಯಾಂತ್ರಿಕವಾಗಿ ದುಡಿಯಬೇಕಾದ ಒಂದು ಕೆಳವರ್ಗದ ಸ್ಥಿತಿಚಿತ್ರಣವನ್ನು ಕಾಣಬಹುದು. ಇವರು ಈ ಸಂದರ್ಭದಲ್ಲಿ ಭೇಟೆಯಾಡಿ ಅಲ್ಲಿ ಸಿಕ್ಕ ಬೇಟೆಯನ್ನು, ಶರಾಬನ್ನು ಸವಿಯುವ ಸುದಿನ, ಸುಯೋಗವಾಗಿ ಕಂಡಿತ್ತು. ''ಏನೋ ಮರಸರ, ನಿನ್ನೆ ಸಾಯಂಕಾಲನೇ ಎಲ್ಲಿಗೋ ಹೋದಿರಂತಲ್ಲ. ಮಳೆ ಹಿಡಿದು ನಿಮಗೆ ಕೆಲಸಕ್ಕೆ ಕಳ್ಳಬೀಳಲು ಒಳ್ಳೆ ಲಾಯಕ್ಕಾಗಿದೆ.''[6] ಎಂದು ರೇಗಿದ ಗೋಪಾಲಯ್ಯನಿಗೆ ಕೆಳವರ್ಗದ ಕಾಂಪ್ರು, ಮರಸರ, ಕುಳಿಪ ಇಂತಹ ಪ್ರಶ್ನೆಗೆಲ್ಲ ಸಹಜ ಸುಳ್ಳುಗಳನ್ನು ನೇಯುತ್ತಿದ್ದರು. ಅಷ್ಟರಲ್ಲಿ ''ಏನೋ ಒಂದು ರೀತಿಯ ರುಮ್ ಎನ್ನುವ ಸದ್ದು ವಾತಾವರಣವನ್ನು ತುಂಬಿದ್ದರಿಂದ ಎಲ್ಲರೂ ಸ್ತಬ್ಧರಾದರು. ಗೋಪಾಲಯ್ಯನಿಗೆ ಆಕಾಶ ಮೊರೆದಂತೆ ಕೇಳಿಸಿದರೆ ಕಾಂಪ್ರನಿಗೆ ಕಾಲಡಿಯಲ್ಲಿ ಭೂಮಿ ಗುಡುಗಿದಂತಾಯ್ತು'ಎಲ್ಲರೂ ಭಯಭೀತರಾಗಿ ಮರಳಿದರು.''[7] ಇಲ್ಲಿ ಮನುಷ್ಯನ ಎಲ್ಲಾ ಜಗಳಗಳಿಗೂ ಅಂತ್ಯ ಪ್ರಕೃತಿಯೇ ಆಗಿದೆ. ಮೇಲ್ವರ್ಗಕ್ಕೆ ಕೆಳವರ್ಗ ಮಣಿದರೆ ಪ್ರತಿಯೊಂದು ಮಾನವ ವರ್ಗವೂ ಪ್ರಕೃತಿಗೆ ಮಣಿಯಲೇಬೇಕಾದ ವಾಸ್ತವತೆ ಇಲ್ಲಿ ಕಾಣಬಹುದು. ಕಾರನ್ನು ಕೆಸರಿಂದ ಹೊರತರುವಾಗ 'ಪಕ್ಕದಲ್ಲೇ ಇದ್ದ ಪ್ರಪಾತವನ್ನು ನೋಡಿ ಈ ಗೊಂದಲದಲ್ಲಿ ಕಾರು ಎಲ್ಲಿಯಾದರೂ ಅದರೊಳಗೆ ಬಿದ್ದರೇನು ಗತಿ ಎಂದು ಭಯಪಡುತ್ತಿದ್ದಂತೆಯೇ ಬಿರುಸಾಗಿ

5 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ-98

6 ಅದೇ ಪುಟ-99

7 ಅದೇ ಪುಟ-101

ಬೀಸುತ್ತಿದ್ದ ಗಾಳಿ ಭಯಂಕರ ವೇಗವನ್ನು ಮುಟ್ಟಿದ್ದರಿಂದ ಮಳೆಯ ಇಂಚಲು ಸೂಜಿಯಂತೆ ಚುಚ್ಚತೊಡಗಿದ್ದು ಗಾಳಿಯ ಬಿರುಸಿಗೆ ಮರಗಳು ನೆಲ ಮುಟ್ಟುವಂತೆ ಬಗ್ಗಿ ಬಗ್ಗಿ ಏಳುತ್ತಿದ್ದವು. ಈ ರೌದ್ರಾವತಾರವನ್ನು ನೋಡಿ ಎಲ್ಲರಿಗೂ ಜೊತೆಯಾಯ್ತು. ಗ್ರಹಚಾರ ಸರಿಯಿದ್ದರೆ ಮಳೆನಿಂತಮೇಲೆ ಕಾರು ಬರುತ್ತದೆಂದು ಸಾಹಸ ಕೈಬಿಟ್ಟ ರಂಗಪ್ಪ. ಜಗನ್ನಾಥ, ಗೋಪಾಲಯ್ಯನ ಮನೆಗೆ ತೆರಳುವಾಗ ' ಉಗ್ರಗಿರಿ' ಯಲ್ಲಿ ಉಗ್ರನರಸಿಂಹ ದೇವರು' ಇದ್ದಾನಂತೆ ಎನ್ನುವಷ್ಟರಲ್ಲೇ ಗಾಳಿ ಇನ್ನಷ್ಟು ರೌದ್ರಾವತಾರ ತಾಳಿ ಬೀಸಿದ್ದರಿಂದ ಮಳೆಯ ಹನಿಗಳು ಉಕ್ಕಿನ ಗುಂಡುಗಳಂತೆ ಠಾಪ್ ಠಾಪ್ ಎಂದು ಬಡಿಯತೊಡಗಿದವು. ಇಲ್ಲಿನ ಉಗ್ರಗಿರಿ ಇನ್ನೂ ಭಯಂಕರವಾಗಿ ಎಂಬಂತೆ ಭಾಸವಾಯಿತು. ಮನೆಗೆ ಮರಳಿದ ನಂತರ ರಂಗಪ್ಪ ಗೋಪಾಲಯ್ಯ, ಜಗನ್ನಾಥ ಎಲ್ಲ ತಮ್ಮ ಬಗೆಯ ನಿಜವನ್ನು ಸಂಪೂರ್ಣವಾಗಿ ಮರೆಮಾಚಿದ್ದರು. ಅದು ಮೂವರಿಗೂ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಆದರೆ ಯಾರಿಗೂ ಯಾರ ಬಗ್ಗೆಯೂ ಸತ್ಯಾನ್ವೇಷಣೆ ಬೇಕಿಲ್ಲದುದರಿಂದ ಮೂವರು, ರಹಸ್ಯವಾಗಿಯೇ ಸುಮ್ಮನಾದರು. ಆ ಹೊತ್ತಿನಲ್ಲಿ ಟೇಬಲ್ ಮೇಲಿನ ಲೋಟ ತಾವಾಗೆ ಅಲುಗಾಡುವುದನ್ನು ಕಿಟಕಿಯ ಕೊಕ್ಕೆಯ ಟಕ್‌ಟಕ್ ಶಬ್ಧ, ನೆಲದೊಳಗೆ ಝೇಂಕರಿಸುವ ಸದ್ದು ಚಲಿಸಿದ್ದನ್ನು ಕೇಳಿ ಮೂವರು ಎದ್ದು ನಿಂತರೂ ಗೋಪಾಲಯ್ಯ ತಕ್ಷಣ ಬಾಗಿಲು ತೆರೆದು 'ಗಿರಿಯ ನೆತ್ತಿಯನ್ನು ಅವಲೋಕಿಸಿದಾಗ ಗಿರಿಗೆ ಮೋಡ ಕವಿದಿತ್ತು. ಸದ್ದು, ಸ್ಪಂದನ ಎಲ್ಲಾ ನಿಂತ ಮೇಲೆ 'ಭೂಕಂಪ' ಎಂದು ತೀರ್ಮಾನಿಸಿದರು. ಇಲ್ಲಿ ಎರಡು ರೀತಿಯ ಪ್ರಕೃತಿವಿಕೋಪ ಕಾಣಬಹುದು ಒಂದು ಉಗ್ರಗಿರಿಯಿಂದಾಗುವ ಮಳೆ ಅದರ ಆರ್ಭಟ ಇದು ಗೋಚರ ಆದರೆ ಮತ್ತೊಂದು ಅಗೋಚರವಾದ ಆದರೆ ಅನುಭವಜನ್ಯವಾದ 'ಭೂಕಂಪ' ಆ ಪರಿಸರದವರನ್ನು ತಲ್ಲಣಕ್ಕೀಡು ಮಾಡುವುದರಿಂದ ಜೀವವನ್ನು ಕೈಹಿಡಿದು ಜೀವನ ಸಾಗಿಸುತ್ತಿರುತ್ತಾರೆ.

ಜಗನ್ನಾಥ ಗೋಪಾಲಯ್ಯ ಮುಖಾಮುಖಿಯಾಗಿ ಮಾತನಾಡಿದರೂ ಪರಸ್ಪರರಲ್ಲಿ ಸಂದೇಹದ ಸೆಳಕು ಕಾಡುತ್ತದೆ. ಜಗನ್ನಾಥ ಹಾಗೂ ಗೋಪಾಲಯ್ಯ ಇವರಿಬ್ಬರೂ ತಮ್ಮ ನಿಜಸ್ವರೂಪವನ್ನು ಮುಚ್ಚಿಟ್ಟು ನಿಗೂಢರಾಗಿ ಉಳಿಯಲು ಪ್ರಯತ್ನಿಸುತ್ತಾರೆ. ರಂಗಪ್ಪ ಮತ್ತು ಜಗನ್ನಾಥ ಬಾಲ್ಯದ ಗೆಳೆಯರಾಗಿದ್ದರು. ಪರಸ್ಪರರಲ್ಲಿ ಕೆಲವು ಸಂಗತಿಗಳಲ್ಲಿ ಅಪರಿಚಿತತೆ ಇಣಕುತ್ತಿರುತ್ತದೆ. ಈ ರೀತಿಯ ವ್ಯಕ್ತಿತ್ವದ ಬಹಿರ್ಮುಖತೆಯಲ್ಲಿ ಕಾಣುವ ನಿಗೂಢತೆಯನ್ನು ತೇಜಸ್ವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮೂರೂ ಜನರು ತಮ್ಮ ವರ್ತನೆಗಳಿಂದ ನಿಗೂಢವಾಗಿ ಕಾಣಿಸಿಕೊಳ್ಳುತ್ತಾರೆ. ಆದರೂ ಇಂತಹ ಸಂದೇಹದ

ವಾತಾವರಣದ ಮಧ್ಯೆಯೇ ಏನೇನೋ ಮಾತನಾಡುತ್ತಾ ಕಷ್ಟಸುಖಗಳನ್ನು ಹೇಳಿಕೊಂಡು ಪ್ರಕೃತಿಯ ಭಯಂಕರ ಭೀಕರತೆಯನ್ನು ಮರೆತು ಕಾಲಕಳೆಯುತ್ತಿರುತ್ತಾರೆ.

ಉಪನ್ಯಾಸಕ ವೃತ್ತಿ ಬೇಸತ್ತ ಜಗನ್ನಾಥ ಸಾಹಿತ್ಯಿಕ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುತ್ತಾನೆ. ಈಗ ಅವನಿಗೆ ಮಲೆನಾಡಿನಲ್ಲಿ ಜಮೀನನ್ನು ಕೊಂಡು ವ್ಯವಸಾಯ ಮಾಡಬೇಕೆಂಬ ಆಸೆ ಮೂಡಿದ ಕಾರಣದಿಂದಲೇ ರಂಗಪ್ಪ ಅವನನ್ನು ಉಗ್ರಗಿರಿಯ ಸಮೀಪದ ಕಾಡಿನಲ್ಲಿ ಜಮೀನು ತೋರಿಸಲು ಕರೆತಂದಿರುತ್ತಾನೆ. ಆದರೆ ಗೋಪಾಲಯ್ಯನ ಕಷ್ಟ-ನಷ್ಟ, ಕಾಡಿನ ಭಯಾನಕ ಜೀವನವನ್ನು ನೋಡಿ ಜಗನ್ನಾಥನಲ್ಲಿ ಭಯ ಮತ್ತು ಆತಂಕಗಳು ಹುಟ್ಟುತ್ತವೆ. ಗೋಪಾಲಯ್ಯನ ತೋಟದಲ್ಲಿ ಕೆಲಸ ಮಾಡುತ್ತಿರುವ ಕಾಂಪ್ರ, ಲೋರಿ, ಕುಳುಪ, ಮರಸರ ಮುಂತಾದ ಆಳುಗಳ ವಿಚಿತ್ರ ಜೀವನಶೈಲಿ, ಅಡಿಗೆ ಹುಡುಗನಾದ ಕರಿಯನ ಹಿನ್ನೆಲೆ, ಒಂದೇ ಒಂದು ಹೆಣ್ಣುಜೀವಿ 'ಶಾರಿ'ಯು ಜಗನ್ನಾಥನಲ್ಲಿ ವಿಸ್ಮಯವನ್ನು ಮೂಡಿಸುತ್ತವೆ. ಪ್ರಕೃತಿಯ ಈ ಭಯಾನಕ ರೌದ್ರಾವತಾರದಲ್ಲಿ ಗೋಪಾಲಯ್ಯ ಜಗನ್ನಾಥನಿಗೆ ತನ್ನ ಗತ ಬದುಕಿನ ಕಥೆ ಹೇಳುತ್ತಾನೆ. ಇಲ್ಲಿ ಅನೇಕ ವಿವರಗಳಿವೆಯಾದರೂ ಅದರ ಅರ್ಥಕ್ರಿಯೆಗೆ ಪೂರಕವಾದ ಗೋಪಾಲಯ್ಯ ಮತ್ತು ಜಗನ್ನಾಥರ ನಡುವೆ ನಡೆಯುವ ಮುಖಾಮುಖಿ ಸಂವಾದದಲ್ಲಿ ಕೇವಲ ಎರಡು ಮೂರು ದಿನಗಳಲ್ಲಿ ನಡೆಯುವ ಪ್ರಾಕೃತಿಕ ಜಗತ್ತಿನ ವಿಪ್ಲವಗಳಾದ ಆನಿಕಲ್ಲಿನ ಮಳೆ, ಮಿಂಚಿನ ಸೆಳೆತ, ಬಿರುಗಾಳಿ ಗುಡುಗಿನ ಆರ್ಭಟ, ಭೂ ಒಡಲಲ್ಲಿ ಓಡಾಡುವ ಭೂಕಂಪದ ಒತ್ತಡದಲ್ಲಿ ಒಬ್ಬರಿಗೊಬ್ಬರು ತೆರೆದುಕೊಳ್ಳುತ್ತಾರೆ. ಹಾಗೂ ತಮ್ಮ ತಮ್ಮ ಸತ್ಯಗಳನ್ನು ಮರೆಮಾಡಲು ಪ್ರಯತ್ನಿಸಿದರೂ ಪ್ರಕೃತಿಯ ಆ ಭಯಂಕರ ವಾತಾವರಣದಿಂದ ಹೊರಬರುವ ಸನ್ನಿವೇಶದಲ್ಲಿ ತನ್ನ ಯಾವ ಸತ್ಯವೂ ಉಳಿಯದೆ ತೆರೆದುಕೊಳ್ಳುವಂತೆ ಚಿತ್ರಿಸುವ ತೇಜಸ್ವಿಯವರು ಮನುಷ್ಯ ಇನ್ನೇನು ದುರಂತಕ್ಕೀಡಾಗುತ್ತೇನೆ, ಬದುಕುಳಿಯಲಾರೆ ಎಂಬ ಕಾಲ ಒದಗಿದಾಗ ತನ್ನೆಲ್ಲಾ ನಿಗೂಢತೆಯನ್ನು ಹೊರಹಾಕಿ ಸುಪ್ತಪ್ರಜ್ಞೆಯಲ್ಲಿರುವ ವಿಷಯಗಳನ್ನೆಲ್ಲ ವ್ಯಕ್ತಪಡಿಸಿ ನಿಶ್ಕಲ್ಮಶನಾಗಲು ಬಯಸುತ್ತಾನೆ ಎಂಬ ಒಂದು ವಾಸ್ತವಾಂಶವನ್ನು ಕಟ್ಟಿಕೊಡುತ್ತಾರೆ.

ಇಂತಹದ್ದೇ ಪ್ರಸಂಗ 'ಕುಬಿ ಮತ್ತು ಇಯಾಲ' ಕಥೆಯಲ್ಲಿಯೂ ತೇಜಸ್ವಿ 'ಲೋರಿ'ಯ ಪಾತ್ರದ ಮೂಲಕ ಅನಾವರಣಗೊಳಿಸಿದ್ದಾರೆ. ಕಿರಸ್ತಾನರ ಹುಡುಗಿ 'ಇಯಾಲಾ'ಳನ್ನು ಅತ್ಯಾಚಾರಗೈದು ಕೊಂದ ಸಂಗತಿಯು ಲೋರಿಯು ಸಾಯುವವರೆಗೂ

ನಿಗೂಢವಾಗಿದ್ದು ಡಾ. ಕುಬೀ ಹಾಗೂ ಜನರಿಗೆ ಒಂದು ಚಿದಂಬರ ರಹಸ್ಯವಾಗಿದ್ದರೂ ಸಹ ಲೋರಿ ಇನ್ನೇನು ತಾನು ಬದುಕುಳಿಯೆನು ಎಂದು ತಿಳಿದಾಗ ಅವನು ಸತ್ಯಕ್ಕೆ ಮುಖಮಾಡಿ ನಿಂತು ತಾನೇ ಆಕೆಯನ್ನು ಕೊಂದುದಾಗಿ ಹೇಳಿದ ಪ್ರಸಂಗವು ಇಲ್ಲಿ ಮನುಷ್ಯ ಪ್ರಕೃತಿಗೆ ಏಕೇ ತನಗೆ ತಾನೇ ಮೋಸಮಾಡಿಕೊಳ್ಳಲಾರದ ಒಂದು ಸನ್ನಿವೇಶದ ನಿರ್ಮಾಣವನ್ನು ತೇಜಸ್ವಿ ಮಾಡುವುದರ ಮೂಲಕ ಒಂದು ಸಿದ್ಧತತ್ವ ಹೊಡೆಯುತ್ತಾರೆ.

ನಿಗೂಢ ಮನುಷ್ಯರಲ್ಲಿ ಬರುವ ಗೋಪಾಲಯ್ಯನನ್ನು ಒಳಗೊಂಡು ಎಲ್ಲಾರೂ ಈ ವಾಸ್ತವ ಸತ್ಯಕ್ಕೆ ಮುಖಮಾಡಿ ನಿಲ್ಲುತ್ತಾರೆ. ಆ 'ಶಾರಿ'ಯೊಬ್ಬಳನ್ನೂ ಬಿಟ್ಟು ಬಹುಶಃ ಶಾರಿಯೂ ತನಗೆ ನಾಲಗೆ ಇದ್ದಿದ್ದರೆ ಎಲ್ಲಾ ಸತ್ಯವನ್ನು ಬಯಲಿಗೆಳೆಯುತ್ತಿದ್ದಳೋ ಏನೋ? ಅಥವಾ ತಾನು ಒಬ್ಬ ವಿದ್ಯಾವಂತೆಯಾಗಿದ್ದರೆ ಬರಹದ ಮೂಲಕವಾದರೂ ಚಿತ್ರಿಸುತ್ತಿದ್ದಳೇನೋ ಇಲ್ಲಿ ಅವಳು ಅನಕ್ಷರಸ್ತಳೇ ಇರಬೇಕು. ಏಕೆಂದರೆ ಎಲ್ಲಾ ರಹಸ್ಯ ಎಲ್ಲಿ ಬೇರೆಯವರಿಗೆ ಹೇಳಿಬಿಡುತ್ತಾಳೋ ಎಂಬ ಆತಂಕದಿಂದ ಆಕೆಯ ನಾಲಗೆಯನ್ನೇ ಕತ್ತರಿಸುವಂತ ಅಮಾನವೀಯ ಕೃತ್ಯಗೈದ ಕಳ್ಳಸಾಗಣೆದಾರರ ತಂಡ ಮತ್ತೊಂದು ಕಡೆ ರಕ್ತಸಿಕ್ತವಾದ ಶಾರಿಯನ್ನು ಬದುಕಿಸಿ ತನ್ನ ಮನೆಯಲ್ಲಿಯೇ ಗುಪ್ತವಾಗಿರಿಸಿಕೊಂಡು ಬಂದ ಗೋಪಾಲಯ್ಯನಲ್ಲಿ ಮಾನವೀಯ ಅಂತಃಕರಣವನ್ನು ಕಾಣಬಹುದು. ಏಕೆಂದರೆ ಎಲ್ಲಾ ರಹಸ್ಯಗಳನ್ನು ತನ್ನಲ್ಲೇ ಅಡಗಿಸಿಕೊಂಡು ಮೌನವಾಗಿರುವ ಶಾರಿ ಉಗ್ರಗಿರಿಯ ಚಿರವಾಸ್ತವದ ನಿಗೂಢವನ್ನು ಧ್ವನಿಸುವ ಪ್ರತಿಮೆಯಂತೆ ಕಾಣುವ ಈಕೆಯ ಸುತ್ತ ಅಪಾಯವೇ ಕಾದಿದೆ. ಆದರೂ ಅವಳಿಗೆ ಆಶ್ರಯ ನೀಡಿದ್ದಾನೆ. ಮಾತು ಸೀಮಿತ ವಿವರವಾಗಿದ್ದರೆ ಮೌನ ಅಪರಿಮಿತ ವಿವರಗಳನ್ನು ತನ್ನ ಗರ್ಭದಲ್ಲಡಗಿಸಿಕೊಂಡಿರುತ್ತದೆ. ಅದು ಏನೆಲ್ಲಾ ಊಹಾಪೋಹಗಳಿಗೂ ಎಡೆಮಾಡಿಕೊಡಬಲ್ಲದು ಜಗನ್ನಾಥನೇ ಗೋಪಾಲಯ್ಯ ಮತ್ತು ಶಾರಿಯ ನಡುವಿನ ಸಂಬಂಧ ಅನೈತಿಕವಾಗಿರುದೆಂದು ಊಹೆ ಮಾಡುವುದನ್ನು ಇಲ್ಲಿ ಸ್ಮರಿಸಬಹುದು.

ಮರಸರನದು ವಿಚಿತ್ರ ಸ್ವಬಾವವಾಗಿದೆ. ಶಿಲಾಯುಗದ ಆದಿಮಾನವನಂತೆ ಕಾಣುವ ಇವನ ವರ್ತನೆಯು ಇಡೀ ಸಮುದಾಯಕ್ಕೆ ಭಯ ಉಂಟಮಾಡುತ್ತದೆ. ಕಪಿಗಳನ್ನು ಹಿಡಿದು ತಿನ್ನುವ ಹಾಗೂ ಅವುಗಳ ತಲೆಬುರುಡೆಗಳನ್ನು ತನ್ನ ಜೋಪಡಿಗೆ ನೇತುಹಾಕುವುದರ ಜೊತೆಗೆ ತನ್ನ ಸ್ವಂತ ಮಗನ ಸತ್ತ ಹೆಣವನ್ನು ಮಣ್ಣು ಮಾಡದೆ ಹಾಗೆ ಎಸೆಯುವುದು ಇವನ ಸ್ವಭಾವವಾಗಿದ್ದು. ಆ ಹೆಣದಲ್ಲಿ ಉಳುಗಳು ಕಾಣಿಸಿಕೊಂಡರೂ ಆ ಹೆಣದ ಒಳಗೆ ಪಟಾಸನ್ನು ಹುದುಗಿಸಿಟ್ಟು ಹಂದಿಬೇಟೆಗಾಗಿ ಹೊಂಚುಹಾಕುವಂತಹ ಪೈಶಾಚಕ ಕೃತ್ಯಗಳಲ್ಲಿ

ತೊಡಗಿರುವುದು ಅವನ ವಿಚಿತ್ರ ನಡವಳಿಕೆಯನ್ನು ತೋರುತ್ತದೆ. ಇದು ಉಳಿದವರಿಗೆ ಭಯ, ದಿಗ್ಭ್ರಮೆ, ಆತಂಕ, ತಲ್ಲಣಗಳುಂಟಾದರು. ತೇಜಸ್ವಿಯವರು ಕೆಳವರ್ಗದವರ ಹಸಿವೆಯ ತೀವ್ರತೆಯನ್ನು ಹಾಗೂ ಮನುಷ್ಯ ಬದುಕಿದ್ದಾಗ ಅವನ ಯೋಗಕ್ಷೇಮ ಮುಖ್ಯವಾದುದೇ ಹೊರತು ಅವನು ಸತ್ತಾಗ ಅಲ್ಲ. ಆ ಮಗುವಿನ ಅಂತ್ಯದಲ್ಲೂ ತಾನು ಬದುಕುಳಿಯುವ ಮರಸರನ ಜೀವನ ಪ್ರೀತಿಯ ವಾಸ್ತವ ಸತ್ಯವನ್ನು ಹೇಳುತ್ತಾರೆ. ಮರಸರನ ಪ್ರೀತಿಯನ್ನು ಬಹಳ ಸೂಕ್ಷ್ಮವಾಗಿ ಚಿತ್ರಿಸುವ ತೇಜಸ್ವಿಯವರ ಈ ಪಾತ್ರ ಇತರರಿಗೆ ಅಸಹ್ಯದ ಜೊತೆಗೆ ಭಯವನ್ನು ಹುಟ್ಟಿಸುತ್ತದೆ. ಲೋಕದಲ್ಲಿ ಬಹುತೇಕರು ಬದುಕಿದ್ದಾಗ ಅವರು ಇತರರು ಗತಿಸಿದಾಗ ಮಾಡುವ ತೋರ್ಪಡಿಕೆಯ ಆಡಂಬರದ ಶವಸಂಸ್ಕಾರವನ್ನು ನಿರಾಕರಿಸುತ್ತಾರೆ. ತದ್ವಿರುದ್ಧವಾಗಿ ಬದುಕಿದ್ದಾಗಲೇ ಸತ್ಕಾರ ಮಾಡಿದ್ದರೆ ಇನ್ನಷ್ಟು ಕಾಲ ಅವರು ಬದುಕುಳಿಯುತ್ತಿದ್ದರು. ಇದು ಪ್ರಸ್ತುತ ಸಮೀಕ್ಷೆ ಕಾಂಪ್ರನ ತಾಯಿ ಸತ್ತಾಗ ಇಲ್ಲೇ ಮಣ್ಣು ಮಾಡಿದ್ದರಿಂದ ಮರಸರನು ತನ್ನ ಮಗನ ಶವವನ್ನು ಅಲ್ಲೇ ಬಿಸಾಡಿದ್ದರ ಕಾರಣ ತಾನು ಅದನ್ನು ಸ್ಮಶಾನವೇ ಎಂದು ತಿಳಿದದ್ದೇ ಆಗಿದೆ. ಇಲ್ಲಿ ರೂಢಿಯು ಅನುಕರಣೆಯಿಂದ ಬಂದದ್ದೇ ಆಗಿದೆ. ''ಇಲ್ಲಾ ಸುಟ್ಟು ಬೂದಿ ಮಾಡು, ಇಲ್ಲಾ ಮಣ್ಣು ಮಾಡು. ಅದು ಬಿಟ್ಟು ಹೊರಕ್ಕೆ ಎಸೆಯಲು ಸಾಧ್ಯವಿಲ್ಲ ಎಂದ ಗೋಪಾಲಯ್ಯನ ಮಾತಿಗೆ ಮರಸರನು ಅದು ಹೇಗಯ್ಯಾ ? ನಮ್ಮ ಜಾತಿ ಪರ್ಕಾರ ಮಾಡಿದರೆ ನೀವು ಇಲ್ಲಾ ಅನ್ನಾಕಾಗ್ತದ''[8] ಎಂಬ ಮಾತು ಪ್ರತಿಯೊಂದು ಆಚರಣೆಯು ಅವರ ನಂಬಿಕೆಗೆ ಬಿಟ್ಟದ್ದು ಅದು ಆಹಾರಸೇವನೆಯಲ್ಲಿ ಸಂಸ್ಕೃತಿ ಆಚರಣೆಯಾಗಲೀ ಅವರ ಅಭಿರುಚಿಗೆ ಸಂಬಂಧಿಸಿದ್ದು ಎನ್ನುತ್ತಾರೆ. 'ಸಣ್ಣ ಮಕ್ಕಳ ಹೆಣ ಮಣ್ಣು ಮಾಡಿದರೆ ಅವು ಪುನಃ ಹುಟ್ಟುವುದಿಲ್ಲ' ಎಂಬ ನಂಬಿಕೆ ಮರಸರನದು.

ತೇಜಸ್ವಿಯವರು ಗೋಪಾಲಯ್ಯ, ಶಾರಿ, ಜಗನ್ನಾಥರಂತಹ ನಿಗೂಢ ವ್ಯಕ್ತಿಗಳನ್ನು ನಿರೂಪಿಸುವುದರ ಜೊತೆಗೆ ಬೇರೆ ಬೇರೆ ಗುಣಸ್ವಭಾವದ ಅನಾಗರಿಕ ಜಗತ್ತಿನ ಮರಸರ, ಕಾಂಪ್ರರಂತಹ ಪಾತ್ರಗಳನ್ನು ಪರಿಚಯಿಸಲೆಂಬಂತೆ ಗೋಪಾಲಯ್ಯನವರು ಜಗನ್ನಾಥನಿಗೆ ''ನೋಡಿ ಹೇಗಿದೆ ವಿಚಿತ್ರ ಪ್ರಪಂಚ, ಬ್ರಾಹ್ಮಣ ಪ್ರಪಂಚಕ್ಕೆ ಹೇಸಿದಿರಲ್ಲಾ, ಅದರಿಂದ ಒಂದು ಹಂತ ಕೆಳಗಿಳಿದರೆ ಲೇವಾದೇವಿಯ ಲೆಕ್ಕಾಚಾರದ ವೈಶ್ಯ ಪಿಶಾಚಿ, ನರಭಕ್ಷಕ ಪ್ರಪಂಚ, ನೋಡಿ ಹೇಗಿದೆ....ಈ ಮಳೆ ಹೀಗೆ ನಾಲ್ಕುದಿನ ಹಿಡಿಯಲಿ ನಮ್ಮನ್ನೇ ತಿಂತಾನೆ ಇವನು''[9] ಎಂದು ಹೇಳುವುದರ ಮೂಲಕ ಹಸಿವಿನ ತೀವ್ರತೆ ತಾಳದ ಮರಸರನ ನರಭಕ್ಷಕ

8 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ- 109

9 ಅದೇ ಪುಟ-124

ಪ್ರವೃತ್ತಿಯನ್ನು ಪರಿಚಯಿಸುತ್ತಾರೆ. ಅನುಭವದ ಶೋಧಕ್ಕಾಗಿ ಕಾಡಿನ ಅಂಚಿಗೆ ಬರುವ ಜಗನ್ನಾಥ ಪಡೆಯುವಖ ತೀಕ್ಷ್ಣ ಸಂವೇದನೆಗಳು ನಾಗದರೀಕ ವಿಸ್ಮೃತಿಯ ಸಂಕೇತವಾಗಿ ಕಂಡುಬರುತ್ತವೆ.

ಪ್ರತಿಯೊಂದು ಪಾತ್ರವು ತಾವಿರುವ ಸ್ಥಳೀಯ ವಾಸ್ತವ ಪ್ರಪಂಚದಿಂದ ಬಿಡುಗಡೆಯನ್ನು ಬಯಸುವವಗೆ ರಂಗಪ್ಪ-ಜಗನ್ನಾಥರಿಗೆ ತಾವಿರುವ ಬೆಂಗಳೂರಿನಂತಹ ಪ್ರಪಂಚ ಬೇಸರವಾಗಿ ಕಂಡು ಮಲೆನಾಡ ಸೀಮೆ ಆಕರ್ಷಕವಾಗಿ ಕಂಡರೆ ಇತ್ತ ಮಲೆನಾಡ ಸೀಮೆಯಲ್ಲಿಯೇ ಇರುವ ಗೋಪಾಲಯ್ಯನಿಗೆ ಮಲೆನಾಡು ಬೇಸರವಾಗಿ ತನ್ನೆಲ್ಲಾ ಆಸ್ತಿ-ಪಾಸ್ತಿಗಳನ್ನು ಮಾರಿ ಬೇರೆಲ್ಲಾದರೂ ವಾಸ್ತವ್ಯ ಹೂಡುವ ಪ್ರಯತ್ನದಲ್ಲಿರುತ್ತಾನೆ. ಇಲ್ಲಿ ಪರಸ್ಪರ ತಮ್ಮ ಪರಿಸರಕ್ಕೆ ವಿಕರ್ಷಣೆಯನ್ನು ತಮ ವಿರುದ್ಧ ಪರಿಸರದತ್ತ ಆಕರ್ಷಣೆಹೊಂದಿರುವ ವನಸ್ಥಿತಿಯನ್ನು ಕಾಣಬಹುದಾಗಿದೆ. ಆದರೆ ಎರಡೂ ಪರಿಸರದಲ್ಲೂ ಒಂದಲ್ಲಾ ಒಂದು ರೀತಿಯ ಭೀಕರತೆ ಇದ್ದೇ ಇರುತ್ತದೆ. ಅದು ಪ್ರಕೃತಿಯ ನಿಯಮ ತಾವರಿಯದ ವಾಸ್ತವ ಪ್ರಪಂಚದಲ್ಲಿ ಅವಾಸ್ತವ ಚಿಂತನೆ ಕಟ್ಟಿಕೊಳ್ಳುವುದಕ್ಕೆ ಮುಂಚಿತವಾಗಿ ಆ ವಾಸ್ತವ ಪ್ರಪಂಚದಲ್ಲಿ ಅವಾಸ್ತವ ಚಿಂತನೆ ಕಟ್ಟಿಕೊಳ್ಳುವುದಕ್ಕೆ ಮುಂಚಿತವಾಗಿ ಆ ವಾಸ್ತವ ಪ್ರಪಂಚದಲ್ಲಿ ತಾನು ವಾಸ್ತವವಾಗಿ ವಿಹರಿಸಿದಾಗ ಮಾತ್ರ ತಾನಿರುವ ಪರಿಸರದ ನಿಜಸಂಗತಿ ತಿಳಿಯುತ್ತದೆ. ಅದನ್ನು ಪ್ರತ್ಯಕ್ಷವಾಗಿ ಅನುಭವಿಸಿದಾಗ ಇದರ ತೀವ್ರತೆಯು ಭಾಸವಾಗುತ್ತದೆ.

ಸ್ವರೂಪ

'ನಿಗೂಢ ಮನುಷ್ಯರಲ್ಲಿನ ಜಗನ್ನಾಥನ' ಪಾತ್ರವೇ 'ಸ್ವರೂಪ' ದಲ್ಲಿನ ಶ್ರೀನಿವಾಸನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತದೆ. ನವ್ಯದ ಮಾದರಿಯಲ್ಲಿ ಈ ಎರಡೂ ಕಾದಂಬರಿಗಳು ಕಾಣಲು ಮುಖ್ಯಕಾರಣ ಇಲ್ಲಿ ವ್ಯಕ್ತವಾಗುವ 'ಆತ್ಮನಿಷ್ಠತೆ ಮತ್ತು ಸ್ವಗತದ' ದಾಟಿಯೇ ಆಗಿದೆ. ನಿಗೂಢ ಮನುಷ್ಯರಲ್ಲಿ ರಹಸ್ಯ ಸ್ಥಾಯಿಯಾದರೆ ಸ್ವರೂಪದಲ್ಲಿ ಮೌನ ಸ್ಥಾಯಿಯಾಗಿದ್ದು ಗಾಢವಾದ ಆತ್ಮನಿವೇದನೆಯಿದೆ.

ಇಡೀ ಪ್ರಕೃತಿಯ ಎದುರು ನಿಂತ ಸೃಷ್ಟಿಯ ಸ್ವರೂಪ ಮತ್ತು ಅರ್ಥಗಳನ್ನು ತನ್ನ ಸೀಮಿತ ಭಾಷೆಯಲ್ಲಿ ಅರ್ಥೈಸಿಕೊಳ್ಳಲಾಗದ ಮನುಷ್ಯನ ಪಾಡನ್ನೇ ಇದು ಧ್ವನಿಸುತ್ತದೆ. ಇಲ್ಲಿನ ನಿರೂಪಣೆ ಸೂಕ್ಷ್ಮವಾಗಿದ್ದು 'ವ್ಯಕ್ತಿಯ ದುರಂತಗಳಿಗೆ ಮನುಷ್ಯ ಕುಲವೇ ಹೊಣೆ ಎಂಬ ವ್ಯಂಗ್ಯ' ಶ್ರೀನಿವಾಸನ ಮಾತುಗಳಲ್ಲಿ ವ್ಯಕ್ತವಾಗಿದೆ. ಅವರವರ ಕರ್ಮಕ್ಕೆ ಅವರೇ ಹೊಣೆ ಎಂಬ ತತ್ವ ಇಲ್ಲಿದೆ. 'ಬದುಕಿರ್ನದಗ ಹುಡುಕಾಟ ಇಲ್ಲಿ ಶೋಧಿತವಾಗುತ್ತಿವೆ''.

ತನ್ನ ಅನುಭವಕ್ಕಾಗಿ ಜಮೀನು ಅರಸುತ್ತಾ ಬಂದ ಶ್ರೀನಿವಾಸನಿಗೆ ಇಲ್ಲಿ ತನ್ನ ಪೂರ್ವಿಕರ ಜಮೀನೇ ಪಾಳುಬಿದ್ದು ಅದು ಬೇರೊಬ್ಬರ ವಶದಲ್ಲಿದ್ದು ತಕ್ಕ ಕಾಗದ ಪತ್ರ ತಯಾರಿಕೆಯಲ್ಲಿ ಅನೇಕ ತೊಂದರೆ ಅನುಭವಿಸುತ್ತಾನೆ.

ಸ್ವರೂಪದ ಸುರುಳಿ ಬಿಚ್ಚಿಕೊಳ್ಳುವುದೇ ತನ್ನ ಬ್ರಾಹ್ಮಣ ಗೆಳೆಯ ಎಂ.ಡಿ. ಪದವೀಧರನಾದ ಹೇಮಂತನನ್ನು ಶೂದ್ರನಾದ ಎಂ.ಎ. ಪಿಹೆಚ್.ಡಿ. ಪದವೀಧರನಾದ ಶ್ರೀನಿವಾಸ ಮುಖಾಮುಖಿಯಾಗಿ ಶಿಖಾರಿಗೆ ಕುಳಿತಾಗ.

''ನಿನ್ನನು ಮೊದಲು ಮನೆಯ ಹತ್ತಿರ ನಾನು ನೋಡಿದಾಗ ನನಗೆ ಕೊಂಚ ಬೇಸರವಾಯ್ತು. ಈ ಕಾಡು ಸೋಲಿಗರು, ಬಿಲ್ಲರು, ಹೊಲೆಯರು ಇವರ ಮಧ್ಯೆ ನಾನು ನಿನಗೆ ಕಾಣಸಿಕ್ಕಿದೆನಲ್ಲಾ. ನೀನು ಮೊದಲೇ ಬರುವುದನ್ನು ತಿಳಿಸಿದ್ದರೆ ನನ್ನನ್ನು ನಾನು ಬೇರೆಯದೇ ರೀತಿಯಲ್ಲಿ ಪ್ರದರ್ಶಿಸಿಕೊಳ್ಳುತ್ತಿದ್ದೆ.''[10] ಈ ಮಾತುಗಳಲ್ಲಿ ಮನುಷ್ಯನ ಪ್ರಜ್ಞಾಪೂರ್ವಕ ಮತ್ತು ಅಪ್ರಜ್ಞಾಪೂರ್ವಕ, ಆಂತರಿಕ ಮತ್ತು ಬಾಹ್ಯ ಎಂಬ ಎರಡು ಸ್ತರಗಳಲ್ಲಿ ಅವನ ಸ್ವರೂಪದ ಇರುವಿಕೆ ಕಾಣಬಹುದಾಗಿದೆ. ಏಕೆಂದರೆ ಇಲ್ಲಿ ಶ್ರೀನಿವಾಸ ತನ್ನನ್ನು ತಾನು ಅತೀ ಕೆಳವರ್ಗದವನಂತೆ ಗೆಳೆಯ ಹೇಮಂತನಿಗೆ ಎದುರಾದೆನೆಲ್ಲಾ ತನ್ನ ಪ್ರತಿಷ್ಠೆಗೆ ಕುಂದಾಯಿತಲ್ಲ ಎಂಬ ವೇದನೆಯಿದೆ. ತಾನು ಎಲ್ಲರಿಗಿಂತ ಭಿನ್ನವಾಗಿ ಕಾಣಬೇಕೆಂಬ ಹಂಬಲ ಅವನಲ್ಲಿದೆ.

ಕಾಲೇಜಿನಲ್ಲಿ ಓದುತ್ತಿದ್ದ ಶ್ರೀನಿವಾಸನ ಆಲೋಚನೆಗಳಿಗೂ, ರೈತಾಪಿಯಾದ ಶ್ರೀನಿವಾಸನ ಆಲೋಚನೆಗಳಿಗೂ ಭಿನ್ನವಾದ ಸ್ವರೂಪವೊಂದು ಇಲ್ಲಿ ಕಾಣಬಹುದಾಗಿದೆ. ಕಾಲೇಜಿನ ಜೀವನ 'ಚರವಾಸ್ತವ'ವಾದರೆ ನೈಜಜೀವನ 'ಚಿರವಾಸ್ತವ' ನೆಲೆ ಕಾಣುವುದನ್ನು ಒಪ್ಪುತ್ತಾನೆ. ಒಂದು ರೀತಿ ಆಧ್ಯಾತ್ಮಕತೆಯಿಂದ ಲೌಕಿಕತೆಯೆಡೆಗೆ ಮುಖಮಾಡಿ ಅದೇ ನಿಜಸ್ವರೂಪ ಎಂದು ಒಪ್ಪುವ ಧಾಟಿ ಶ್ರೀನಿವಾಸನ ಮಾತುಗಳಲ್ಲಿ ಕತೆಯುದ್ದಕ್ಕೂ ಮನಗಾಣಬಹುದಾಗಿದೆ.

ಈ ರೀತಿಯ ಅನುಭವಗಳು ಹೇಮಂತನ ಮೌನ ಸಾರಥ್ಯದಲ್ಲಿಯೇ ಶ್ರೀನಿವಾಸನ ಶಿಕಾರಿಯ ರಥದಲ್ಲಿ ಕತಾಂತ್ಯದವರೆಗೂ ಮುಂದುವರೆಯುತ್ತದೆ. ಕಾಲೇಜಿನಲ್ಲಿದ್ದಾಗ ಹೇಮಂತನಿಗೆ ''ನೀನೊಬ್ಬ ನರಸತ್ತ ಹಾರುವ, ಮಡಿ, ಮೈಲಿಗೆ, ಮುಟ್ಟು, ಒಬ್ಬಟ್ಟು ಇವುಗಳ ಬಗ್ಗೆಯೇ ಬರೆದುಕೊಂಡಿರು''[11] ಎಂದು ಬೈದು ಬಂದು ಇಲ್ಲಿ ಹಣಕ್ಕೇ

---

10 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ-55

11 ಅದೇ ಪುಟ - 58

ಶರಣಾಗಿದ್ದೇನೆಂದು ಭಾವಿಸಬೇಡ ಎಂಬ ಮಾತುಗಳು ತಾನೂ ಸಹ ಜಾತೀಯತೆ ಪರಂಪರೆಯನ್ನು ಮೀರಲಾರದ ಸ್ಥಿತಿಯಲ್ಲೇ ಇರುವ ತನ್ನ ಆತ್ಮನಿವೇದನೆಯನ್ನು ವಾಸ್ತವತೆಗೆ ವಿಮುಖವಾಗಲಾರದ ಸ್ಥಿತಿಯನ್ನು ತೋಡಿಕೊಳ್ಳುತ್ತಾನೆ.

'ಆರ್ಥಿಕ ದಾಸ್ಯದಲ್ಲಿ ಆತ್ಮಸ್ವಾತಂತ್ರ್ಯದ ಸಿದ್ಧಿ ಸಾಧ್ಯವೇ ಇಲ್ಲ. ದುಡ್ಡು, ದುಡ್ಡಿನಿಂದ ಬರುವ ಅಧಿಕಾರ ಅದು ಬೇಕೆನಿಸಿದಾಗ ಕೊಡುವ ಸುಖ-ಸಂತೋಷ ಇವನ್ನೆಲ್ಲಾ ತ್ಯಾಜ್ಯ ಎಂದು ನಾನು ಹೇಳಿದರೆ ಸಮಾಜವು ನನ್ನ ಪಂಚೇಂದ್ರಿಯಗಳಲ್ಲೇ ಏನೋ ಊನವಿರಬೇಕು ಎನ್ನುತ್ತದೆ. ಹಿಂದೆ ನಾನು ನೀನು ಆರಾಧಿಸುವ ಸೋಷಿಯಾಲಿಸಂ ಶೋಷಣೆ ಎನ್ನುವ ಮೂರಕ್ಷರದ ಪದ ಹಣ ಕಂಡೊಡನೆ ದಿಗಿಲು ಬೀಳುವಂತೆ ಮಾಡುತ್ತದೆ' ಎನ್ನುತ್ತಾನೆ . ಹಣದ ಬೆನ್ನತ್ತಿದ ಮನುಷ್ಯ ತನ್ನ ಪ್ರೀತಿ, ಪ್ರೇಮ, ವಾತ್ಸಲ್ಯ ಸಂಬಂಧ ಅಷ್ಟೇ ಏಕೆ ತನ್ನ ಮಹತ್ವವನ್ನೇ ಕಳೆದುಕೊಳ್ಳುತ್ತಾನೆ.

ಒಮ್ಮೆ ಕಾಲೇಜಿನಲ್ಲಿ ಓದುವಾಗ ಶೂದ್ರ ಮಾಸ್ತರರಾದ ಧೊಂಡಪ್ಪ ಗೌಡರರು ''ನಮ್ಮ ಜಾತಿಯವರೆಲ್ಲಾ ಬ್ರಾಹ್ಮಣರ ಮನೆ-ಮುಸುರೆ ತಿಕ್ಕುವ ವಂಶವಾಗಿ ಹೋಗಿದ್ದಾರೆ. ಅವರ ಹೆಂಗಸರು ನಮ್ಮ ಮನೆಯ ಮುಸುರೆ ತಿಕ್ಕುವುದೇ ಇದಕ್ಕೆ ಪ್ರಾಯಶ್ಚಿತ್ತ ಆ ತನಕ ಬ್ರಾಹ್ಮಣರನ್ನು ನಾವು ದ್ವೇಷಿಸಬೇಕು''[12] ಎಂಬುದನ್ನೇ ಕೇಂದ್ರವಾಗಿರಿಸಿ ಕನ್ನಡ ಸಾಹಿತ್ಯದ ಇತಿಹಾಸದ ಮುಖಾಂತರ ಜಾತಿಯನ್ನು ವಿಶ್ಲೇಷಣೆ ಮಾಡಿ ಹೇಗೆ ಕನ್ನಡ ಸಾಹಿತ್ಯದ ಪ್ರತಿಯೊಂದು ನವೋದಯವಲು ಪಂಪನಿಂದ-ಹರಿಹರನವರೆಗೆ ಬ್ರಾಹ್ಮಣರ ವಿರುದ್ಧ ಬಂಡಾಯವಾಗಿದೆ ಎಂದು ತಿಳಿಸಿ. 'ಕನ್ನಡ ಸಾಹಿತಿಯಾಗಬೇಕಾದವನು ಮೊದಲು ಬ್ರಾಹ್ಮಣ ದ್ವೇಷಿಯಾಗಬೇಕಾಗುವುದು ಅನಿವಾರ್ಯ ಹಾಗೂ ನ್ಯಾಯ'. ಹೀಗೆ ಸೃಜನಶೀಲ ಕೃತಿಯಒಳಗೆ ತಮ ವೈಚಾರಿಕವಾದ ಹಾಗೂ ಬೌದ್ಧಿಕವಾದ ಚರ್ಚೆ ಚಿಂತನೆಗಳನ್ನು ತೇಜಸ್ವಿ ನಿರೂಪಿಸಿದರೂ ಧಾರ್ಮಿಕ ನಂಬಿಕೆಗಳಲ್ಲಿ ಕೆಳಜಾತಿಯವರು ಅನುಸರಿಸುವ ಧೋರಣೆಯನ್ನು ಖಂಡಿಸುತ್ತಾರೆ.

'ಈರಪ್ಪ' ಎಂಬ ಮಹಾಜಿಪುಣ ಭೂತ ಪ್ರೇತಾದಿಗಳ ಹೆಸರೇಳಿ ಹಣ ಸಂಪಾದನೆ ಮಾಡುತ್ತಿದ್ದು ಒಮ್ಮೆ ಶ್ರೀನಿವಾಸನ ಮನೆಗೆ ಎರಡುಕುರಿ ಬಲಿಯಾಗಬೇಕೆಂದೂ ಹೇಳಿದನು. ಇಲ್ಲದಿದ್ದರೆ ದೆವ್ವ ಮಧ್ಯಾಹ್ನದ ವೇಳೆಯಲ್ಲಿ ಶಿಳ್ಳು ಹಾಕುತ್ತದೆಂದು ಹೇಳಿ ಹಣಗಳಿಸುತ್ತಿದ್ದನು. ಒಮ್ಮೆ ಊರಿನವರಿಗೆಲ್ಲಾ ಸಿಡುಬು ಬಂದಾಗ ಸರ್ಕಾರ 'ಸಿಡುಬು

---

12 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ- 65

ನಿರ್ಮೂಲನ ಸಪ್ತಾಹ' ಮಾಡಿತು. ಅಚ್ಚರಿಯ ಸಂಗತಿ ಎಂದರೆ ಎಲ್ಲರಂತೆ ಮಂತ್ರವಾದಿ ಈರಪ್ಪನಿಗೂ ಡಾಕು ಹಾಕಬೇಕಾದ ಸಂದರ್ಭದಲ್ಲಿ ಬಲತ್ಕಾರಕ್ಕೇ ಮಣಿದ ಅವನು ತೋಳನ್ನು ಮಡಚಿದಾಗ ಶ್ರೀನಿವಾಸನ ಕಣ್ಣಿಗೆ ಕಂಡದ್ದು ನಾನಾ ತರದ ಇಪ್ಪತ್ತು ತಾಯಿತಗಳು. ಅವರ ತೋಳನ್ನು ಬಿಗಿದು ಚರ್ಮಹರಿದು ಮಾಂಸಗೋಚವಾಗುತ್ತಿದ್ದಾಗ ಈರಪ್ಪನ ಚಿತ್ತ ಸ್ಥಿತಿ ಅರ್ಥವಾಯಿತು. ಇವರ ಹರಿದ ಚರ್ಮದ ನಡುವೆಯೂ ದಾರವನ್ನು ಕೀಳಲಾಗದುದರಿಂದ ತಾನೇಕೆ ಇವರ ಆಚರಣೆಗೆ ಕಿಡಿಯಾಗಬೇಕು ?ಎಂದು ? ಇದರಿಂದ ತಾರ್ಕಿಕ ಧನದ ಬಗ್ಗೆ ಇದ್ದ ನಂಬಿಕೆ ದೆವ್ವದ ಬಗ್ಗೆಯ ಶ್ರದ್ಧೆಯಾಗಿ ಪರಿಣಮಿಸುತ್ತದೆ ಎಂಬ ಸಂಗತಿ ತಿಳಿದು ಕೊನಗೆ ಕೆಳವರ್ಗದವರಿಗೆ ಭೂತ, ಪ್ರೇತ, ಪಿಶಾಚಿಗಳು ಗಾಢವಾದ ನಂಬಿಕೆಗೆ ಪಾತ್ರವಾಗುತ್ತವೆ. ಹೇಗೆ ಮೇಲ್ವರ್ಗವರಿಗೆ ದೇವರು ಗಾಢವಾದ ನಂಬಿಕೆಗೆ ಪಾತ್ರವಾಗುತ್ತದೋ ಹಾಗೆ

ಚರ್ಮಹರಿದರೂ ತಾಯಿತವನ್ನು ಬಿಚ್ಚದ ಈರಪ್ಪನನ್ನು ಕಂಡಾಗ ತೊಂದರೆಯಾಗದಂತಹ ಜನಿವಾರ ಧರಿಸಿದ ಬ್ರಾಹ್ಮಣರ ನಂಬಿಕೆಗಳ್ನ ಆತನು ಪ್ರಶ್ನಿಸುವಂತಾಗುತ್ತದೆ. ಹೀಗೆ ಜಾತೀಯತೆಯ ಬಗ್ಗೆ ಶ್ರೀನಿವಾಸ ಮುಖಮಾಡುತ್ತಾನೆ. ಹೇಮಂತನೆದುರು ತನ್ನ ಪ್ರೊಫೆಸರನ್ನು ಜಾತೀಯತೆಗಾಗಿ ಬಯ್ಯುತ್ತಿದ್ದರೂ ಪ್ರೊಫೆಸರರಿಂದ ಈ ನಡತೆಗೆ ತಕ್ಕ ಕಾರಣವನ್ನು ನೀಡುತ್ತಾನೆ. ಪ್ರೊಫೆಸರರು ತಮ ಜಾತಿಯವರಿಗೆ ಹುದ್ದೆ ದೊರಕದಂತೆ ಸತತವಾಗಿ ತಡೆಯುತ್ತಿದ್ದ ಬ್ರಾಹ್ಮಣಶಾಹಿ ವಿರುದ್ಧ ಆಕ್ರೋಶ ವಿದ್ದುದರಿಂದಲೇ ಅವರು ಪರೀಕ್ಷೆಗೆ ಮುಖ್ಯವಾದ ಪುಸ್ತಕವನ್ನು ಯಾರಿಗೂ ಸಿಗದಂತೆ ಲೈಬ್ರರಿಯಿಂದ ಕೊಂಡೊಯ್ದು ನಂತರ ಅನಿರೀಕ್ಷಿತವಾಗಿ ಬಂದ ಶ್ರೀನಿವಾಸನಿಗೆ ಪರೀಕ್ಷೆಯಲ್ಲಿ ಪಾಸಾಗಲು ಸಹಾಯ ಮಾಡಿದ್ದನ್ನು ತಿಳಿಸಿ ತಾನೂ ಈ ಜಾತಿಯತೆಯ ಲಾಭವನ್ನು ಪಡೆದ ಘಟನೆಯನ್ನು ವಿವರಿಸುತ್ತಾನೆ. ಈ ಘಟನೆ ಸಾರ್ವತ್ರಿಕವಾದುದೇ ಎಂದು ಅವರ ವಾದ. ಇದು ಪ್ರಸ್ತುತ ಸನ್ನಿವೇಶದಲ್ಲೂ ಹಾಗೇ ಇದೆ.

ಮೂಲತಃ ಮನುಷ್ಯನೇ ಸ್ವಾರ್ಥಪರ ತನ್ನ ಎಂಥ ಸ್ವಾರ್ಥತ್ಯಾಗವೂ ಯಾವುದೇ ರೀತಿಯಾದ ತನ್ನ ಪ್ರತಿಷ್ಠೆ ಅಹಂಕಾರಗಳನ್ನು ಹೆಚ್ಚಿಸುವಂತಿದ್ದರೆ ಮಾತ್ರ ಅದನ್ನು ತಾನುಅಭಿನಯಿಸಬಲ್ಲ. ಶ್ರೀನಿವಾಸನ ಚಿಕ್ಕಪ್ಪನ ಆಸ್ತಿಪತ್ರಗಳನ್ನು ಯಾರೋ ಸುಟ್ಟುಹಾಕಿದ್ದರಿಂದಲೇ ಸುತ್ತ-ಮುತ್ತಲ ಜನರೊಂದಿಗೆ ತಾನು ಸೌಹಾರ್ದತೆಯಿಂದಿರಲು ಸಾಧ್ಯವಾಯಿತು ಎಂಬಲ್ಲಿ ಅವನ ಮಾನವೀಯ ನೆಲೆ ಕಂಡರೂ ತಾನೇನೂ ಟಾಲ್‌ಸ್ಟಾಯ್

ಮಹರ್ಷಿಯಂತಲ್ಲ ಎಂಬ ಮಾತಲ್ಲಿ ಜೀವನ ನಡೆಸಲು ಕೇಂದ್ರ ಬಿಂದು. ಜಮೀನು ಮತ್ತು ಕೃಷಿ ಇರಲೇಬೇಕೆನ್ನುತ್ತಾರೆ. ಈ ನೆಲೆಯಿಂದಲೇ ಶೋಷಣೆಯ ವಿಭಿನ್ನ ಮುಖಗಳನ್ನು ಅನಾವರಣಗೊಳಿಸುತ್ತಾನೆ.

ಶೋಷಣೆ ಕೇವಲ ಬಂಡವಾಳಗಾರನಿಗೆ ಮಾತ್ರ ಸೀಮಿತವಲ್ಲ. ತಾನು ಹಳ್ಳಿಗರ ಕೈಲಿ ದುಡಿಸಿ, ಶೋಷಿಸಿ ದೊಡ್ಡವನಾದೆ ಎನ್ನುವುದು ಕಾಣುವ ವಿಷಯ. ಆದರೆ ಅದೇ ಹಳ್ಳಿಗರು ನಮ್ಮ ಚಿಕ್ಕಪ್ಪನ ಗೈರುಹಾಜರಿಯಲ್ಲಿ ಗದ್ದೆಯನ್ನೆಲ್ಲಾ ಹಾಳುಮಾಡಿದ್ದು ಶೋಷಿತರೇ ಶೋಷಿಸ್ಥರು ಆದರೆ ಬೇರೆ ರೀತಿ ಶೋಷಣೆ ಶ್ರೀನಿವಾಸನಿಗೆ ಗದ್ದೆಯ ಬಾಂಡುಗಳನ್ನು ಪತ್ತೆಹಚ್ಚಬೇಕಾದರೆ ನೂರಾರು ರೂಪಾಯಿ ಖರ್ಚಾಯಿತು. ಆದ್ದರಿಂದ ಶೋಷಣೆ ಒಂದಲ್ಲ ಒಂದು ರೀತಿಯಲ್ಲಿ ಮನುಷ್ಯ ಬದುಕಲೂ ಅನಿವಾರ್ಯವೇ. ಇಲ್ಲಿ ಉತ್ಪಾದಿಸಲೂ ಶೋಷಿಸಬೇಕು. ಇಲ್ಲಿ ಹಾಳು ಮಾಡಲು ಶೋಷಿಸಬೇಕು. ಇಲ್ಲಿಯವರೆಲ್ಲ ವ್ಯಕ್ತಿಯ ಸುಗುಣಗಳಿಗೆ ಗಾಂಭೀರ್ಯಗಳಿಗೆ ಮತ್ಸರ ಪಡುತ್ತಾರೆ. ಆದ್ದರಿಂದ ಶೋಷಣೆ ಅನಿವಾರ್ಯ ಇಲ್ಲಿ ಬಡಬಗ್ಗರ ಬಗ್ಗೆ ಕರುಣೆಯಾಗಲೀ ಶ್ರೀಮಂತರ ಬಗ್ಗೆ ಕಾಠಿಣ್ಯವಾಗಲೀ ಇರಲಾರದು ಎಂಬ ಭಿನ್ನತೆ ಹಾಗೂ ವಾಸ್ತವತೆಯನ್ನು ಬೌದ್ಧಿಕ ವಿಚಾರವನ್ನು ಹೊರಹಾಕುತ್ತಾನೆ. ಕೊಂದವರು, ಕೊಲ್ಲದವರು, ಮುಗ್ಧರು, ಮುಗ್ಧರಲ್ಲದವರು, ಪ್ರೀತಿಸಿ ಮದುವೆಯಾದವರು, ಪ್ರೀತಿಸಿ ಕೈಕೊಟ್ಟವರು, ಎಲ್ಲರೂ ಈ ವ್ಯವಸ್ಥೆಯಲ್ಲಿ ಅಪರಾಧಿಗಳೇ ಎಂಬ ನಿಲುವಿಗೆ ಶ್ರೀನಿವಾಸ ಬರುತ್ತಾನೆ. ಆದರೂ ತಾನು ಜೀವನಕ್ಕೆ ಜೋತುಬೀಳುವ 'ಆಶಾವಾದಿ' ಎಂದು ತನ್ನ ಸ್ವರೂಪವನ್ನು ವಿವರಿಸುತ್ತಾನೆ.

ಮನುಷ್ಯ ತನ್ನ ಕಠೋರವಾಸ್ತವ ಸತ್ಯವನ್ನು ಎದುರುಗೊಳ್ಳಲು ಹಿಂಜರಿಯುತ್ತಾನೆ. 'ಇದ್ದದನ್ನು ಇದ್ದಹಾಗೆ ಹೇಳಿದರೆ ಎದ್ಬಂದು ಎದೆಗೆ ಒದ್ದ' ಎಂಬಗಾದೆಮಾತಿನಂತೆ ಮೌನವಾಗಿರುವ ಹೇಮಂತನ ಬ್ರಾಹ್ಮಣಿಕೆಯ ಸಭ್ಯ ಸೋಗಿನ ಹಿಂದೆ ಇದ್ದಂತಹ ಮಡಿ, ಮೈಲಿಗೆ, ಜಾತೀಯತೆಯನ್ನು ಹಾಸ್ಯಮಯವಾಗಿಯೇ ಹೊಡೆಯುತ್ತಾನೆ ಶ್ರೀನಿವಾಸ.

''ಹೊಲೆಯರ ಹೆಂಗಸರು ನಮ್ಮ ಗದ್ದೆ ಕೆಲಸಕ್ಕೆ ಬರುತ್ತಾರೆ. ಏನು ಕಟ್ಟುಮಸ್ತಾಗಿದ್ದಾರೆ ಅಲ್ಲವೇ. ಯಾಕಯ್ಯ ಹಾಗೆ ನಗುತ್ತಿ. ಆ ಪೊದೆಯ ಮರೆಯಲ್ಲಿರುವ ಅವರು ನಿನಗೆ ಕಾಣುವುದಿಲ್ಲವೆಂದು ತೋರುತ್ತದೆ. ಒಂದು ಕುಪ್ಪಸ ಇಲ್ಲ. ಒಂದು ಬಾಡಿ ಇಲ್ಲ. ಕೇವಲ ಸೆರಗನ್ನೇ ಬಿಗಿದುಕೊಂಡು ಮೊಲೆ ಳಳಳ ಅಲ್ಲಾಡಿಸುತ್ತಾ ನಿನ್ನ ಇಂದ್ರಿಯ ನಿಗ್ರಹವನ್ನು ಅಲ್ಲಾಡಿಸುತ್ತಾರೆ. ಅಂದರೆ ಕೇವಲ ಎಲೆ ಅಡಿಕೆ ಆಸೆಗೆ ಬರುತ್ತಾರೆಂದು ತಿಳಿಯಬೇಡ.

ಅವರು ಕುಲಟರಲ್ಲ. ನೋಡಪ್ಪಾ ನೀನೇನೋ ತೆಳ್ಳಗೆ ಬೆಳ್ಳಗೆ ಇದ್ದೀಯ. ನಿನ್ನನ್ನು ಜಾತಿಭ್ರಷ್ಟರನ್ನಾಗಿ ಮಾಡಲು ಅವರಿಗೂ ಆಸೆ ಇರಬಹುದು. ಆಹ್ ಜಾತಿ ಭ್ರಷ್ಟರಾಗಲೂ ಎಂಥ ಸುಂದರ ವಿಧಾನ''[13] ಈ ಮಾತನ್ನು ಕೇಳಿದ ಹೇಮಂತನಿಗೆ ಕೋಪ ತತ್‌ಕ್ಷಣಕ್ಕೆ ಬಂತಾದರೂ ' ರಿಪಬ್ಲಿಕ್ ಡೇ ದಿನ ಅವಳು ಯಾವಳೋ .....ಸೂಳೆಗೆ.... ಸಾಲುಮರದ ಕೆಳಗೆ ......ಕತ್ತಲಲ್ಲಿ ನಿಂತುಕೊಂಡೇ...ಅದು ಹ್ಯಾಗಯ್ಯ ಸಾಧ್ಯ..ನಾನು ಕೇಳಿದ್ದು ಅವರ ನೈತಿಕ ಸಾಧ್ಯತೆಯನ್ನಲ್ಲ. ತಾಂತ್ರಿಕ ಸಾಧ್ಯತೆಯನ್ನು ಆ ಸೂಳೆಯನ್ನೇ ಕಾಲೇಜಿನ ಹುಡುಗಿ ರಜನಿ ಎಂದು ಕಲ್ಪಿಸಿಕೊಂಡೆಯೋ ಹೇಗೆ ?' ಇದು ವಿಶ್ವಾಮಿತ್ರ ಮೇನಕೆಯನ್ನು ಕಂಡಾಗಲೂ ಜರುಗಿರುವಂತದ್ದೆ ಎಂದು ಸಾಮಾನ್ಯೀಕರಿಸಿ ಹೇಳಿದರು ಸಹ ಸೂಕ್ಷ್ಮವಾದ ಎಳೆಯೊಂದನ್ನು ನೀಡಿದ್ದಾರೆ. ಅಂದರೆ ಚರ್ಮದ ತೆವಲನ್ನು ತಣಿಸಿಕೊಳ್ಳುವಲ್ಲಿ ಬರದಂತಹ ಜಾತಿಯ ಮಡಿವೈಲಿಗೆಯ ಕಲ್ಪನೆ ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವಲ್ಲಿ, ಜಾತಿ-ಜಾತಿಯನ್ನು ಬೆಸೆಯುವಲ್ಲಿ ಏಕೆ ಬರಲಾರದು ? ಪಂಚೇಂದ್ರಿಯ ನಿಗ್ರಹ ತಾಳಲಾರದೆ ದೇಹದೇಹಗಳು ಒಂದಾಗುವ ಸಂದರ್ಭದಲ್ಲಿ ಅಡ್ಡಿಯಾಗದ ಮಡಿ-ಮೈಲಿಗೆಗಳು ಮನಸ್ಸುಗಳು ಬೆರೆಯುವಲ್ಲಿ ಏಕೆ ಅಡ್ಡಿ ಆತಂಕಗಳನ್ನು ಒಡ್ಡುತ್ತವೆ ಅಂದರೆ ಈ ರೀತಿಯ ಅನೈತಿಕ ಸಂಬಂಧಗಳನ್ನು ಗೌಪ್ಯವಾಗಿರಿಸಿ ನೈತಿಕತೆಯ ಮುಖವಾಡ ಧರಿಸಿ ಸಮಾಜದಲ್ಲಿ ಬದುಕನ್ನು ಬದುಕುತ್ತಿರುವ ಜನರ ಅನಿವಾರ್ಯತೆಯನ್ನು ತೇಜಸ್ವಿ ಎತ್ತಿ ಹಿಡಿದಿದ್ದಾರೆ. ಇದೇ ಸಭ್ಯಸ್ಥರ ಲಕ್ಷಣವೇನೋ ? ಅವರನ್ನು ಹೈಟೆಕ್ ವೇಶ್ಯೆ. ಹೈಟೆಕ್ ಜನರು ಎನ್ನಬಹುದು. ಇಲ್ಲಿ ಎಲ್ಲವೂ ಹೈಟೆಕ್ ಮಯವಾಗಿದೆ. ತಮ್ಮ ತಪ್ಪು ಮುಚ್ಚಿ ಇನ್ನೊಬ್ಬರ ತಪ್ಪನ್ನು ಎತ್ತಿ ತೋರುವುದಾಗಿದೆ. ಈ ದೇಶದಲ್ಲಿ ಬದಲಾಯಿಸೋಕೆ ಸಾಧ್ಯ ಇರೋದು ಬರೀ ಅಂಡರ್‌ವೇರ್ ಮಾತ್ರ''[14] ಅಂದರೆ ಒಳಉಡುಪನ್ನು ಯಾರೂ ನೋಡುವುದಿಲ್ಲ. ಹೊರ ಉಡುಪು ಮಾತ್ರ ಕಾಣುತ್ತದೆಯಾದ್ದರಿಂದ ವ್ಯಕ್ತಿಗೆ ಎರಡು ಮುಖಗಳಿರುತ್ತವೆ ಎನ್ನುತ್ತಾರೆ. ಒಂದು ಹೇಳಿ ಮಾಡೋದು, ಮತ್ತೊಂದು ಹೇಳದೆ ಮಾಡೋದು.

ಈ ರೀತಿಯ ಇಂದ್ರಿಯಾಸಕ್ತಿಯ ಶ್ರೀನಿವಾಸನಿಗೂ ಬಿಡಲಾರದಂತದ್ದೇ ಕತ್ತಲಲ್ಲಿ ಕುಕ್ಕನಳ್ಳಿ ಕೆರೆ ಏರಿಮೇಲೆ ಸೈಕಲ್ಲಿನಲ್ಲಿ ಬರುವಾಗ ರಾತ್ರಿ ಇದ್ದಕ್ಕಿದ್ದಂತೆ ಓರ್ವ ಸ್ತ್ರೀ ವ್ಯಕ್ತಿಯನ್ನು ಸೈಕಲಲ್ಲಿ ಕುಳ್ಳಿರಿಸುವಂತೆ ಸಹಾಯ ಬೇಡಿದ್ದು ಆತ ತನ್ನೊಡನೆ ಸಖ್ಯ ಬೆಳೆಸಲೆಂದೇ ಆಲೋಚಿಸಿದ್ದರು. ಅದನ್ನು ತೋರ್ಗೊಡದೆ ಸಭ್ಯಸ್ತನಂತೆ ನಡೆದುಕೊಂಡ

13 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ- 63.

14 ನಮ್ಮೊಳಗೊಬ್ಬ ನಾಜೂಕಯ್ಯ (ನಾಟಕ) ಟಿ.ಎನ್. ಸೀತಾರಾಮ್

ಸಂದರ್ಭವೂ 'ನನ್ನ ಒಳಗಿನ ಒಂದು ಅತಿಬುದ್ದಿವಂತಿಕೆ ನನಗೂ ಬಹಿರಂಗಕ್ಕೂ ನಡುವೆ ಉದ್ಭವಿಸಿ ಯಾವ ವರ್ತನೆಯೂ ಸರಳವಾಗದಂತೆ ಸಮಯ ಸ್ಫೂರ್ತವಾಗದಂತೆ ಮಾಡಿ ಬಿಡುತ್ತದೆ. ಹಾಗೂ ''ಬುದ್ದಿ ಎಂದರೆ ತಿಳಿವಳಿಕೆ ಎಂದರೆ ಇನ್ನೇನು ಹಳೆಯ ಘಟನೆಗಳ ಹಿನ್ನೆಲೆಯಲ್ಲಿ ವರ್ತಮಾನವನ್ನು ಕುರಿತು ಆಲೋಚಿಸುವುದು ತಾನೇ ?''[15] ಎಂದು ಅಂದುಕೊಳ್ಳುತ್ತಾ ಬದುಕು ಎಂದರೆ ಶ್ರೀನಿವಾಸನಿಗೆ ಅನಂತವೂ,ಬುದ್ಧಿಯುತವೂ ಆದ ತಂತ್ರ. ರಾಜತಂತ್ರ ಹುಡುಗಿಯರು ತಮ್ಮನ್ನು ಹೊಗಳಲೇಬೇಕೆಂದು ಬಯಸುವ ರಾಜತಂತ್ರ ಆತನದು. ಏಕೆಂದರೆ ತನ್ನೊಳಗಿನ ತನ್ನನ್ನು ಕಂಡುಕೊಳ್ಳಬೇಕಾದರೆ ಆ ತಂತ್ರ ಅನಿವಾರ್ಯ.

ಶ್ರೀನಿವಾಸ ಕಾಲೇಜಿನಲ್ಲಿ ತನ್ನ ಜಾತಿಯವಳಲ್ಲದ ಎನ್.ಇ.ಎಸ್.ಕಾಲೇಜಿನ ಉಪಾಧ್ಯಾಯಿನಿಯೊಬ್ಬಳನ್ನು ಪ್ರೇಮಿಸಿ ಮದುವೆಯಾಗದಿರಲು ಕಾರಣ ''ಎಲ್ಲಿ ತಂದೆತಾಯಿಗಳೇನೆನ್ನುತ್ತಾರೋ , ನಿನ್ನ ಪಾಡು ನಿನಗೆ ಎಂದರೆ ನಾಳಿನಿಂದ ಅನ್ನಕ್ಕೆ ದುಡ್ಡೆಲ್ಲಿ? ಹೀಗೆ ನೂರೆಂಟು ನಿಷ್ಕಾರಣ ಹೇಡಿತನದಿಂದ, ಭೀತಿಯಿಂದ ೩ ವರ್ಷದ ನಂತರ ಪ್ರೇಮ ಮುರಿದು ಬಿದ್ದು ಪ್ರೇಯಸಿಯ ಹೃದಯದಲ್ಲಿ ತನ್ನ ನೋವು ಅಳಿದುಹೋಗಿ ಆಕೆ ಬೇರೊಬ್ಬನನ್ನು ವಿವಾಹವಾಗಿ ಹಾಯಾಗಿರುವಳಲ್ಲಾ ಎಂಬ ಸಮಾಧಾನವೇ ತಾನೊಬ್ಬಆದರ್ಶವಾದಿ' ಎಂದು ಹೇಳುವುದೂ 'ಸಂಪ್ರದಾಯ ಶ್ರದ್ಧೆಯಿಂದಲೇ'ಅದಾಗ್ಯೂ ಆಕೆಯ ಮೇಲಿನ ನಂಬುಗೆಯಿಂದ ಮುಂದೊಂದುದಿನ ಆಕೆಯನ್ನು ಮದುವೆ ಯಾಗುತ್ತೇನೆಂದು ಭರವಸೆಯಿತ್ತು. ಆಕೆ ಕೇವಲಹೆದರಿಸಿ ನನಗೆ ಬುದ್ಧಿಕಲಿಸಲು ಹೀಗೆ ಮಾಡಿರಬಹುದು ಆಕೆ ಒಂದು ವೇಳೆ ಮದುವೆಯಾಗಿದ್ದರೂ ತನ್ನ ನಲ್ಲನ ಅವಗುಣಗಳಿಗೆ, ಬಡತನಕ್ಕೆ ಹೇಗೆ ಪುನಃ ತನ್ನನ್ನೇ ಮದುವೆಯಾಗಬಹುದು ಎಂಬಿತ್ಯಾದಿಯಾಗಿ ನೆನೆದು ಪುನಃ ವಾಸ್ತವಕ್ಕೆ ಬಂದು ಅದೊಂದು ಮರೀಚಿಕೆಎಂದು ನೆನೆದು ಆ ನೆನಪಲ್ಲೇ ಸಾವು-ಬದುಕಿನ ನಡುವೆ ಇನ್ನೂ ಜೀವನದ ಆಸೆಯಿಂದ ಎಷ್ಟೇ ಬಾರಿ ಆತ್ಮಹತ್ಯೆಗೆ ಎಳಸಿದರು ಬದುಕಿದ್ದೇನೆ. ಬದುಕು ಎಂಬುದೇನೆಂದು ತಿಳಿಯಲು ಮಹರ್ಷಿಗಳಂತೆ ಸಾಧನೆಗೈಯುತ್ತಿದ್ದೇನೆ ಎಂಬೆಲ್ಲಾ ಮಾತುಗಳ ಮೂಲಕ ತೇಜಸ್ವಿಯು ಸಾಯುವುದು ಎಂದರೆ ಬದುಕುವುದು' ಎಂಬ ಹೊಸ ಸಿದ್ಧಾಂತತತ್ವ ಶ್ರೀನಿವಾಸನ ಮೂಲಕ ಹೊರಹಾಕಿದ್ದಾರೆ.

"Three days of meaningfull life is for grater than hundred years of meaningless existance" ನೂರು ದಿನಗಳ ಅರ್ಥರಹಿತವಾದ ಬದುಕಿಗಿಂತ ಮೂರು

15 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ- 66.

ದಿನಗಳ ಅರ್ಥಸಹಿತವಾದ ಬದುಕೇ ಶ್ರೇಷ್ಠ ಎಂಬ ನಂಬಿಕೆಯಿದೆ. "Love is not physical attraction but it is a psychical attachment" ಪ್ರೀತಿಯೆಂಬುದು ದೈಹಿಕ ಆಕರ್ಷಣೆಗಿಂತ ಮಾನಸಿಕ ಹೊಂದಾಣಿಕೆಯನ್ನು ಪಡೆದಿರಬೇಕೆನ್ನುತ್ತಾರೆ.

'ಭಟ್ಟರ ಹೆಂಡತಿ ಗೋಸುಂಬೆಯಿಂದ ಮದ್ದೆ ತಯಾರಿಸಿ ಬೇರೆಯವರಿಗೆ ಮದ್ದಿಕ್ಕುವುದರ ಹಿನ್ನೆಲೆ ಮುಂದಿನ ಜನ್ಮದಲ್ಲಿ ಒಳ್ಳೆಯ ಮಗ ಹುಟ್ಟುತ್ತಾನೆಂದು - ಮಕ್ಕಳಾಗದಿದ್ದರೆ ಬೇರೊಬ್ಬನಿಂದ ಮಕ್ಕಳನ್ನು ಪಡೆಯಬಹುದೆಂದು ಧರ್ಮಶಾಸ್ತ್ರವೇ ಹೇಳುತ್ತದೆ. ಅವಳೇಕೆ ಈ ಜನ್ಮದಲ್ಲೇ ಮುಂದಿನ ಜನ್ಮದ ಫಲ ಅನುಭವಿಸಬಾರದೋ ? ಶ್ರದ್ಧೆ ಫಲಕ್ಕಿಂತ ಮುಖ್ಯ ಎಂದು ಕಾಣುತ್ತೆ ಸಾವನ್ನು ಬಲಾತ್ಕಾರದಿಂದಲಾದರೂ ಮರೆತು ಜೀವನಕ್ಕೊಂದು ಅರ್ಥ ರೂಪಿಸಬೇಕು. ಈಗ ಬದುಕಿರುವುದಕ್ಕಿಂತ ಇನ್ನೂ ಬದುಕಬೇಕಾಗಿರುವ ಕಾಲವನ್ನು ನೆನೆಸಿಕೊಂಡರೆ ಒಂದು ಬಗೆಯ ಬಳಲಿಕೆಯಾಗುತ್ತದೆ. ಆದ್ದರಿಂದ ತಾವು ಅಪ್ರಜ್ಞಾಪೂರಕವಾಗಿ ಮಾಡಿದ ತಪ್ಪಿನ ಬಗ್ಗೆ ಅಳುಕು ಭಾವನೆ ಇರಬಾರದೆಂಬುದನ್ನು 'ಭಿಕ್ಷುಕ ಮತ್ತು ಗುಂಡೇಟಿಗೆ ಬಲಿಯಾದ ವ್ಯಕ್ತಿಯನ್ನು ಉದಾಹರಿಸುತ್ತಾರೆ. ಇದು ಪ್ರೇಮಕ್ಕೆ ಅನ್ವಯಿಸುವುದಿಲ್ಲ. ಏಕೆಂದರೆ 'Love at First Sight'.

ತನ್ನ ಜೀವನ ಎಷ್ಟೊಂದು 'ಅಮೂಲ್ಯ' ಅರ್ಥಹೀನ ಎಂಬ ತರ್ಕವನ್ನು ಹೇಮಂತನಿಗೆ ವಿವರಿಸುತ್ತಾ ಶಿಕಾರಿ ಎಂದರೆ ಉಳಿವಿನ ಅಳಿವಿನ ಹೋರಾಟ ಮಹರಾಯಾ, ಶಿಕಾರಿ ಒಂದು ಅನಂತವಾದ ಜೂಜು, ಶಿಕಾರಿ ಒಂದು ಸಾವುಬದುಕಿನ ಹೋರಾಟ, ಅದೊಂದು ವ್ಯಸನವೂ ಹೌದು. ಈ ವ್ಯಸನದ ದೃಷ್ಟಿಯಿಂದ ಕೊಲೆಯೊಂದು ನಡೆದಿರುತ್ತದೆ. ಹಂದಿಯ ಬೇಟೆಯಲ್ಲಿದ್ದಾಗ ಹಂದಿಯೆಂಬ ಭ್ರಮೆಯಲ್ಲಿ ಮನುಷ್ಯನೊಬ್ಬನ ಕೊಲೆ ಹಾಗೂ ಸುತ್ತಲ ಜನರು ಆ ಕೊಲೆ ಕಾಡುಪ್ರಾಣಿಯಿಂದ ಘಟಿಸಿದ್ದೆಂಬ ಸುಳ್ಳು ಹೇಳಿಕೆ ಪೋಲಿಸರಿಂದಲೂ ರುಜುವಾತಾದರೂ ತನ್ನಿಂದ ಕೊಲೆಗೀಡಾದವನ ಬಗ್ಗೆ ಯಾವ ಭಾವನೆಯೂ ಇಲ್ಲದೆ ಸ್ವಸಂರಕ್ಷಣೆಯನ್ನೇ ಮುಖ್ಯವಾಗಿರಿಸಿದ ಆ ಘಟನೆಯು ಅತ್ಯಂತ ಜಟಿಲವಾಗಿರುತ್ತೆಂದು ಶ್ರೀನಿವಾಸನ ಭಾವನೆ. ಸತ್ತವನ ನೋಟದಲ್ಲಿ ಶ್ರೀನಿವಾಸನಿಗೆ ತನ್ನ ಸ್ವರೂಪದ ದರ್ಶನವಾಗುತ್ತದೆ.

ಈ ಕತೆಯು ಅಂತಿಮವಾಗಿ ಸಾರ್ವತ್ರಿಕತೆಯತ್ತ ಬೊಟ್ಟು ಮಾಡಿ ತೋರಿಸುತ್ತದೆ. 'ಇದೇ ಇದೇ ನನ್ನ ಸ್ವರೂಪ ಕಾಫಿ ಹೌಸಿನಲ್ಲಿ ಕಂಡ ಭಿಕ್ಷುಕನ ನೆನಪಾಗುತ್ತದೆ. ಭಿಕ್ಷುಕ

ಶ್ರೀನಿವಾಸನತ್ತಲೇ ದಿಟ್ಟಿಸಿ ಬಂದಾಗ ಕೋಪಗೊಂಡ ಶ್ರೀನಿವಾಸ ಭಿಕ್ಷುಕನ ಕೊಳಕುತನಕ್ಕೆ ಹೇಸಿ ಅವನನ್ನು ಅಮಾನವೀಯವಾಗಿ ಹೊರಹಾಕಿಸಿದ್ದು, ಮುಖ್ಯವಾಗಿ ಕಾಫಿಹೌಸಿನ ಮಾಲಿಕ ಯಾರು 'ಸಭ್ಯರೋ, ಯಾರು ಭಿಕ್ಷುಕರೋ ಎಲ್ಲಾ ಒಂದೇ ರೀತಿ ಇರುತ್ತಾರೆ' ಎಂಬ ಮಾತಿನ ಮೂಲಕ ಒಳಿತು - ಕೆಡುಕುಗಳ ಬೇರ್ಪಡಿಕೆಯ ಕಷ್ಟಸಾಧ್ಯತೆಯನ್ನು ತೇಜಸ್ವಿ ಹೊರಹಾಕುತ್ತಾರೆ. ಇಲ್ಲಿ ಶ್ರೀನಿವಾಸನಿಗೆ ಇದರಿಂದ ತಕ್ಷಣಕ್ಕೆ ಅವಮಾನವಾದರೂ ಕತೆಯ ಅಂತ್ಯದಲ್ಲಿ ಅದಕ್ಕಾಗಿ ಪಸ್ಚಾತ್ತಾಪ ಪಡುತ್ತಾರೆ.

ಎಲ್ಲಾ ನೆಲೆಯಲ್ಲಿ ಸುರಕ್ಷಿತವಾಗಿರುವ ಜನ ಒಂದು ಕಡೆಯಾದರೆ ತಿನ್ನಲೂ ನಿರ್ಗತಿಕರಾದ ಜನ ಮತ್ತೊಂದು ಕಡೆ ಎಷ್ಟೊಂದು ಕಷ್ಟ ಈ ನಿರರ್ಥಕ ಜೀವನವನ್ನು ಹೊತ್ತು ಸಹಿಸುವುದು 'ಅಂತರಂಗದಲ್ಲೊಂದು ಸ್ವರೂಪ, ಬಹಿರಂಗದಲ್ಲೊಂದು ಸ್ವರೂಪ'

ಇಡೀ ಸೃಷ್ಟಿಯ ಎದುರು ನಿಂತ ಸ್ವರೂಪ ಮತ್ತು ಅರ್ಥಗಳನ್ನು ತನ್ನ ಸೀಮಿತ ಭಾಷೆಯಲ್ಲಿ ಅರ್ಥೈಸಿಕೊಳ್ಳಲಾರದ ಮನುಷ್ಯನ ಪಾಡನ್ನೇ ಧ್ವನಿಸುತ್ತಿದ್ದಾನೆ. ಹಾಗಾಗಿ ವ್ಯಕ್ತಿಯ ವೈಯಕ್ತಿಕ ಕಥನವೊಂದು ಮಾನವೀಯ ಕಥನವೇ ಆಗಿ ಬಿಡುತ್ತದೆ. ಮತ್ತು ಈ ಕಥನ ವೈಯಕ್ತಿಕ ಬದುಕಿನ ಘಟನಾವಳಿಗಳನ್ನು ಮೀರಿ ಒಟ್ಟಾರೆ ಜೀವನದ ಅರ್ಥ ಶೋಧನೆಯತ್ತ ಮುಖಮಾಡುತ್ತದೆ. ಜೀವನದ ಅರ್ಥ ಮತ್ತು ಉದ್ದೇಶಗಳನ್ನು ಒಂದು ತಾತ್ವಿಕ ಜಿಜ್ಞಾಸೆಗೆ ಗುರಿಪಡಿಸಿ ಜೊತಜೊತೆಗೆ ಕಲೆಯ ಅರ್ಥ ಉದ್ದೇಶಗಳನ್ನು ಜಿಜ್ಞಾಸೆಗೂ ಲೇಖಕ ಏಕಕಾಲದಲ್ಲಿ ತೊಡಗಿರುವುದು ಕಾಣಬಹುದಾಗಿದೆ. ಉದಾಹರಣೆಗೆ : ''ಸಾವನ್ನು ಬಲಾತ್ಕಾರದಿಂದಲಾದರೂ ಮರೆತು ಜೀವನಕ್ಕೊಂದು ಅರ್ಥ ರೂಪಿಸಬೇಕು. ಈಗ ಬದುಕಿರುವುದಕ್ಕಿಂತ ಇನ್ನೂ ಬದುಕಬೇಕಾಗಿರುವ ಕಾಲ ನೆನೆಸಿಕೊಂಡರೆ ಬಳಲಿಕೆಯಾಗುತ್ತದೆ. ಯಾರನ್ನಾದರೂ ಪ್ರೇಮಿಸಿ ವಿವಾಹವಾಗಿ ಬೆಚ್ಚಗೆ ಇರಬೇಕು.''[16] ಎನ್ನುವಲ್ಲಿ ಜೀವನ ಪ್ರೀತಿ ಇದೆ.

ಹುಲಿಯೂರಿನ ಸರಹದ್ದು

ಶೀರ್ಷಿಕೆಯು ಎರಡು ಭಿನ್ನ ಆಯಾಮುಗಳನ್ನು ಒಳಗೊಂಡಂತೆ ಇಲ್ಲಿನ 'ಹುಲಿಯೂರು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾಗದೇ ಇಡೀ 'ಮಾನವ ಪರಿಸರ' ಪಸರಿಸಿರುವವಲ್ಲಿ ಹಬ್ಬಿರುವಂತಹದ್ದಾಗಿದೆ. ಸರಹದ್ದು ಎಂಬುದು ಗಡಿ, ಎಲ್ಲೇ ಸೀಮಿತಪ್ರದೇಶ ಎಂಬರ್ಥವನ್ನು ಒಳಗೊಂಡಿದ್ದು ಒಂದು ಪ್ರದೇಶವನ್ನು ಸುತ್ತುವರಿದ

16 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು- ಪುಟ- 78

ಚೌಕಟ್ಟಿಗೆ ಸಂಕೇತವಾಗಿದೆ. ಇಲ್ಲಿ ಮನುಷ್ಯನು ಧರ್ಮ, ದೇವರು, ಜಾತಿ-ಮತ ಸಂಬಂಧಗಳೆಂಬ ಗಡಿಯನ್ನು ಚೌಕಟ್ಟನ್ನು ಹಾಕಿಕೊಂಡು ಬದುಕು, ಜೀವ, ಎಂಬ ಊರಿನಲ್ಲಿ ಆ ಚೌಕಟ್ಟನ್ನು ಮೀರಲಾರದ ಸ್ಥಿತಿಯನ್ನು, ಮೀರಿದರೆ ತತ್ಪರಿಣಾಮವಾಗಿ ಅನುಭವಿಸುವ ಯಾತನೆಯನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಆಹಾರದ ಸರಪಳಿಯಂತೆ, ಜೀವನದ ಸರಪಳಿಯಲ್ಲಿ ಒಬ್ಬರು ಇನ್ನೊಬ್ಬರನ್ನು ಮುಕ್ಕಿ ಜೀವಿಸುವುದೇ ಆಗಿದೆ. ಒಬ್ಬರು ಇನ್ನೊಬ್ಬರ ಕೈಗೊಂಬೆಗಳಾಗಿರಬೇಕೆಂಬ ಪ್ರಯತ್ನ ನಡೆದೇ ಇರುತ್ತದೆ. ಆದರೆ ಜಾತಿ-ಧರ್ಮಗಳೆಂಬ ಸಂಕೋಲೆಗಳಿಂದ ಬಿಡಿಸಿ ಸ್ವಂತ ಅಸ್ತಿತ್ವಕ್ಕಾಗಿ ಹಂಬಲಿಸುವ ಸೋಮುವೂ ಸಹ ತನ್ನನ್ನು ಪ್ರತಿನಿಧಿಸುವ 'ಗಿಡುಗ'ನನ್ನು ರಕ್ಷಿಸುವ ಸಲುವಾಗಿ ಈ ಗರುಢ ವಿಷ್ಣುವಿನ ವಾಹನ ಇದನ್ನು ಕೊಂದರೆ ಸಿಬ್ಬಲುಗುಡ್ಡೆ ಭಟ್ಟ ಹೇಳಿದಂತೆ ರಣಬಿಸಿಲಿನಲ್ಲಿ ನರಕಕ್ಕೆ ನಡೆದೇ ಹೋಗಬೇಕಾದೀತು. ಎಂಬ ಧಾರ್ಮಿಕ ತತ್ವ ಎತ್ತಿಯೇ ತಾನೂ ಈ ಸರಹದ್ದಿನಲ್ಲೇ ವಿಹರಿಸುತ್ತಾ ಮೂಢನಂಬಿಕೆಯ ತೆಕ್ಕೆಗೆ ಒಳಗಾಗುತ್ತಾನೆ.

ಗಿಡುಗ, ಗರುಡ ದೇವರು ಅದನ್ನು ಹೊಡೆಯೋದಿಲ್ಲ' ಎನ್ನುವ ಸೋಮುವಿಗೆ ತಂದೆ ರಂಗಪ್ಪಗೌಡ ಈ ತಾಯ್ಗಂಡ ಮುಂಡೇವಕ್ಕೆಲ್ಲ ದೇವರಂತೆ, ದನಾ ತಿನ್ನೋರಿಗೆ ಗೊಬ್ಬರದಾಣೆ, ಯಾವುದೇ ಜಾತಿ ಹುಡ್ಗೀನ ಮದುವೆ ಆದೇನು ರೀತಿ - ಜಾತಿ-ಕುಲ ತೊರೆದೋರಿಗೆ ಇನ್ನೂದೇವರು ದಿಂಡ್ರು' ಎಂಬ ಬೈಗುಳದಲ್ಲಿ ಜಾತಿ-ಕುಲಗಳೊಂದಿಗೆ ದೇವರು-ದಿಂಡ್ರು-ಧರ್ಮ ಹೀಗೆ ಒಂದಕ್ಕೊಂದು ತಳಕು ಹಾಕಿಕೊಂಡೇ ನಮ್ಮ ಸಂಸ್ಕೃತಿಯಲ್ಲಿ ಬೇರು ಬಿಟ್ಟಿವೆ ಎಂಬುದನ್ನು ತಿಳಿಯಬಹುದು.

ಇಲ್ಲಿ ಈಗಾಗಲೇ ಆಕ್ರಮಿಸಿದ ಕೋಳಿಮರಿಯನ್ನು ಹೊತ್ತೊಯ್ಯಲೇ ಬೇಕೆಂದು ನಭದಲ್ಲಿ ಹಾರಾಡುವ ಗಿಡುಗ, ಹಾಗೂ ಈಗಾಗಲೇ ತಾನು ಪ್ರೀತಿಸಿದ ಅನ್ಯಜಾತಿಯ ನಳಿನಾಕ್ಷಿಯನ್ನು ಪರಂಪರೆಯಿಂದ ಮುಕ್ತವಾಗಿ ವಿವಾಹವಾಗಲೇ ಬೇಕೆಂಬ ಸೋಮುವಿನ ಹಂಬಲ ಒಂದೇ ಆಗಿದೆ. ಇಲ್ಲಿ ಹದ್ದು-ಸೋಮು ಇವರ ಧೈರ್ಯ ಒಂದೇ ತೆರನಾದುದು. ಹೇಗಾದರೂ ಮಾಡಿ ಪರಂಪರೆಯನ್ನು ಮೀರುವ ಆಧುನಿಕ ಮನಸ್ಸು ಅವನಿಗಾಗಿದೆ. ಆದರೆ ಸುತ್ತಲಿನ ವಾತಾವರಣ, ಸಮಾಜದ ಬಂಧನ, ಜಾತಿಯ ಸಂಕೋಲೆ, ತಂದೆಯ ಅಧಿಕಾರಶಾಹಿ ವರ್ತನೆ, ತನ್ನನ್ನು ಮದುವೆಯಾಗಲಿರುವ ಇನ್ನೊಂದು ಹುಡುಗಿ ಇವೆಲ್ಲ ಅವನಿಗೆ ಸಂಕೋಲೆಗಳಾಗುತ್ತವೆ. ''ನಾನು ಈ ಅಪ್ಪನಿಗಾಗಿ ಅವನು ಅವನಪ್ಪನಿಗಾಗಿ, ನನ್ನ ಮಗನಿಗಾಗಿ ಅಯ್ಯೋ ಈ ಹುಲಿಯೂರಿನ ಸರಹದ್ದಿನಲ್ಲಿ ಒಂದು ಇನ್ನೊಂದಕ್ಕಾಗಿ

ಬದುಕಿದೆ''[17] ತನಗಾಗಿ ಬದುಕುವ ಯಾರೊಬ್ಬನನ್ನು ಕಾಣದ ಸ್ಥಿತಿಯು ಅಲ್ಲಮನ ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ, ನಿನಗಾಗಿ (ತನಗಾಗಿ) ಸತ್ತವರಾರನು ಕಾಣೆ' ಎಂಬ ಮಾತನ್ನೇ ನೆನಪಿಸುತ್ತದೆ.

ರಕ್ತಗತವಾಗಿ ವ್ಯಕ್ತಿಯಲ್ಲಿ ಸೇರಿಬಂದಿರುವ ಸಂಪ್ರದಾಯದ ಮಡುವಿನಲ್ಲಿ ಚಕ್ರದಂತೆ ಯಾಂತ್ರಿಕವಾಗಿ ಜೀವನ ಸವೆಸುವುದರಲ್ಲಿಯಾವುದೇ ಅರ್ಥವಿಲ್ಲ. ಆದ್ದರಿಂದ ತೇಜಸ್ವಿಗೆ 'ಹೊಂದಾಣಿಕೆಯಲ್ಲಿ ನಂಬಿಕೆಯಿಲ್ಲ, ಬದಲಾವಣೆಯಲ್ಲಿ ನಂಬಿಕೆಯಿದೆ' ಬದಲಾಗಲೇ ಬೇಕೆಂಬ ಹಂಬಲವಿದೆ. ಈ ಬದಲಾವಣೆಗೆ ಅಡ್ಡಿಯಾದಂತಹ ಸಂಪ್ರದಾಯ ಅದನ್ನು ಒಪ್ಪಿದ ತಂದೆ ರಂಗೇಗೌಡ, ಆಳು ಲಿಂಗ ಇದಕ್ಕೆ ಇಂಬುಕೊಡುವ ಸಿಬ್ಬಲಗುಡ್ಡೆಭಟ್ಟ 'ಇಲ್ಲಿ ಎಲ್ಲರೂ ಗುಲಾಮರೇ, ಎಲ್ಲರೂ ಹಲ್ಕಾಗಳೇ, ಇವರನ್ನೆಲ್ಲ ಕೊಲ್ಲುವಂತ ಪುಟಾಣಿ ಪ್ರಳಯ ನಡೆದರೆ ಸಂಪ್ರದಾಯಕ್ಕೆ ಜೋತುಬಿದ್ದವರ ಗುಂಪೊಂದು ನಶಿಸಿ ನವಪೀಳಿಗೆಯು ಉದಯಿಸಲೆಂಬ ಆಶಾವಾದ ಆವರಿಸಿದೆ. 'ವಿನಾಶವಿಲ್ಲದೆ ಸೃಷ್ಟಿ ಸಾಧ್ಯವಿಲ್ಲ' ಎಂಬ ತೀರ್ಮಾನಕ್ಕೆ ಬರುತ್ತಾನೆ. ಜೊತೆಗೆ ಬಸ್‌ಸ್ಟ್ಯಾಂಡಿನ ಬಳಿ ಸೋದರತ್ತೆ ಇದ್ದ ಕಾರಣ ಪ್ರೇಯಸಿ ನಳಿನಾಕ್ಷಿ ಸೋಮುವಿನಿಂದ ನುಸುಳಿಕೊಂಡಾಗ ಅವಳ ಮೇಲೂ ರೋಷಕಾರಿ ಇದಕ್ಕೆ ಕಾರಣವಾದ 'ಇಡೀ ಹುಲಿಯೂರಿನ ಪಿಶಾಚ ಪರಿಧಿಯಿಂದ ಸೃಷ್ಟಿಯನ್ನು ಪಾರುಮಾಡಲೇಬೇಕು.' ಎಂಬ ತೀರ್ಮಾನಕ್ಕೆ ಬರುತ್ತಾನೆ. ಆದರೆ ಕ್ರಾಂತಿಕಾರಕ ಬದಲಾವಣೆಯೊಂದಿಗೆ ಜಗತ್ತಿನ ಸೃಷ್ಟಿಕರ್ತನಂತೆಳಸುವವನಿಗಾಗುವ ಗತಿ ಎಂಥದ್ದು ಎಂಬುದನ್ನು 'ಶೂನ್ಯ ಬಿಲದ ಬಾಯಿಯಿಂದ ಹೊರಬರುವ ತಮ್ಮ ಬಿಲದ ಪರಿಧಿ ಮೀರುವ ಈ ಕ್ಷುದ್ರ ಜಂತುಗಳನ್ನು ಕೋಳಿತಿನ್ನುವ , ಕೋಳಿಯಿಂದಲೂ ಪಾರಾದ ಮಳೆಹುಳುಗಳನ್ನು ಗುಬ್ಬಚ್ಚಿ ಅಂತರ್ದಹನ ಮಾಡಿದ್ದನ್ನು ಕಂಡು ತನ್ನ ಗತಿಯೂ ಇದೇ ತೆರನಾದದ್ದೇ ಎಂಬ ತೀರ್ಮಾನ ಕ್ಕೆ ಬಂದು ಮೌನವಾಗುತ್ತಾನೆ. ತಾನು ಸಹ ತನ್ನ ಹುಲಿಯೂರಿನಿಂದ ಮತ್ತುತಂದೆ ತಾಯಿಗಳಿಂದ ಬಿಡಿಸಿಕೊಂಡು ಹೊರಟರು ಮತ್ತೊಂದು ಸಮಾಜದಲ್ಲಾದರೂ ತಾನು ಸಂಕೋಲೆಗೆ ಸಿಕ್ಕಿಬೀಳುವೆನೆಂಬ ಭೀತಿ ಅವನಲ್ಲಿ ನೆಲೆಯೂರುತ್ತದೆ.

ತೇಜಸ್ವಿ ಇಲ್ಲಿ ಒಬ್ಬನಿಗೆ ಒದಗುವ ದುಃಖವೂ ಮತ್ತೊಬ್ಬನಿಗೆ ಸಂತೋಷದಾಯಕ ವಾಗಿರುತ್ತದೆಂಬುದನ್ನು ಚಿತ್ರಿಸಿದ್ದಾರೆ. ಗೌಡರ ಮನೆಯ ಕೋಳಿಮರಿ ಸಾವು ಆ ಮನೆಗೆ

17 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ- 42.

ದುಃಖ ತಂದರೆ ಕೆಳವರ್ಗದ ಲಿಂಗನಿಗೆ ಆಹಾರ ದಕ್ಕಿತೆಂಬ ಸಡಗರ, ಗಿಡುಗನನ್ನು ಕೊಲ್ಲಬೇಕೆಂಬ ಉತ್ಸಾಹವು ಗೌಡ, ಲಿಂಗ, ನಾಯಿಗೆ ಇದ್ದರೆ ಅದೇ ಸೋಮುವಿಗೆ ದುಃಖದ ಸಂಗತಿ. ಸೋಮು ಪರಂಪರೆ ಮೀರಿ ಬೇರೆ ಜಾತಿಯವಳನ್ನು ವಿವಾಹವಾಗುವ ಉತ್ಸಾಹ ತೋರಿದರೆ ಅದೇ ಉತ್ಸಾಹ ಅವನ ತಂದೆ ತಾಯಿಗೆ ದುಃಖ ತರುವ ಸಂಗತಿಯಾಗುತ್ತದೆ. ಬಹುಶಃ ಒಬ್ಬರು ಸಂತೋಷದಿಂದಿರಬೇಕೆಂದರೆ ಮತ್ತೊಬ್ಬರು ದುಃಖಿತರಾಗಲೇ ಬೇಕೇನೋ ? ಒಂದನ್ನು ಪಡೆಯಬೇಕೆಂದರೆ ಮತ್ತೊಂದನ್ನು ಕಳೆದುಕೊಳ್ಳಬೇಕೇನೋ? ಆದರೆ ಸೋಮು ಈ ಎರಡನ್ನು ಉಳಿಸಿಕೊಳ್ಳುವಲ್ಲಿ ಮಾಡುವ ಪ್ರಯತ್ನ ವಿಫಲವಾಗುವಿಕೆಯನ್ನು ತೇಜಸ್ವಿ ಚಿತ್ರಿಸಿದ್ದಾರೆ. ಲೋಕದಲ್ಲಿನ ಪ್ರೇಮಿಗಳೆಲ್ಲರು ಅಂತಿಮವಾಗಿ ತಮ್ಮ ಸ್ವಾರ್ಥಪರ ಜೊತೆಗೆ ಹಣ, ಅಧಿಕಾರ, ಜಾತಿಯ ಬಂಧನ, ಅಂತಸ್ತು ಇತ್ಯಾದಿಗಳಿಗೆ ಆಕರ್ಷಕರಾಗಿ ನಿಜವಾದ ಪ್ರೇಮಕ್ಕೆ ಗೋರಿಕಟ್ಟಿ ಅಥವಾ ಏನೂ ನಡೆದಿಲ್ಲ ಎಂಬಂತೆ ಹೊಸ ವರ್ತನೆಗೆ ತೊಡಗಿ ಮತ್ಯಾರನ್ನೋ ವಿವಾಹವಾಗಿ ಸುಖಿಸುತ್ತಾರೆ. 'ಮಾತು ಮರೆತು ಹೋದರು ನೆನಪು ನೆನಪಾಗುತ್ತಾ ಇರುತ್ತೆ ಎಂಬ ವಾಸ್ತವಾಂಶವನ್ನು' ಸೋಮುವಿನ ಪಾತ್ರದಲ್ಲಿ ಕಟ್ಟಿಕೊಡುತ್ತಾರೆ.

'ಹದ್ದು ಕೋಳಿಮರಿ ಎತ್ತುವ ಪ್ರಸಂಗವು' 'ಪಾಶ್ಚಾತ್ಯದೇಸಿ'ಯನ್ನು ನೆನಪಿಸುತ್ತದೆ. ಇಲ್ಲಿ ಪಾಶ್ಚಾತ್ಯಕ್ಕೇ ಹದ್ದು, ದೇಸಿ ಕೋಳಿಮರಿಯನ್ನು ಆಕ್ರಮಿಸುವುದು ಸೋಮುವಿಗೆ ಸಂತಸ ತಂದು ಉಳಿದವರಿಗೆ ಆಗಬಾರದ್ದು ಆಯಿತೆಂಬಂತೆ ವರ್ತಿಸಿದರೂ ಮರುಕ್ಷಣವೇ ನಾಯಿ ಡೂಲಿಯ ಬಾಯಿಗೆ ಸಿಕ್ಕಿಬಿದ್ದ ಗರುಡನಲ್ಲಿ ಬಿಡಿಸುವ ಯತ್ನದಲ್ಲಿ ಗರುಡನ ಉಗುರುಗಳು ಅವನ ಅಂಗೈಗೆ ಸಿಕ್ಕಿ ಅತೀವ ಯಾತನೆಯಾಗಿ ತಾನೇ ಅವರ 'ಕತ್ತನ್ನು ಕಟಕಟನೆ ಜಗಿದು ಅಪ್ಪ ಅಮ್ಮರ ಮೇಲಿನ ರೋಷವನ್ನೆಲ್ಲ ಹೊರ ಹಾಕುವಂತೆ ವೀಳ್ಯದೆಲೆ ಅಗಿಯುವಂತೆ ಕಚಕಚ ಜಗಿಯುತ್ತಾನೆ. ಹದ್ದಿಗೂ ಒಂದು ಹದ್ದು ಇರುತ್ತದೆ. ಬದಲಾವಣೆ ತರಬೇಕೆನ್ನುವ ಅವನ ಮನಸ್ಸು ಸೋಲುತ್ತದೆ. ಅವನ ವ್ಯಕ್ತಿತ್ವದ ಸಂಘರ್ಷದಲ್ಲಿ ಕೊನೆಗೂ ಅವನ ಬೃಹನ್ನಳೆತನವೇ ಸ್ಥಿರಪಡುತ್ತದೆ.

ಪರಂಪರೆಯ ಗುತ್ತಿಗೆದಾರರಾದ ಗೌಡರಿಗೆ ಒಂದು ರೀತಿ ವಿಜಯೋತ್ಸಾಹ. ಮಗ ಕೊನೆಗೂ ತನ್ನ ಮಾತು ನಡೆಸಿದ. ಗರುಡನನ್ನು ಕೊಂದ. ತನ್ನ ಮಾತಿನ ಮೇರೆಯನ್ನು ಇವನೂ ಮೀರಲಾರ ಎಂಬ ತೀರ್ಮಾನಕ್ಕೆ ಬಂದನು. ಆದರೆ ಸೋಮು ಈಗ ಗರುಡನನ್ನು ಕೊಲ್ಲುವ ಮೂಲಕ ಆಧುನಿಕತೆಯನ್ನು ಈ ಹಿಂದೆಯೇ ಪರಂಪರೆಯನ್ನು ಮೀರಿದ

ಕಾರಣದಿಂದ ತಂದೆಯು ''ಅಯ್ಯೋ, ಜಾತೆಗೆಟ್ಟ ಮುಂಡೇದೆ. ಆಗಲೇ ಕೋವಿ ಲಗಾಯಿಸಿದ್ದರೆ 2 ಕೋಳಿಮರಿಯಾದರೂ ಉಳೀತಿತ್ತಲ್ಲೋ. ಹದ್ದಿನ ರಕ್ತ ಕುಡಿದ ಶ್ವಪಚ ಇನ್ನೇನು, ನಿನಗೆ ಕುಲ ಗೋತ್ರ ? ಯಾರನ್ನಾದರೂ ಮದ್ವೆಯಾದರೂ ಆಗು. ಕೂಡಿಕೆಯಾದರೂ ಆಗು''[18] ಎಂಬ ಮಾತು ಸೋಮು ಈಗಾಗಲೇ ತಮ್ಮ ಧರ್ಮ ಮನೆತನದ ಘನತೆ ಹಾಳುಮಾಡಿದನೆಂಬ ನಿಂದನೆ ತಂದೆ ಮಾತಲ್ಲಿ ವ್ಯಕ್ತವಾಗುತ್ತದೆ. ಜೊತೆಗೆ ಪಾಶ್ಚಾತ್ಯಕ್ಕೂ ಸಂಕೇತಿಸಿದ ಗರುಡನ ಉಗುರು ಸರಿಯಾಗಿ ನಾಟಿದ್ದರಿಂದಲೇ ಇಡೀ ಸಂಪ್ರದಾಯವನ್ನು ಧಿಕ್ಕರಿಸುವ ದಿಟ್ಟತನ ಅವನದಾಗುತ್ತದೆ. ಈ ಪಂಜರದಿಂದ ಪಾರಾಗಬೇಕಾದರೆ ಇಲ್ಲಿಂದ ದೂರಾಗಲೇ ಬೇಕೆಂದು ನಳಿನಿ ನಿಜವಾಗಿ ಪ್ರೀತಿಸಿದ್ದರೆ ಎಲ್ಲರನ್ನೂ ಬಿಟ್ಟು ಬರಲೆಂಬ ಆಶಾದಾಯಕ ಭಾವನೆಯಲ್ಲಿ ಹೊರಡುತ್ತಾನೆ.

ಇಡೀ ಕಥೆಯು ಮನುಷ್ಯ ನಿರ್ಮಿತ ಸರಪಳಿಯಿಂದ ಹೊರಗೆ ಬಂದರೆ ಸೋಲೆ ವಿನಹ ಗೆಲುವಲ್ಲ ಎಂಬುದನ್ನು ಅನೇಕ ಪ್ರಾಣಿ-ಪಕ್ಷಿಗಳ ಸಂಕೇತದೊಂದಿಗೆ ವ್ಯಕ್ತಿಯ ವಿಕಸನಕ್ಕೆ ಮರೆಯಾಗಬಲ್ಲ ಪ್ರೀತಿ, ರಕ್ತಸಂಬಂಧ, ದೇವರು, ಧರ್ಮ, ಜಾತಿಗಳೇ ಇಲ್ಲಿ ಒಂದಕ್ಕೊಂದು ಹೆಣೆದುಕೊಂಡು ಸರಹದ್ದುಗಳಾಗಿದೆ. ಈ ಸರಹದ್ದುಗಳನ್ನು ಪಾರು ಮಾಡಿದವರಿಗೆ ನೋವು ಶಾಶ್ವತವೆಂದು ಹಾಗೂ ಬದಲಾವಣೆ ಕೇವಲ ಒಬ್ಬನಿಂದ ಸಾಧ್ಯವಾಗದೆ ಸಮುದಾಯದ ಒತ್ತಾಸೆಯಿಂದ ಮಾತ್ರ ಸಾಧ್ಯ ಎಂಬುದನ್ನು ಧ್ವನಿಸುತ್ತದೆ.

---

18 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ-43.

ಅಧ್ಯಾಯ - ೩

ಮಾನವ ದುರಂತ ಮತ್ತು ಉನ್ನತಿಯ ಅನಾವರಣ

ಸೃಷ್ಠಿಯಲ್ಲಿ ಎಲ್ಲರೂ ಒಂದೇ ಮೂಲದಿಂದ ಬಂದವರಾದರೂ, ಪಂಚ ಭೂತಗಳಾದ ಗಾಳಿ, ನೀರು, ಬೆಳಕು, ಆಕಾಶ, ಭೂಮಿ ಎಲ್ಲರಿಗೂ ಒಂದೇ ಆದರು. ಸುಖ-ದುಃಖ, ಹುಟ್ಟು-ಸಾವು, ಆಸೆ-ಆಕಾಂಕ್ಷೆ, ಎಲ್ಲರಿಗೂ ಒಂದೇ ತೆರನಾಗಿದ್ದರೂ ಅರ್ಥಹೀನವಾದಂತಹ ಧರ್ಮ, ಜಾತಿಗಳ ಬಲಿಷ್ಠ ತೆಕ್ಕೆಯಲ್ಲಿ ಇಂದು ಮಾನವೀಯತೆ, ಪ್ರೀತಿ, ವಾತ್ಸಲ್ಯ, ಪ್ರೇಮಗಳೆಲ್ಲ ಬಲಿಪಶುಗಳಂತಾಗಿವೆ. ಇಂದು ಹಿಂದು, ಮುಸ್ಲಿಂ, ಕ್ರಿಸ್ತ ಎಲ್ಲಾ ಧರ್ಮಗಳು ವಿವಿಧ ಪಂಗಡಗಳಾಗಿವೆ. ಜಾತಿಯಲ್ಲಿ ಅನೇಕ ಉಪಜಾತಿಗಳಾಗಿವೆ. ಅಂದರೆ ಅವಿನ್ನು ಬಲಿಷ್ಠವಾಗಿವೆ. ತತ್ಪರಿಣಾಮವಾಗಿ ಮಾನವೀಯ ಮೌಲ್ಯಗಳು ನಶಿಸಿ ಅಮಾನವೀಯತೆ ತಾಂಡವಾಡುತ್ತದೆ. ಈ ಪರಿಸರದಲ್ಲಿ ಯಾರು ಯಾರನ್ನೂ ನಂಬುವಂತಿಲ್ಲ. ತಾಯಿಯ ವಾತ್ಸಲ್ಯವೇ ನಂಜಾಗುವ ಪ್ರೀತಿಯೇ ವಿಷವಾಗುವ ಪರಿಸ್ಥಿತಿ ಸಹಜವೆಂಬಂತೆ ಸರ್ವೇಸಾಮಾನ್ಯವಾಗಿದೆ. ಸ್ವಾರ್ಥದಾಹವುಳ್ಳವರು ಒಣಮರಕ್ಕೆ ನೀರೆರೆಯಲಾರದ ಸ್ಥಿತಿಗೆ ಬಂದಿದ್ದಾರೆ. ಅದನ್ನು ಚಿಗುರಿಸುವ ಪ್ರಯತ್ನಕ್ಕಿಂತ ಚಿಗುರನ್ನು ದಮನ ಮಾಡುವ ಪ್ರವೃತ್ತಿಯೇ ಹೆಚ್ಚಾಗಿದೆ.

'ಅಬಚೂರಿನ ಪೋಸ್ಟಾಫೀಸಿನ' ಬೋಬಣ್ಣ ಮೂಲ ಕಸುಬು ವ್ಯವಸಾಯವನ್ನು ಬಿಟ್ಟು ಪೋಸ್ಟ್‌ಮಾಸ್ತರರ ವೃತ್ತಿಯಿಂದ ಅವನತಿಯನ್ನು ಹೊಂದಿದರೆ ಅವನತಿಯಲ್ಲಿ ಬರುವ ಸೂರಾಚಾರಿಯು ಸಹ ಮೂಲಕಸುಬು ಕಲ್ಲಿನ ಕೆತ್ತನೆ ಕೆಲಸ, ದೇವರ ವಿಗ್ರಹ, ಸ್ಥಂಭ, ತುಳಸೀಕಟ್ಟೆ, ಕೆತ್ತನೆ ಕೆಲಸ ಮಾಡುತ್ತಿದ್ದವನು. ಇಸ್ಲಾಪುರದಲ್ಲಿ ಕೊಕ್ಕರೆ ಮೂಗಿನ ಬಿಡುಗಣ್ಣ ಕಸುಬಾಯಿಯ ಮಡಕೆ ಮಾಲೆಗಳ ಮಾರಿಗೊಂಬೆ, ಅದಕ್ಕೆ ಕೋರೆಹಲ್ಲು, ಉಗ್ರದೇವತೆಗಳು, ಅವರಿವರ ಮನೆಯ ಒರಳುಕಲ್ಲು ಸೃಷ್ಟಿಸುವುದು ಮಂತ್ರ, ತಂತ್ರ, ತಾಯಿತ ಮಾಡುವುದು, ಮದ್ದು ತೆಗೆಯುವುದು, ಬ್ರೋಕರ್ ಕೆಲಸ ಇದೆಲ್ಲ ಸೂರಾಚಾರಿಯ ದುರಂತವಾಗುತ್ತದೆ.

ಹಳೇಬೀಡಿನ ಪನ್ನಾಪುರದವಾಸಿ ಅನಾಥ ಸೂರಾಚಾರಿಯು ಕಾರ್ಯನಿಮಿತ್ತ ಇಸ್ಲಾಪುರಕ್ಕೆ ಬಂದಾಗ ವಾಸಾಚಾರಿಯು ತನ್ನ ಮಗಳು 'ಯಶೋಧೆ'ಯನ್ನು ಸೂರಾಚಾರಿಗೆ ವಿವಾಹ ಮಾಡುವುದು ಅವನಿಗೆ ಜೀವನ ನೀಡಿದಂತಾದರೂ ಆ ಮಲೆಸೀಮೆಯ ಥಂಡಿ,

ಹವೆಯಿಂದಾಗಿ ಗೂರಲು, ಕೆಮ್ಮು, ಉಬ್ಬಸಕ್ಕೆ ತುತ್ತಾದ ಕಾರಣ ಹೆಂಡತಿಯನ್ನು ಕರೆದುಕೊಂಡು ತನ್ನೂರು ಪನ್ನಾಪುರಕ್ಕೆ ಹೋಗುವ ನಿರ್ಧಾರ ಕೈಗೊಳ್ಳುತ್ತಾನೆ. ಆದರೆ ತನ್ನ ಪರಿಸರ ಬಿಡಲು ಇಷ್ಟವಿಲ್ಲದ ಹೆಂಡತಿ ಯಶೋಧೆಗೆ ದೆವ್ವ ಹಿಡಿದ ಕಾರಣ ಇಸ್ಲಾಪುರದಲ್ಲೇ ನೆಲೆಯೂರುವ ಅನಿವಾರ್ಯ ಅವನದಾಗುತ್ತದೆ ತನ್ನ ಹೆಂಡತಿಯ ಸ್ವಭಾವದ ಬಗ್ಗೆ ತನಗಿರುವ ಸಿಟ್ಟನ್ನು ತುಂಬಾ ಕ್ರೂರವಾದ ಕಲೆಗಳನ್ನು ಚಿತ್ರಿಸುವುದರ ಮೂಲಕ ತೀರಿಸಿಕೊಳ್ಳತೊಡಗುತ್ತಾನೆ.

ತನ್ನ ಹೆಂಡತಿಯ ಭೂತ ಬಿಡಿಸಲು ಅಜಮೀರಿನ ಫಕೀರಪ್ಪನ ಜೊತೆ ಭೂತೋಚ್ಚಾಟನಾ ವಿಧಾನ ಕೈಗೊಂಡಿದ್ದರಿಂದ ಆಕೆ ಮತ್ತೆ ನವೆದು ಮಾರಿಗೊಂಬೆ ಸ್ಥಿತಿಗೆ ಮುಟ್ಟುತ್ತಾಳೆ. ಈ ಕರ್ಮಜಾಲದ ವಿಮುಕ್ತಿಗೂ ಎಷ್ಟೋ ಬಾರಿ ಯೋಚಿಸಿ ಸಾಧ್ಯವಾಗದೆ ಸುಮ್ಮನಿರುತ್ತಾನೆ.

'ಅವನತಿ' ಕತೆಯಲ್ಲಿ ಬರುವ ಮತ್ತೊಂದು ಪಾತ್ರ ಇಷ್ಟವಿರದ ಸುಬ್ಬಯ್ಯನ ಹೆಂಡತಿ 'ಗೌರಿ'ಯದು ಮೂಗು, ಕಣ್ಣು, ಕೂದಲು, ತುಟಿ, ನಡೆ, ಚರ್ಮ ನಿಲ್ಲುವ ಭಂಗಿಯ ವಿನ್ಯಾಸವನ್ನು ಅಲ್ಲಿನ ಅರಸಿಕ ಜನರು "ಈ ಬಿಲ್ಲೋರ ಜಾತಿಗೆ ಹೆಂಗೆ ಮಾರಾಯ ಇಂತ ಬಾಲೆ ಹುಟ್ಟು ? ಯಾವ ಬ್ರಾಂಬ್ರಿಗೆ ಅಡ್ಡ ಹುಟ್ಟೋ ?"[1] ಎಂಬ ವಕ್ರ ಮಾತುಗಳು ಶ್ರೀಮಂತರು ಬಡವರನ್ನು ನಡೆಸಿಕೊಳ್ಳುವ ರೀತಿಯನ್ನು ಜನರ ಅಜ್ಞಾನವನ್ನು ಹೊರಹಾಕುತ್ತದೆ. ಅವಳ ಸೌಂದರ್ಯದ ಅರಿವು ಬಾಲಕನಾದ ಸುಬ್ಬಯ್ಯನ ಚಿಕ್ಕಪ್ಪನ ಮಗ ಗೌರಿಯ ಮೈದುನ 'ವಿಶ್ವನಾಥ'ನಿಗೆ ಮಾತ್ರ ಇರುತ್ತದೆ.

ಗೌರಿ-ಸುಬ್ಬಯ್ಯ ದಂಪತಿಗಳಿಗೆ ಹುಟ್ಟುವ 3 ಮಕ್ಕಳು ಸಾವನ್ನಪ್ಪುವ ಸಂಗತಿಗೆ ಸುಬ್ಬಯ್ಯನಲ್ಲೇ ದೋಷವಿದೆ ಎಂದು ಈರೇಗೌಡ ಅನುಮಾನಿಸಿದರೆ ಹುಟ್ಟಿ ಒಂದು ತಿಂಗಳ ನಂತರ ಸಾಯುವುದರಿಂದ 'ಸೈ ಬಿಡು ಇದು ಮಲೆದೋಸಾನೆ' ಎಂದು ತಿಳಿದ ಸೂರಾಚಾರಿಯು ಗೌರಿಯಲ್ಲಿ ದೋಷವಿದೆ ಎಂದು ತಿಳಿದು 'ಮಲೇಲಿ ಮೇಲುಗಡೆ ಒಂದು ನೀಲಿ ನರ ಇರ್ತದೆ. ಅದರೊಳಗೆ ಹುಳ ಇರ್ತದೆ. ಅರಿಶಿನ ಕೊಂಬಿನ ಕೆಂಡ ಮಾಡಿ ಅಮಾವಾಸ್ಯೆಯ ದಿನ ಅದನ್ನು ಸುಡಬೇಕೆಂದಾಗ ಕೋಪಗೊಂಡ ಈರೇಗೌಡ ಒಪ್ಪದುದಕ್ಕೆ ಕಾರಣ ಗೌರಿಯ ಸೌಂದರ್ಯದ ಬಗ್ಗೆ ಅವನಿಗಿರುವ ವ್ಯಾಮೋಹ ಸುಬ್ಬಯ್ಯನ ಪುರುಷತ್ವದ ಬಗ್ಗೆ ಶಂಕೆ. ಆದ್ದರಿಂದಲೇ ಇನ್ನೊಂದು ಮಗು ಸತ್ತಾಗ ನೋಡೋಣ ಎನ್ನುತ್ತಾನೆ. ಆದರೆ ಗಂಡ ಸುಬ್ಬಯ್ಯ ಸೂರಾಚಾರಿಗೆ ಬೆಂಬಲ ನೀಡಿದ್ದರಿಂದ ಸುಂದರವಾದದ್ದನ್ನು

---

1 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಪುಟ-28

ಭಗ್ನಗೊಳಿಸುವ ಮನಸ್ಥಿತಿಯಿಂದಾಗಿ ಸಂಗಾತಿಗಾಗಿ ತುಡಿತ ಇದ್ದುದರಿಂದಲೇ ಏನೋ ಅವಳ 'ಮೊಲೆ ಸುಡುವಷ್ಟು ಪತಿತನಾಗುತ್ತಾನೆ ಸೂರಾಚಾರಿ ಒಂದು ಕಡೆಯಾದರೆ ಬರೆ ಇಡುವವರೆಗೂ ಹೋಗುವ ಸಮಾಜದ ಕೆಟ್ಟಕಣ್ಣು ಮತ್ತೊಂದು ಕಡೆ ತನ್ನ ಹೆಂಡತಿಯನ್ನೇ ವಾಸಿಮಾಡದವನು ಅನ್ಯ ಸ್ತ್ರೀ ಗೌರಿಯ ಖಾಯಿಲೆ ವಾಸಿಮಾಡುವ ಹುಂಬತನವು ಹಾಗೂ ಪುರುಷನಲ್ಲಿ ಹುಳುಕು ಕಾಣದೆ ಸ್ತ್ರೀಯರಲ್ಲಿ ಮಾತ್ರ ದೋಷ ಕಾಣುವ ಪುರುಷರ ದಬ್ಬಾಳಿಕೆಯಿಂದಾಗಿ ವಾಸ್ತವ ಸಂಗತಿ ಮರೆಮಾಚುವಿಕೆಯ ಪರಿಸ್ಥಿತಿ ಕಾಣಬಹುದು.

ಮಕ್ಕಳು ಸಾಯಲು ಗೌರಿ ಕೊಡುವ ಕಾರಣವೇ ಬೇರೆ ತನ್ನ ಜಾತಿಯವರು ಮಂಗನನ್ನು ತಿನ್ನಬಾರದು . ಆದರೆ ತನ್ನ ಮಾವ ಭೈರಪ್ಪ ಮಂಗತಿಂದಿದ್ದರಿಂದಲೇ ಎಂಬ ಅಸಹ್ಯ ಅವಳಿಗಿದೆ.

ಇಲ್ಲಿ ವಿರೋಧಾಭಾಸ ಎಂದರೆ 'ಮಾವ ಭೈರಪ್ಪನ ಕಣ್ಣಿನ ದೋಷ ಪರಿಹಾರಕ್ಕೆ ಔಷಧಿಯಾಗಬಲ್ಲ ಗೌರಿಯ ಎದೆ ಹಾಲೇ ಅವಳ ಮಕ್ಕಳಿಗೆ ವಿಷವಾಗಿ ಪರಿಣಮಿಸುತ್ತದೆ' ಎಂಬ ಮಾತಿನಲ್ಲಿ ಹುರುಳಿಲ್ಲ.

ವ್ಯಕ್ತಿಯ ಸ್ವಾರ್ಥಪರ ಚಿಂತನೆ ಅವನ ಅವನತಿಗೆ ಕಾರಣವಾಗಿರುವುದನ್ನು ಚಿತ್ರಿಸಿದ್ದಾರೆ.

ಗುಡುಗು ಹೇಳಿದ್ದೇನು ?

ಮಾನವೀಯ ಸಂಬಂಧಗಳ ಮಧುರ ಬಾಂಧವ್ಯ ಬೆಸೆಯುವಿಕೆಯಲ್ಲಿ ಇರುವ ಅರ್ಥ ಶ್ರೀಮಂತಿಕೆಯನ್ನು ಗುಡುಗು ಹೇಳುತ್ತದೆ. ಮನುಷ್ಯ ಆಧುನಿಕ ಯುಗದಲ್ಲಿ ಆರ್ಥಿಕತೆಯ (ಹಣದ) ಗುಲಾಮನಾಗಿ ಮಾನವೀಯತೆಯನ್ನು ಮರೆತಾಗ ಅದನ್ನು ಜಾಗೃತಗೊಳಿಸುವ ಮಾರ್ಗನಿಯಂತೆ ಮನುಷ್ಯನಲ್ಲಡಿಗಿರುವ ಹಣದ ದಾಸ್ಯವನ್ನು ಹೋಗಲಾಡಿಸಿ ಇಲ್ಲಿ ಮಾನವೀಯತೆ ನೆಲೆದೋರಿಸಲು ಗುಡುಗು ಆರ್ಭಟಿಸುತ್ತದೆ.

ಕಲಿಯುಗದಲ್ಲಿ ಮಾನವರ ದೂರ್ತವರ್ತನೆ ಅಟ್ಟಹಾಸ ಮೀರಿದಾಗ ಕಲ್ಕಿಯ ಉದಯವನ್ನೇ ಗುಡುಗು ಹೇಳುತ್ತದೆ.

ಯಾಂತ್ರಿಕ ಯುಗದಲ್ಲಿ ಮನುಷ್ಯ ಎಲ್ಲವನ್ನು ವ್ಯಾಪಾರದ ದೃಷ್ಟಿಯಿಂದಲೇ ಕಾಣತೊಡಗುತ್ತಾನೆ. ಲಾಭವಿಲ್ಲದೆ ಯಾವುದನ್ನೂ ಆತ ಇರಗೊಡುವುದಿಲ್ಲ. ಇಲ್ಲಿ ತಂದೆ-ತಾಯಿ ಮಕ್ಕಳ ರಕ್ತಸಂಬಂಧವೂ ಈ ವ್ಯಾಪಾರಕ್ಕೆ ಒಳಗಾಗುವಿಕೆಯು ಸಮಾಜದ ರೋಗಕಾರಕ ಸ್ಥಿತಿಯೇ ಇದು ಹೀಗೆ ಮುಂದುವರೆದರೆ ಅದಾವ ತಾರಕಕ್ಕೆ ಮುಟ್ಟುತ್ತದೋ?

ತೇಜಸ್ವಿಯವರ ಎಲ್ಲಾ ಬರವಣಿಗೆಗಳನ್ನು ಗಮನಿಸಿದರೆ ಯಾವುದೋ ಒಂದು ಸಂವೇದನೆ ಇದ್ದೇ ಇರುತ್ತದೆ. ಪೋಷಕರು ಮಕ್ಕಳನ್ನು ಹಡೆಯುವುದೇ ಯಾವುದೋ ಒಂದು ಸ್ವಾರ್ಥಕ್ಕಾಗಿ ಅದು 'ದಿಕ್ಕಿಲ್ಲದ ತಮಗದೆ ಅಂತ್ಯಕಾಲದಲ್ಲಿ ಕೊಳ್ಳಿ ಇಡಲೆಂದೋ? ಶ್ರೀಮಂತನಾಗುವ ಹಂಬಲದಿಂದದಲೋ ? ತಮ್ಮ ವಂಶಪಾರಂಪರ್ಯ ಆಸ್ತಿ, ಧರ್ಮ, ಜಾತಿ-ಕುಲ-ಕಸುಬನ್ನು ಉಳಿಸಲೆಂದೋ ? ಬಂಜೆತನ ನಿವಾರಿಸಲೋ ಒಟ್ಟಾರೆಯಾಗಿ ಸ್ವಾರ್ಥವಿಲ್ಲದ ನಿಸ್ವಾರ್ಥ ಬದುಕು ಕಾಣುವುದು ವಿರಳವಾಗಿದೆ. ಮಕ್ಕಳ ಆಸೆ-ಆಕಾಂಕ್ಷೆ ಅಭಿರುಚಿ, ಒಲವುಗಳನ್ನು ಬದಿಗೊತ್ತಿ ಸರ್ವಾಧಿಕಾರಿಯಂತೆ ಮೆರೆಯುವ ಪೋಷಕವರ್ಗ ಒಂದುಕಡೆಯಾದರೆ, ಪ್ರಸ್ತುತ ಕತೆಯಲ್ಲಿ ಪೋಷಕರಿಂದ ಲಾಲನೆ - ಪಾಲನೆ ಪಡೆದು ಬೆಳೆದು ದೊಡ್ಡವರಾದ ಮೇಲೆ ಅವರನ್ನು ಅಮಾನವೀಯವಾಗಿ ನಡೆಸಿಕೊಳ್ಳುವ ಇನ್ನೂ ಮುಂದುವರೆದು ಅವರನ್ನು ಸಾವಿನ ದವಡೆಗೆ ಕೊಂಡೊಯ್ದು ಆ ಸಾವಿನಲ್ಲೂ ಲಾಭವನ್ನೇ ಅಪೇಕ್ಷಿಸುವ ಹಣ ದೊರಕದಾದಾಗ ಪ್ರತಿಭಟಿಸುವ ಹಣಕ್ಕಾಗಿ ಪಡುವ ಮರುಕ ದುಃಖ ಪೋಷಕರು ಗತಿಸಿದಾಗ ಇಲ್ಲದೆ ಕಠಿಣ ಹೃದಯಿಗಳ ಬಗ್ಗೆ ತೇಜಸ್ವಿ ಪುನಃ ಬದಲಾವಣೆಯನ್ನೇ ಬಯಸಿದ್ದಾರೆ.

ಕತೆಯುದ್ದಕ್ಕೂ ಮುದುಕಿ ಮೊಮ್ಮಕ್ಕಳಾದ ಸೋಮು-ಲಕ್ಕರನ್ನು ತಾನು ತುಂಬಾ ಲಾಲಿಸಿ-ಪಾಲಿಸಿರುವೆನೆಂದು ಸಾಧಿಸಲು ನೆನಪಿನ ಕಾಡಿಗೆ ನುಗ್ಗುತ್ತಾಳೆ. ಅವರ ತಂದೆ - ತಾಯಿ ಗತಿಸಿದ ನಂತರ ಅವರ ಲಾಲನೆ - ಪಾಲನೆಯ ಕಷ್ಟ ಕಾರ್ಪಣ್ಯ ತೋಡಿಕೊಳ್ಳುತ್ತಾಳೆ. ಪ್ರತಿಫಲ ದೊರಕದಾದಾಗ "ನನ್ನ ನಿಮ್ಗಿಂದೆ ಅಲಿಯೋ ನಾಯಿ ಮಾಡಿ ನಿಮ್ಮಪ್ಪ ಅಮ್ಮ ಎಲ್ಲಾ ಓದ್ರು"[2] ಎಂಬ ಮಾತಲ್ಲಿ 'ತಂದೆ, ತಾಯಿಗಳನ್ನು ಅಂತ್ಯಕಾಲದಲ್ಲಿ ನೋಡುವ ಹೊಣೆ ಮಕ್ಕಳದ್ದು ಹಾಗೂ ಮಕ್ಕಳನ್ನ ಪೋಷಿಸಿ ಒಂದು ನೆಲೆ ಕಾಣಿಸುವುದು ತಂದೆತಾಯಿಗಳು' ಪಾಲಿಸಲೇ ಬೇಕಾದ ಕರ್ತವ್ಯ ಎಂಬ ಧ್ವನಿ ಹೊರಹೊಮ್ಮುತ್ತದೆ. ಏಕೆಂದರೆ 'ವಿದ್ಯೆ ಕಲಿಸದ ತಂದೆ, ಬಿದ್ದಿರಲು ಬಂದು ನೋಡದ ತಾಯಿ, ಕಷ್ಟಕಾಲಕ್ಕಾಗದ ಬಂಧುಗಳು ಇದ್ದು ಸತ್ತಂತೆ' ಎಂಬ ಮಾತಿನಂತೆ ಕಾಲಾನಂತರ ಅವರ ಪೋಷಣೆಯ ಹೊಣೆ ಮಕ್ಕಳದ್ದೂ ಆಗಿರುತ್ತದೆ. ಕತೆ ಆರಂಭವಾಗುವುದೇ ಸೋಮಾರಿ ಸಹೋದರರಾದ ಸೋಮು-ಲಕ್ಕರು ಚಿಕ್ಕನೂರು ಸುಬ್ಬೇಗೌಡರ ಒಕ್ಕಲನ್ನು ತ್ಯಜಿಸಿ ಕಡಿದಾಳು ಶಾಮಣ್ಣಗೌಡರ ಬಳಿಹೋಗುವಾಗ ತೀರ್ಥಹಳ್ಳಿಯಿಂದ ಕೊಪ್ಪಕ್ಕೆ ಹೋಗುವ ಟಾರ್ ರಸ್ತೆಯಲ್ಲಿ ಕಾರಿನ ಧ್ವನಿಯನ್ನು ಕೇಳಿ ಮುದುಕಿಯ್ನ ನಡುರಸ್ತೆಯಲ್ಲಿ ಬಿಟ್ಟು ತಾವು

2 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ-21

ಬಚಾವಾಗುವ ಹಿನ್ನೆಲೆಯು 'ಮಂಜಪ್ಪನ ಅಪ್ಪ ಬಸ್ಸಿಗೆ ಸಿಕ್ಕಿ ಸತ್ತದ್ದು. ಅದಕ್ಕಾಗಿ ಕೋರ್ಟು ಎರಡುನೂರು ರೂಪಾಯಿಗಳ ಪರಿಹಾರ ಧನ ಕೊಡಿಸಿದ ಸಂಗತಿ ಸದಾ ಅವರನ್ನು ಕಾಡುತ್ತಿರುತ್ತದೆ. ಮಂಜಪ್ಪನಿಗೆ ಅಪ್ಪ ಇದ್ದಾಗಲೂ ಲಾಭ' ಎಂದುಕೊಳ್ಳುವ ಅವರ ಮನಸ್ಥಿತಿಯು ಅಜ್ಜಿಯ ಸಾವನ್ನೇ ಅಪೇಕ್ಷಿಸಿ ತನ್ಮೂಲಕ ತಾವು ಈ ರೀತಿಯ ಹರಾಮಿ ಹಣ ಪಡೆಯಬಹುದೆಂಬ ದುರಾಸೆಯೇ ಆಳವಾಗಿ ನೆಲೆಯೂರಿತ್ತು. ಏಕೆಂದರೆ ಹೇಗಾದರೂ ಮಾಡಿ ಹಣಸಂಪಾದಿಸಬೇಕೆಂಬ ಅವರ ತೀರ್ಮಾನ ಅಜ್ಜಿಯ ಸಾವಿಗೆ ಕಾರಣವಾಗುತ್ತದೆ.

ತೇಜಸ್ವಿಯ ಪ್ರಕಾರ ಬದುಕಬೇಕು ನಿಜ. ಬರೀ ಬದುಕುವುದಲ್ಲ ಚೆನ್ನಾಗಿಯೇ ಬದುಕ ಬೇಕೆಂಬ ನಿಲುವು ಅವರದು. ಆದರೆ ತಾವು ಯಾವ ರೀತಿ ಬದುಕುತ್ತಿದ್ದೇವೆ ? ಹೇಗೆ ಹಣ ಸಂಪಾದಿಸುತ್ತಿದ್ದೇವೆ ? ಎಂಬುದೂ ಅವರಿಗೆ ಮುಖ್ಯವಾಗುತ್ತದೆ. ಮಾನವೀಯ ನೆಲೆಯಲ್ಲಿಯೇ ನಮ್ಮ ಬದುಕು ಸಾಗಬೇಕೆಂಬ ಚಿಂತನಾ ಒಳಹು ಇಲ್ಲಿ ವ್ಯಕ್ತವಾಗುತ್ತದೆ.

ಅಮಾನವೀಯತೆ ಹಾಗೂ ತಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆಬರುವಂತಹ ಸಂದರ್ಭದಲ್ಲಿ ಅಂತಹ ಪರಿಸರದಿಂದ ಸ್ವತಂತ್ರವಾಗಿ ಬದುಕುವ ಛಲ ಆ ಮುದುಕಿಯಲ್ಲಿ ಕಾಣಬಹುದು. ಮೊಮ್ಮಕ್ಕಳು ಬೇಗ ಬೇಗ ಹೆಜ್ಜೆಹಾಕುವಂತೆ ಒತ್ತಾಯ ಮಾಡಿದಾಗ ಮುದುಕಿ ''ನಿಮ್ಮ ನೆರವು ಬೇಕಿಲ್ಲ. ನನಗೆ ಕೋಲು ಕೊಟ್ಟರೆ ಸಾಕೆನ್ನುತ್ತಾಳೆ''.

''ಆಹಾ ಭಾಳ ಘಾಟಿ ಇದಾಳೆ ಇವ್ಳು' ಸಾಯೋ ಹಾಗೆ ದುಡಿಸಿದ್ದರಿಂದಲೇ ಅವ್ವ ಖಾಯಿಲೆ ಬಿದ್ದಿದ್ದು, ಅಪ್ಪ ಸತ್ತದ್ದು, ಮನ್ನೆ ನಂಗೇನೋ ರೋಗ ಅಂತ ಈಭೂತಿ ಕಶಾಯ ಜಾಸ್ತಿ ಎಲ್ಲಾ ನಂಗ್ಸಿದ್ಲಲ್ಲ ಹಾಗೇ ಅಪ್ಪಂಗೂ ಮಾಡಿದ್ಲೇನೋ ಗೊಟ್ಟಕ್ಕಂದ.

'ಇನ್ನೂ ಮುಗಿದಿಲ್ಲ ಇವಳ್ದು ತರ್ಲೆ. ಸಾಲ ತಂದು ನಮ್ಮನ್ನೆಲ್ಲ ಸಾಕಿದ್ಲಂತೆ. ಯಾರು ಹೇಳಿದ್ರು ಇವಳಿಗೆ ಸಾಲ ತರು ಅಂತ. 'ನಾವೆಲ್ಲಾ ಹೋಗ್ತೀವಿ ಕೆಲ್ಸಕ್ಕೆ ಅಂದ್ರೂ 'ಬ್ಯಾಡ, ನಿಮಗೆಲ್ಲ ರೋಗ, ಮಲ್ಕೊಳಿ' ಅಂತ ಹಾಸಿಗೆಗೆ ತಳ್ಳಿದ್ದೂ ಅಲ್ದೆ ಸಾಲಾ ಮಾಡಿದಳಂತೆ, ಕೊಡೋರ್ಯಾರು ಇವಳಿಗೆ, ಅಮ್ಮಂದ್ಯಾವ್ದೋ ಮೂಗ್ಬಟ್ಟೋ , ಬೆಂಡೋಲೇನೋ ಇತ್ತೇನೋ ಮಜಾ ಮಾಡಿದ್ದಾಳೆ''.[3]

3 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ-21.

ಇಲ್ಲಿ ಆ ಮುದುಕಿ ತೋರಿದ ವಾತ್ಸಲ್ಯ ಮಾನವೀಯತೆಯೇ ಅವಳಿಗೆ ತಿರುಗುಬಾಣವಾಗಿದೆ. 'ವ್ಯಕ್ತಿಯ ಮನಸ್ಥಿತಿ ಅವನ ನಾಲಗೆಯಲ್ಲಿ ವ್ಯಕ್ತವಾಗುತ್ತದೆ' ಎಂಬುದು ಸಹೋದರರಾಡುವ ಮಾತಿನಿಂದ ಅವರ ಅಮಾನವೀಯ ಮನಸ್ಥಿತಿ ಅನಾವರಣಗೊಳ್ಳುತ್ತದೆ. ತಮ್ಮಂತೆಯೇ ಇತರರು ಎಂದು ಭಾವಿಸುತ್ತಾರೆ.

ಅಜ್ಜಿ ತೋರಿದ ಅತೀ ವಾತ್ಸಲ್ಯವೇ ಮೊಮ್ಮಕ್ಕಳು ಸೋಮಾರಿಗಳಾಗಲು ಕಾರಣವೇನೋ ಎಂದು ಅನುಮಾನ ಬರುತ್ತದೆ. ಪ್ರತಿಫಲ ಬಯಸುವವರು ಒಣಮರಕ್ಕೆ ನೀರೆರೆಯುವುದಿಲ್ಲ. ಸ್ವಾರ್ಥದಾಹವುಳ್ಳ ಸಹೋದರರು ಪರಿಹಾರಧನವನ್ನು ಲಪಟಾಯಿಸಲು ಇದ್ದ ಒಬ್ಬಳೇ ಅಜ್ಜಿಯನ್ನು ಕಾರಿನ ಚಕ್ರಕ್ಕೆ ಸಿಕ್ಕಿಸಿ ಸಾಯಿಸುತ್ತಾರೆ. ಆದರೆ ಇನ್ನೇನು ಪರಿಹಾರ ಧನ ಸಿಕ್ಕಿತು ಎನ್ನುವಾಗಲೇ ಅಜ್ಜಿ ಆ ಕಾರಿನ ಯಜಮಾನ ಸುಬ್ಬೇಗೌಡನ ಹೆಂಡತಿಯ ಬಳಿ ಮಾಡಿದ ಸಾಲಕ್ಕೆ ಸಮವಾಯಿತು ಎಂದು ಅನಿರೀಕ್ಷಿತವಾಗಿ ತಿಳಿದಾಗ ಅವರು ಅಸಹಾಯಕರಾಗುತ್ತಾರೆ. ಸುಬ್ಬೇಗೌಡನಿಗಾಗಲಿ, ಸಹೋದರರಿಗಾಗಲೀ ಅಜ್ಜಿಯ ಸಾವಿನ ಬಗ್ಗೆ ದುಃಖ ಲವಲೇಶವು ಇಲ್ಲದೆ ಹಣದ ಚೌಕಾಸಿಗೆ ತೊಡಗುವುದು ಅಮಾನವೀಯತೆಯ ಅಟ್ಟಹಾಸವನ್ನು ಅನಾವರಣಗೊಳಿಸುತ್ತದೆ.

''ಬಾಲೆಯನ್ನು ಮನದಲ್ಲೇ ಒಬ್ಬರು ವಂದಿಸಿದರು !
ಇಬ್ಬರು ಶಪಿಸಿದರು !''

ದೂರದಲ್ಲಿ ಗುಡುಗೊಂದು 'ಘುಡುಲ್' ಎಂದಿತು. 'ಮಜಮಾರಾಯ ಮಂಜಪ್ಪಿಗೆ, ಇದ್ರೂ ಲಾಭ, ಸತ್ರೂ ಲಾಭ''[4] ಎಂಬ ಲಕ್ಕನ ಮಾರ್ದನಿಯು ತನ್ನ ಅಜ್ಜಿ ಇದ್ರೂ ನಷ್ಟ. ಹೋದ್ರೂ ನಷ್ಟ ಎಂಬ ಚಿಂತನೆಯು ಮಾನವೀಯತೆಯನ್ನು ರಕ್ತ-ಸಂಬಂಧವನ್ನು ಲಾಭ-ನಷ್ಟಗಳ ಕತ್ತರಿಯಲ್ಲಿ ತೂಗಿನೋಡುವುದು 'ಮಾನವೀಯತೆಯು ಸ್ವಾರ್ಥದೆದುರು ನಿಷ್ಪ್ರಯೋಜಕವಾಗುವುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ'.

ಡೇರ್‌ಡೆವಿಲ್ ಮುಸ್ತಫಾ

'ಡೇರ್‌ಡೆವಿಲ್ ಮುಸ್ತಫಾ' ಕತೆಯು ಜಾತಿಯನ್ನೇ ಕೇಂದ್ರೀಕರಿಸಿದ ಒಂದು ಸಾಮಾಜಿಕ ಜಾತಿಪದ್ಧತಿ ನಲೆಯೂರಲು ಕಾರಣವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸತೊಡಗಿರುವ ಹಾಸ್ಯಮಿಶ್ರಿತವಾದ ಕತೆಯಾಗಿದೆ.

---

4 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ-21.

ಜಾತಿಜಾತಿಗಳ ನಡುವಣ ವೈಷಮ್ಯ ಬೆಳೆಯಲು ಇರುವ ನಿಗೂಢತೆಗಳನ್ನು ಅನಾವರಣಗೊಳಿಸುತ್ತದೆ. ಜಾತಿಯ ವಿಜೃಂಭಣೆಗೆ ವ್ಯಕ್ತಿಯು ವ್ಯಕ್ತಿಗತ ಮನೋಧರ್ಮಕ್ಕಿಂತ ಸಾಮುದಾಯಿಕ ಒತ್ತಡ, ಪರಂಪರೆಯ ಒತ್ತಡವೇ ಕಾರಣವೆಂಬುದನ್ನು ಹಲವು ಮಜಲುಗಳಿಂದ ಅನಾವರಣಗೊಳಿಸಿದ್ದಾರೆ.

ವ್ಯಕ್ತಿಯು ತಾನು ವಿಜೃಂಭಿಸಲು ತನ್ನ ಅನನ್ಯತೆ ಉಳಿಸಿಕೊಳ್ಳಲು ಜಾತಿಯ ಮೊರೆ ಹೋಗುವಿಕೆಯನ್ನು ಅದರಾಚೆಗೆ ಬೇರಾವ ಸ್ವಾರ್ಥತೆ ಇಲ್ಲದಿರುವಿಕೆಯನ್ನು ಇಲ್ಲಿನ ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ.

'ಡೇರ್‌ಡೆವಿಲ್' ಎಂಬುದು 'ಯಾರಿಗೂ ಹೆದರದ ದೆವ್ವ'ಎಂಬರ್ಥ ಒಳಗೊಂಡದ್ದು ಸ್ವಾಭಿಮಾನಕ್ಕೆ ಸಂಕೇತವಾದುದ್ದಾಗಿದೆ. ಇಂತಹ ಬಿರುದನ್ನು ಜ್ಯೂನಿಯರ್ ಕಾಲೇಜಿನ 'ಜಮಾಲ್ ಅಬ್ದುಲ್ ಮುಸ್ತಫಾ ಹುಸೇನ್' ಎಂಬ ವಿದ್ಯಾರ್ಥಿಗೆ ನೀಡಲು ಅನೇಕ ಕಾರಣಗಳಿವೆ.

ಮುಸ್ತಫ ಇಡೀ ಕಾಲೇಜಿನ ಒಬ್ಬನೇ ಮುಸ್ಲಿಂ ವಿದ್ಯಾರ್ಥಿಯಾಗಿದ್ದು ಹಲವು ದಿನಗಳ ಕಾಲ ಕಾಲೇಜಿಗೆ ಚಕ್ಕರ್ ಹಾಕಿದ್ದರಿಂದ ಅನೇಕ ಊಹಾಪೋಹಗಳುಂಟಾಗುತ್ತವೆ. ಅವನು ಮುಂಜಿಮಾಡಿಸಿಕೊಂಡಿದ್ದಾನೆಂದು, ಪ್ರಿನ್ಸಿಪಾಲರೇ ಹಿಂದೂ ಕಾಲೇಜಿಗೆ ಬರಬಾರದೆಂದು ಹೇಳಿದರೆಂದು ಅನೇಕ ಗುಸುಗುಸು ಎದ್ದಿತ್ತು. ಆದರೆ ಹಿಂದುಗಳ ಜೊತೆ ಬೆರೆಯದಿರಲು ಕಾರಣ ಅವರ ಜೀವನ ಶೈಲಿ, ಬದುಕುವ ಕ್ರಮ, ಕಸುಬು, ಚರ್ಮಹದ, ಕುರಿಕಡಿಯುವುದಕ್ಕೆ ಕಸಾಯ ಕೆಲಸ, ರಾತ್ರೋರಾತ್ರಿ ನಡೆಯುವ ಅವರ ಹಬ್ಬ, ಮದುವೆ, ಮಸೀದಿಯ ದೇವರು' ಇದೇ ಮುಖ್ಯ ಕಾರಣ ಆದರೆ ಈ ಎಲ್ಲಾ ಕಸುಬುಗಳು ಮುಸ್ಲಿಮರಿಗೆ ಅಲ್ಲದೆ ಎಲ್ಲಾ ಜಾತಿಯವರಿಗೆ ಅನುಕೂಲವಾಗುವಂತದ್ದಾಗಿದ್ದು ಪರಸ್ಪರ ಕೊಳು-ಕೊಡುಗೆ ಇದ್ದರೆ ಮಾತ್ರ ಜೀವನಸಾಧ್ಯ. ಹಿಂದೂ ಜೀವನ ಕ್ರಮ ಮುಸ್ಲೀಮರಿಗೂ ವ್ಯಂಗ್ಯ ಕಾಣಬಹುದು. ಹಿಂದೂ-ಮುಸ್ಲಿಂ ಜೀವನಕ್ರಮ ಮುಸ್ಲೀಮರಿಗೂ ವ್ಯಂಗ್ಯ ಕಾಣಬಹುದು. ಹಿಂದೂ ಮುಸ್ಲಿಂ ಜೀವನ ಕ್ರಮ ಕ್ರಿಶ್ಚಿಯನ್ನರಿಗೆ ಭಿನ್ನವಾಗಿರಬಹುದು. ಆದರೆ ಈ ವಿಭಿನ್ನತೆ ಏರ್ಪಟ್ಟಿರುವುದೇ ಮಾನವ ಸುಖಕರ ಸಹಬಾಳ್ವೆಗೆ ಆದರೆ ಅದನ್ನೇ ಕೇಂದ್ರವಾಗಿರಿಸಿ ವೈಮನಸ್ಯ ಉಂಟಾಗುವುದು ಇಲ್ಲಿ ಸಲ್ಲದ್ದಲ್ಲ.

ಮುಸ್ತಫಾ ಹಾಜರಾತಿ ಹೇಳಿದಾಗ ಅವನು ಕರಾಳ ಘಜನಿ ಮೊಹಮ್ಮದ್‌ನಂತೆ ಕಾಣದೆ ವಿಶ್ವಾಸ ಸ್ನೇಹಗಳಿಗೆ ತಕ್ಕಂತ ಮುಗ್ಧಯುವಕನಾಗಿ ಕಂಡು ವಿದ್ಯಾರ್ಥಿಗಳಿಗೆ ನಿರಾತಂಕವಾಗಿ ಕಾಲೇಜಿನ ಆಟಪಾಠಗಳಲ್ಲಿ ಬೆರೆಯುತ್ತಾನೆ. ಆದರೆ ಅವನ ಏಳ್ಗೆಯು ಇತರ ಹಿಂದೂ ಸಹಪಾಠಿಗಳ ಕರುಬಿಗೆ ನಾಂದಿಯಾಗುತ್ತದೆ ವಿನಃ ಜಾತಿಯಿಂದಲ್ಲ ಆದರೆ ಜಾತಿಯನ್ನು ಮುಂದುಮಾಡಿ ಕಿರಿಕಿರಿ ಮಾಡಲು ಪ್ರಾರಂಭಿಸುತ್ತಾರೆ.

ಮುಸ್ತುಫಾ ಬಿಳಿತೊಗಲಿನ ಸುಂದರ ಯುವಕನಾದ್ದರಿಂದ ಫೇಜ್‌ಟೋಪಿ ಧರಿಸಿದ್ದರಿಂದ ಇನ್ನೂ ಎಲ್ಲಾ ಹುಡುಗಿಯರಿಗೆ ಹೆಚ್ಚು ಆಕರ್ಷಿತನಾಗಿ ಬಿಡುತ್ತಾನೋ ಎಂಬ ಆತಂಕದಿಂದ ತರಗತಿಯಲ್ಲಿ ಫೇಜ್ ಟೋಪಿ ತಗಿಸಬೇಕೆಂದು ಇಲ್ಲದಿದ್ದರೆ ಅಗೋಚರವಾಗುವಂತೆ ಹಿಂದಿನ ಡೆಸ್ಕಲ್ಲಿ ಕುಳಿತುಕೊಳ್ಳಬೇಕೆಂದು ಉಳಿದ ವಿದ್ಯಾರ್ಥಿಗಳು ಚರಿತ್ರೆಯ ಮಾಸ್ತರರಿಗೆ ದೂರಿತ್ತಾಗ ಅವನು ಟೋಪಿಯನ್ನು ತೆಗೆಯದೆ ಮಾಸ್ತರರ ಟೋಪಿಯನ್ನು ಪ್ರಶ್ನಿಸುತ್ತಾನೆ. ಚರಿತ್ರೆ ಮಾಸ್ತರರ ಟೋಪಿ ತನ್ನ ಪಿಳ್ಳು ಜುಟ್ಟು ಹೊರಬಂದು ಹುಡುಗರೆದರು ಹಾಸ್ಯಾಸ್ಪದವಾಗದಂತೆ ತಡೆಯಲಿದ್ದರೆ ಮುಸ್ತಪ್ಪನದು ಆಕರ್ಷಣೆಗಾಗಿ ಇರುವ ಟೋಪಿಯೇ ಹೊರತು ಇಬ್ಬರದು ಜಾತಿಯ ವಿಜೃಂಭಣೆಗಲ್ಲ ಎಂಬುದು ತಿಳಿಯಬಹುದಾಗಿದೆ.

ಒಮ್ಮೆ ಫುಟ್ಬಾಲ್ ಆಟವಾಡುವಾಗ ಗೋಲ್‌ಕೀಪರ್ ಶಂಕರನಿಗೂ ಮುಸ್ತುಪ್ಪನಿಗೂ ಜಗಳವಾಗಿ ಕ್ಯಾಪ್ಟನ್ ರಾಮಾನುಜ ಐಯ್ಯಂಗಾರಿ ಮುಸ್ತುಪ್ಪನ ಪರವಹಿಸಿದ್ದು ಶಂಕರನ ಮೇಲಿನ ಕೋಪದಿಂದ ಆದರೆ ಇದೇ ಐಯ್ಯಾಂಗಾರಿ ಹಿಂದೊಮ್ಮೆ ಫುಟ್ಬಾಲ್ ಆಟದಲ್ಲಿ, ಕ್ರಿಕೇಟ್ ಆಟದಲ್ಲಿ ಮುಸ್ತುಪ್ಪಾನನ್ನು ದೂರವಿರಿಸಿದ್ದನ್ನು ಕಾಣಬಹುದು. ಜೊತೆಗೆ ಮುಸ್ತಪ್ಪ ಕ್ರಿಕೇಟ್‌ನಲ್ಲಿ ಬಾಲ್ ಹಿಡಿಯಲು ಎಂಜಲು ಕೈಗೆ ಉಗಿದುಕೊಂಡದ್ದು ಇವನು ಜಾತಿಕೆಡಿಸಲೆಂದೇ ಭಾವಿಸುವವರು . ಈಗ ಮುಸ್ತುಪ್ಪನನ್ನು ಥಳಿಸುವಾಗ ಆ ಮೈಲಿಗೆ ಇರುವುದಿಲ್ಲ. ಒಟ್ಟಿನಲ್ಲಿ ಶಂಕರ-ಐಯ್ಯಂಗಾರಿಯ ಜಗಳದಲ್ಲಿ ಮುಸ್ತಪ್ ಥಳಿಸಿಕೊಂಡು ಮೌನವಾಗಿ ಹೋಗಲು ಕಾರಣ ಅವರಿಬ್ಬರಿಗೂ ತನ್ನ ಮೇಲಿನ ದ್ವೇಷ ಕಾರಣವಲ್ಲ ಎಂಬುದು ಇಲ್ಲೇ ಪೇಜ್ ಟೋಪಿಯು ಹಾಳಾಗುತ್ತದೆ.

ಆದರೆ ಮೂರನೇ ದಿನ ಶಂಕರ-ಐಯ್ಯಂಗಾರಿ ಕ್ಲಾಸಿಗೆ ಬರದಿರಲು ಕಾರಣ ಮುಸ್ತಪ್ಪಾ ಮುಸ್ಲೀಮರೊಂದಿಗೆ ಹಿಂದುಗಳನ್ನು ಹೊಡೆಸುತ್ತಾರೆಂಬ ಹುಸಿ ಭಯವೇ ಹೊರತು ಜಾತಿ ಜಗಳ ಏರ್ಪಡುವುದಿಲ್ಲ.

ಗಣಪತಿ ಉತ್ಸವದಲ್ಲಿ ಪ್ರತಿವರ್ಷ ಹಿಂದೂ ಮುಸ್ಲಿಂ ನಡುವೆ ಘರ್ಷಣೆ ಏರ್ಪಡುತ್ತಿತ್ತೆಂದು ವದಂತಿಯಿದ್ದಿದ್ರೆ ಅದಕ್ಕೆ ಮುಖ್ಯ ಕಾರಣ ಪರಸ್ಪರ ಅಪನಂಬಿಕೆಗಳು. ಈ ಉತ್ಸವದಲ್ಲಿ ಗಲಭೆಯಾಗಲು ಕಾರಣ ''ಕುಂಬಾರ ಕುಡಿದ ಮತ್ತಲ್ಲಿ ಪಂಜು ಹಿಡಿದಾಗ ಬಸವನ ಬೆನ್ನಿಗೆ ಬೆಂಕಿತಾಗಿ ಹತ್ತಿಕೊಂಡಾಗ ಜನ ದಿಕ್ಕುಪಾಲಾದಾರು. ಮುಸ್ತುಪ್ಪಾ ತನ್ನ ಪ್ರಾಣದ ಹಂಗು ತೊರೆದು ಬಸವನನ್ನು ಉಳಿಸಿದ್ದು ಮಾನವೀಯ ಸಂಬಂಧವನ್ನು ತೋರಿಸುತ್ತದೆ. ಆ ನಂತರ ಮುಸ್ತಪ್ಪನಿಗೆ ಹುಡುಗೇರು, ಹುಡುಗರೆಲ್ಲರು ಆತ್ಮೀಯರಾಗಿ 'ಒಳ್ಳೇ ಡೇರ್ ಡೆವಿಲ್ ಎಂದು ಪ್ರಶಂಸಿಸಿ ಪರಸ್ಪರ ಸ್ನೇಹ ಜೀವಿಗಳಾದರು.''[5] ಇಲ್ಲಿ ಜಾತಿತಾರತಮ್ಯ ಹೋಗಿ ಮಾನವೀಯತೆ ನೆಲೆಯಾಯಿತು. ಕಾಲೇಜಿನ ಯೂನಿಯನ್ ಡೇ ದಿವಸ ಐಯ್ಯಾಂಗಾರಿಯು ಮುಸ್ತುಪ್ಪಾನಿಗೆ ತಿಳಿಸದೆ ಹೆಸರು ಸೇರಿಸಿ ಸಭೆಯಲ್ಲಿ ಮಾತನಾಡಲಾಗದ ಮುಸ್ತುಪ್ಪಾ ಅವಮಾನಿತನಾಗಿ ಐಯ್ಯಂಗಾರಿ ಮೇಲೆ ಸೇಡಿನ ಭಾವನೆಯಿಂದ ಮರುದಿನ 'ಟ್ಯಾಲೆಂಟ್ಸ್ ಡೇ' ದಿವಸ ಮುಸ್ತಪ್ಪಾ ಜಾದೂ ಮಾಡಲುಸಿದ್ಧನಾಗಿ ಗಾಜಿನಚೂರಿನ ನೀರು, ಬಾಳೆಹಣ್ಣು, ಖಾಲಿಟೋಪಿಯಿಂದ ಕರವಸ್ತ್ರ ಕಡಲೆಪುರಿ ಇತ್ಯಾದಿ ಪ್ರದರ್ಶಿಸಿದ ನಂತರ ತಲಿಸ್ಮಾ ಜಾದು ಮಾಡಲು ಐಯ್ಯಂಗಾರಿಯನ್ನು ಆಯ್ಕೆ ಮಾಡಿ ಅವನ ಜೇಬಿನಲ್ಲಿ ಮೊಟ್ಟೆ ಹಾಕಿ ಲೋಳೆಸುರಿಸುವಂತೆ ಮಾಡಿ ಕ್ಷಮಿಸಿ ನನ್ನ ಪೇಜ್ ಟೋಪಿಯ ಜೊತೆಗೆ ತಲಿಸ್ಮಾ ಮಂತ್ರ ಹಾಳಾಗಿದೆ ಎಂಬುದು ಏಕಕಾಲಕ್ಕೆ ಐಯ್ಯಂಗಾರಿಯ ಮೇಲಿನ ದ್ವೇಷವನ್ನು ಟೋಪಿ ಹಾಳುಮಾಡಿದವರ ಮೇಲಿನ ದ್ವೇಷವನ್ನು ತೀರಿಸಿಕೊಂಡಿದ್ದು. ಆದರೆ ಅಷ್ಟೊತ್ತಿಗಾಗಲೇ ಹಿಂದು-ಮುಸ್ಲಿಮ್ ಹುಡುಗರ ಬಾಂಧವ್ಯ ಗಟ್ಟಿಯಾಗಿದ್ದರಿಂದ ಪುನಃ ಜಾತಿನಿಂದನೆ ತೋರಿಸದೆ ಸ್ನೇಹಬಾಂಧವ್ಯ ಮೂಡುತ್ತದೆ.

ಇಲ್ಲಿ ತೇಜಸ್ವಿಯವರು ಒಂದು ಕಾಲೇಜಿನ ಪ್ರಸಂಗದಿಂದ ಇಡೀ ಜಾತಿವ್ಯವಸ್ಥೆಯ ಮಧುರಬಾಂಧವ್ಯವನ್ನು ಬೆಸೆದ್ದಿದಾರೆ. ಯಾವುದೇ ಸಮುದಾಯವು ಮಾನವ ಜಾತಿಗೆ ಸೇರಿದ್ದು, ಪಂಪನ 'ಮಾನವಜಾತಿ ತಾನೊಂದೆವಲಂ' ಎಂಬ ತತ್ವವನ್ನು ಸಾರಬಯಸಿದ್ದಾರೆ.

ಕಿರುಗೂರಿನ ಗಯ್ಯಾಳಿಗಳು

ತೇಜಸ್ವಿಯವರ ಕಿರುಗೂರಿನ ಗಯ್ಯಾಳಿಗಳು' ಕಥೆಯು ಇದುವರೆಗಿನ ಕತೆಗಳಿಗಿಂತ ವಿಭಿನ್ನ ಮಜಲುಗಳನ್ನು ಪಡೆಯುತ್ತದೆ. ವಾಸ್ತವ ಪ್ರಪಂಚದಿಂದ ವಾಸ್ತವೇತರ ಪ್ರಪಂಚಕ್ಕೆ ಇಳಿಯುತ್ತಾರೆ. 2) ಪುರುಷಪ್ರಧಾನ ವ್ಯವಸ್ಥೆಯಿಂದ ಸ್ತ್ರೀಪ್ರಧಾನ ವ್ಯವಸ್ಥೆಗಳತ್ತ ಮುಖ

5 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಪುಟ-91

ಮಾಡುತ್ತಾರೆ 3) ಇದುವರೆಗೂ ಕೆಳವರ್ಗದ ಅಡಿಯಾಳಾಗಿದ್ದು ಈಗ ಮೇಲ್ವರ್ಗದ ವಿರುದ್ಧದ ಪ್ರತಿಭಟನೆಯ ಸಾಧ್ಯತೆ ಸಾಕ್ಷಾತ್ಕರಗೊಂಡಿದೆ. 4) ಮಹಿಳೆಯರಲ್ಲಿ ದೋಷವಿರದೆ ಅದು ಪುರುಷರಲ್ಲೇ ಇರುವಿಕೆಯನ್ನು ದಿಟ್ಟತನದಿಂದ ವಿಜೃಂಭಣೆಗೊಂಡಿದೆ. 5) ಕತೆಗಾರ ಹೇಳುವಂತೆ ಕೆಳವರ್ಗದ ಕರಿಯ ಮೇಲ್ವರ್ಗದ ಮೂರು ಜನರ ಉಳುಕು ತೆಗೆದಾಗಲೇ ಅಧಿಕೃತ ಸಾಮರಸ್ಯ ಉಂಟಾಗುವುದು ಎನ್ನುತ್ತಾರೆ. ಈ ವಾಕ್ಯ ಗಮನಿಸಿದರೆ ಮುಖ್ಯವಾಗಿ ಜಾತಿ ತಾರತಮ್ಯ ದೂರೀಕರಿಸುವುದೇ ಪ್ರಧಾನ ಆಶಯವಾಗಿದೆ. 'ಡೇರ್ ಡೆವಿಲ್ ಮುಸ್ತಪ್ಪಾ' ಕತೆಯ ಆಶಯವೂ ಇದೇ ಆಗಿತ್ತು.

ಕಥಾರಂಭವು 'ಗಾಳಿಯ ದೆಸೆಯಿಂದ ಬೃಹದಾಕಾರದ ಹಲಸಿನ ಮರ ಬೀಳುವ ಸಂಕೇತವು' ಪ್ರತಿಮೆಯಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಹಲಸಿನ ಮರವು ಪರಂಪರಾಗತ ಪುರುಷ ಪ್ರಧಾನ ವ್ಯವಸ್ಥೆಯನ್ನು ಸಂಕೇತಿಸಿದರೆ ಮುರಿದು ಬಿದ್ದ ಮನೆಯು 'ಜಾತಿವ್ಯವಸ್ಥೆ'ಯನ್ನು ಸಂಕೇತಿಸುತ್ತದೆ. ಇಲ್ಲಿ ಗಾಳಿಯು ಸ್ತ್ರೀಸ್ವತಂತ್ರವಾಗಿರುವಿಕೆಯನ್ನು ಸಂಕೇತಿಸುತ್ತದೆ. ಪ್ರತಿಸಾರಿ ಬೀಸುವ ಗಾಳಿಗೂ ಈ ಸಾರಿ ಬೀಸುವ ಗಾಳಿಗೂ ವ್ಯತ್ಯಾಸವಿದೆ ಎಂಬುದು ಇದುವರೆಗೂ ಬಂದ ಸ್ತ್ರೀ ಸಮುದಾಯಕ್ಕಿಂತ ಭಿನ್ನವಾದ ಎಚ್ಚೆತ್ತ ಜಾಗರೂಕವಾದ ಸ್ತ್ರೀವರ್ಗದ ಇರುವಿಕೆಯನ್ನು ಸೂಚಿಸುತ್ತದೆ.

ದಾನಮ್ಮನ 'ವಾಕ್ ಪ್ರಹಾರದ ರೌದ್ರಾವತಾರಕ್ಕೆ ಬೆಚ್ಚಿ ಈಗಾಗಲೇ ಬೀಸಿದ ಮಳೆಗಾಳಿ ಕಡಿಮೆಯಾಗಿದ್ದು ಪುರುಷ ಪ್ರಧಾನ ವ್ಯವಸ್ಥೆ ದಿಕ್ಕಾಪಾಲಾದ ಸ್ಥಿತಿಯನ್ನು ಬಿಂಬಿಸುತ್ತದೆ.

ಸ್ತ್ರೀವರ್ಗದಲ್ಲಿ ಹರಿಜನಗಿರಿಜನ, ಮೇಲ್ವರ್ಗವೆಂಬ ತಾರತಮ್ಯವಿಲ್ಲದೆ ಅದು ಪುರುಷವರ್ಗದಲ್ಲಿ ತಾಂಡವಾಡುತ್ತಿದ್ದುದು ಕಂಡುಬರುತ್ತದೆ. ಇದಕ್ಕೆ ಕಾರಣ ಗ್ರಾಮಸೇವಕ ಶಂಕ್ರಪ್ಪನೇ, ಅವನ ಅಂತ್ಯದ ಮೂಲಕವೇ ಅನ್ಯೋನ ಬದುಕು ಸಾಧ್ಯ ಎಂಬುದನ್ನು ಕತೆ ಧ್ವನಿಸುತ್ತದೆ. ಶಂಕ್ರಪ್ಪನ ದೆಸೆಯಿಂದಲೇ ಗೌಡರ ಮತ್ತು ಕೆಳವರ್ಗದವರ ನಡುವೆ ಅಸಾಮರಸ್ಯ ಉಂಟಾಗಿ ಗೌಡರು ಲಾಕ್‌ಅಪ್ ದರ್ಶನ ಮಾಡಬೇಕಾದ ಸ್ಥಿತಿಯಾಗಿರುತ್ತದೆ.

'ಕಿರುಗೂರಿನ ಅಂತರ್ಗತವಾದ ಸಮಾಜವ್ಯವಸ್ಥೆಯ ಪರಂಪರಾಗತ ನಂಬಿಕೆಗಳು ಜಾತೀಯತೆ, ಲಿಂಗಬೇಧದ ಆಂತರಿಕ ಸಂಘರ್ಷದ ವಿಶ್ಲೇಷಣೆಯಾಗಿದೆ. ಭಯಂಕರ ಬಿರುಗಾಳಿಯಲ್ಲಿ ಬಿದ್ದು ಹೋಗಿರುವ ಮರ ಕಿರುಗೂರಿನ ಸಾಮಾಜಿಕ, ಆರ್ಥಿಕ ಅವತಿಗೆ ರೂಪಕವಾಗಿ ಚಿತ್ರವಾಗಿದೆ. ಸಾರಾಯಿ ಕುಡಿದು, ಬೀಡಿ ಸೇದಿ, ಹೊಗೆ ಹತ್ತಿ ಸಣಕಲಾದ

ಮೇಲ್ವರ್ಗದ ಗಂಡಸರೂ ಸದಾ ಕಾರ್ಯಮಗ್ನರಾದ ಕೆಳವರ್ಗದ ಗಂಡಸರು ಹಾಗೂ ತಮ್ಮ ಉಜ್ವಲಸೌಂದರ್ಯದಿಂದ ನೋಡಿದವರನ್ನು ಬೆಚ್ಚಿ ಬೀಳಿಸುವ ಸದೃಡಕಾಯದ ಹೆಂಗಸರನ್ನು ತೇಜಸ್ವಿ ಮುಖಾಮುಖಿಯಾಗಿಸುವ ಮೂಲಕ ಲಿಂಗತಾರತಮ್ಯದ ಗಂಡಸುತನದ ಸ್ವೀಕೃತ ನಂಬಿಕೆಗಳನ್ನು ಅಲುಗಾಡಿಸಿದ್ದಾರೆ.

'ಹೆಂಗಸರ ಬಂಡಾಯದ ಮನೋಧರ್ಮ ಗಂಡಸರಿಗೆ ಗಯ್ಯಾಳಿತನವಾಗುವುದು ಒಂದು ವಿಪರ್ಯಾಸ'. ಮಹಿಳೆಯರಲ್ಲಿ ಒಡಮೂಡುವ ಆತ್ಮಸ್ಥೈರ್ಯ ಹಾಗೂ ದಿಟ್ಟತನಕ್ಕೆ ಗಂಡಸರು ಹೆದರುತ್ತಾರೆ.

ಕಿರುಗೂರಿನ ಮೂರ್‍ನಾಲ್ಕು ಒಕ್ಕಲಿಗ, ಹಾಗೂ ನಾಲ್ಕೈದು ಹರಿಜನರ ಮನೆಗದಳನ್ನು ಹೊಂದಿದ ಪುಟ್ಟಹಳ್ಳಿಯಾಗಿದ್ದು ಗ್ರಾಮಸೇವಕ ಶಂಕರಪ್ಪ ಕರಿಯನ ಹೊಲದಲ್ಲಿ ಸಾಂದ್ರಬೇಸಾಯ ಪದ್ಧತಿ ಅಳವಡಿಸಿ ಅಲ್ಲಿ ಏನೂ ಬೆಳೆಯದೆ ತನ್ನ ಕೆಲಸಕ್ಕೆ ಕುತ್ತು ಬಂದಾಗ ಚೆನ್ನಾಗಿ ಬೆಳೆದ ಮಾರನ ಹೊಲದಲ್ಲಿ ನೆಟ್ಟು ಅದರಿಂದ ವಿಫಲವಾದಾಗ ಅಧಿಕಾರಿಗಳ ಮುಂದೆ ತಾನು ಹರಿಜನರ ಹೊಲದಲ್ಲಿ ಸಾಂದ್ರಬೇಸಾಯ ಪ್ರಯೋಗಿಸಿದ್ದಾಗ್ಯೂ ಊರವರು ನೀರುಪೂರೈಸದೆ ಬೋರ್ಡುಕಿತ್ತುಹಾಕಿದರೆಂದು ದೂರಿತ್ತಾಗ ಪೋಲಿಸರು ಪೂರ್ವಾಪರ ಅರಿಯದೆ ಒಕ್ಕಲಿಗರಾದ ಬೈರಪ್ಪ ಸುಬ್ಬೇಗೌಡ, ಸೀಗೇಗೌಡ, ರಾಮಣ್ಣ ಕಾಳೇಗೌಡನನ್ನು ಲಾಕಪ್ಪಿಗೆ ಹಾಕಿ ನರಕದ ಬಾಗಿಲು ತೋರಿಸುತ್ತಾರೆ. ಈ ಘಟನೆಯಿಂದ ಇಲ್ಲಿನ ಹರಿಜನರು ಒಕ್ಕಲಿಗರ ಮೇಲೆ ವಿನಾಕಾರಣ ಕೇಸುಹಾಕಿದರೆಂದು ತಿಳಿದು ಜಾತಿ, ವರ್ಗ, ಕಲಹಕ್ಕೆ ಕಾರಣವಾದರೂ ಸ್ತ್ರೀಯರ ಬೆಂಬಲವಿಲ್ಲದೆ ನೆಲಕಚ್ಚುತ್ತದೆ.

ಅದೇ ರೀತಿ 'ನಾಗಮ್ಮನ ಪ್ರಸಂಗ' ದಲ್ಲಿ ಸ್ತ್ರೀವರ್ಗ ಒಂದಾಗುತ್ತದೆ. ಕಾಳೇಗೌಡನ ಹೆಂಡತಿಯಾದ ನಾಗಮ್ಮ ಮಕ್ಕಳಾಗದೆ ಇದ್ದುದರಿಂದ ನಂಬೂದರಿ ಪಂಡಿತ' ಮಕ್ಕಳಾಗುವ ಔಷಧಿ ಕೊಡುತ್ತೇನೆಂದು ನಂಬಿಸಿ ನಾಗಮ್ಮನ ಎಲ್ಲಾ ಆಭರಣಗಳನ್ನು ಕದ್ದೊಯ್ದಾಗ ಈ ವಿಷಯವನ್ನು ಶಿವಪ್ಪಶೆಟ್ಟರಲ್ಲಿ ತಿಳಿಸಿ ಅಲ್ಲಿ ಆಶ್ರಯ ಪಡೆದ ನಾಗಮ್ಮನ ವಿರುದ್ಧ ಕಿರುಗೂರಿನ ಗಂಡಸರೆಲ್ಲ ಪಂಡಿತ ಮತ್ತು ನಾಗಮ್ಮ ಓಡಿ ಹೋಗಿದ್ದಾರೆಂಬ ತೀರ್ಮಾನಕ್ಕೆ ಬರುತ್ತಾರೆ. ಮರಳಿದ ನಾಗಮ್ಮನೆ ತೇಜೋವಧೆ ಮಾಡಿದಾಗ ಊರಿನ ಹೆಂಗಸರ ಸಿಟ್ಟು ಅತೃಪ್ತಿಗಳೆಲ್ಲ ಒಮ್ಮೆಗೆ ಸ್ಫೋಟಿಸಿ ತಾವು ಅನುಭವಿಸಿದ ಬವಣೆಗಳಿಗೆ ಪ್ರತಿಭಟಿಸುತ್ತಾರೆ. ''ಗಂಡಂದಿರೆಲ್ಲ ಕಂಠ ಪೂರ್ತಿ ಕುಡಿದು ವಾಲಾಡಿ ಬಿದ್ದುಕೊಂಡರೆ ಹೆಂಗಸರು

ಬೇರೊಬ್ಬನಿಂದ ಓಡಿಹೋಗದೆ ಇನ್ನೇನು ಮಾಡುತ್ತಾರೆ''[6] ಎಂಬ ದಾನಮ್ಮನ ಮಾತು ಇಡೀ ಪುರುಷಪ್ರಧಾನ ವ್ಯವಸ್ಥೆಯ ಪೌರುಷತ್ವವನ್ನು ಪ್ರಶ್ನಿಸುವಂತದ್ದೇ ಆಗಿದೆ.

ಪಂಚಾಯ್ತಿಯಲ್ಲಿ ಗ್ರಾಮಸೇವಕ, ಕಳ್ಳುವ್ಯಾಪಾರಿ ಶಂಕ್ರಪ್ಪ, ಭೂತವೈದ್ಯ ಹೆಗ್ಡೆ, ಹಾಗೂ ತಮ್ಮ ಗಂಡಂದಿರಿಗೆ ಬಯಸಿ ಮರದ ದೆಬ್ಬೆಯ ರುಚಿ ತೋರಿಸುತ್ತಾರೆ. ಇಡೀ ಪುರುಷರನ್ನು ಶಂಕ್ರಪ್ಪ ಕಳ್ಳುಕುಡಿಸಿ ದುರವಸ್ಥೆಗೆ ತರುವುದರ ಉದ್ದೇಶ ದಾನಮ್ಮನಂತಹ ಸ್ತ್ರೀಸುಂದರ ಸ್ತ್ರೀಯ ಸಂಗಕ್ಕಾಗಿ ಎಂಬುದು ಇಲ್ಲಿ ತಿಳಿದು ಬರುತ್ತದೆ. ಹೀಗೆ ಒಕ್ಕಲಿಗರು ಹರಿಜನರು ತಾರತಮ್ಯವಿಲ್ಲದೆ 'ಇವರ ಜಾತಿಗಳು, ಆಚಾರಗಳು, ಮದುವೆಗಳು, ಪಂಚಾಯ್ತಿಗಳು, ಪ್ರತಿಯೊಂದರ ಹಿಂದೆ ಗಂಡಸರ ನೀಚತಂತ್ರವಾಗಿ ಕೊನೆಗೆ ಹೆಂಗಸಿನ ತಲೆಗೆ ತರುತ್ತಾರೆಂದು ದಾನಮ್ಮ ಕಿಡಿಕಾರುತ್ತಾಳೆ.

ಕತೆಯ ಮತ್ತೊಂದು ಮಜಲು ಮರಕುಯ್ಯುವ ಸಂದರ್ಭವಾದರೆ ಇನ್ನೊಂದು ಮೇಲ್ವರ್ಗ ಗೌಡರ ಸೊಂಟ ಸರಿಮಾಡುವಲ್ಲಿ ಕೆಳವರ್ಗದ ಕರಿಯ ನಿರಾಕರಿಸುವುದು ಒಂದು ದಿಟ್ಟತನವೇ ಆಗಿದ್ದು ಅದು ಸಾಧ್ಯವಾಗದುದಕ್ಕೆ ಮುಖ್ಯ ಕಾರಣ ಜಾತಿಯೇ' ಆಗಿದೆ ಎಂಬುದನ್ನು ತೇಜಸ್ವಿ ಒತ್ತಿ ಹೇಳುತ್ತಾರೆ. ಇಲ್ಲಿ ಉಳುಕು ತೆಗೆಸಿಕೊಳ್ಳುವುದಕ್ಕೆ ಗೌಡರಿಗೂ ಅಳಕು; ಕರಿಯನಿಗೂ ಆಲಸ್ಯವಾಗಿರುವ ಸ್ಥಿತಿಯನ್ನು ನಿರ್ಮಿಸಿ ನಮ್ಮ ಜಾತಿವ್ಯವಸ್ಥೆ ನಡೆಯುವ ಮಾರ್ಗವನ್ನು ಬಿಂಬಿಸಿದ್ದಾರೆ. ಮನುಷ್ಯ ಇನ್ನೇನು ಸಾಯುವ ಸ್ಥಿತಿಗೆ, ನೋವಿನ ಸ್ಥಿತಿಗೆ ತಲುಪುತ್ತೇನೆ ಎನ್ನುವಾಗ ಮಾತ್ರ ಯಾವ ಜಾತಿಯೂ ಅಡ್ಡಬರದೆ ಶುಶ್ರೂಸೆಗೆ ಒಳಗಾಗುವ ಸ್ಥಿತಿ ಚಿತ್ರಣ ಸಹ ಮನುಷ್ಯನಿಗೆ ಈ ಧರ್ಮ, ಜಾತಿಯೂ ಸಹ 'ಅವಕಾಶವಾದಿ'ಯಾಗಿಯೇ ಬಂದಿರುವುದನ್ನು ಕಾಣಬಹುದು. ''ಸಾಯುವ ಸಂದರ್ಭದಲ್ಲಿಲ್ಲದ ಜಾತಿ ತಾರತಮ್ಯ ವ್ಯಕ್ತಿ ಬದುಕಿರುವಾಗಲೇ ಯಾಕೆ ಬರುತ್ತದೆ?''

ಕುಬಿ ಮತ್ತು ಇಯಾಲ

'ಕುಬಿ ಮತ್ತು ಇಯಾಲ' ಕತೆಯು ಪರಂಪರೆ ಮತ್ತು ವೈಜ್ಞಾನಿಕತೆಯನ್ನು ಮುಖಾಮುಖಿಯಾಗಿಸುವಂತಹದ್ದಾಗಿದೆ. ಜ್ಞಾನ ಹೇಗೆ ಅಜ್ಞಾನವನ್ನು ಹೊತ್ತೊಯ್ಯುತ್ತದೆ ಎಂಬುದನ್ನು ವಿಜ್ಞಾನವು ಮೂಢನಂಬಿಕೆಯ ಎದುರು ತತ್ತರಿಸಿ ಹೋಗುವ ವಿಪರ್ಯಾಸವನ್ನು ಕಾಣಬಹುದು. ''ಅಸತ್ಯವೇ ಸತ್ಯವಾಗಿ ಒಕ್ಕಲಿಗ, ಲಿಂಗಾಯಿತ, ಸಹಕಾರಿಬ್ಯಾಂಕ್, ತಾಲ್ಲೂಕು ಬೋರ್ಡುಗಳಲ್ಲಿನ ಉಪಟಳ ಮುಸಲ್ಮಾನ್ ಹಾಗೂ

6 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕಿರುಗೂರಿನ ಗಯ್ಯಾಳಿಗಳು, ಪುಟ-49

ಬ್ರಾಹ್ಮಣರು ಗೆದ್ದೆತ್ತಿನ ಕಾಲುಹಿಡಿಯುವ ಒಟ್ಟಾರೆ ಮೌಢ್ಯವೇ ಮೈವೆತ್ತಂತಿರುವ ಬೈರಾಪುರ ಸರ್ವರೋಗಗಳ ಸಂಗ್ರಹಾಲಯದಂತಿತ್ತು.

ಡಾ. ಕುಬೇರನಾಥನ ಅಜ್ಞಾನ ನಿವಾರಣೆಯ ಪ್ರಯತ್ನ ಹೆಚ್ಚಿದಂತೆಲ್ಲಾ ಬೈರಾಪುರದ ಜನರ ಮೂಢನಂಬಿಕೆ ಅಜ್ಞಾನಗಳು ಹೆಚ್ಚಾಗತೊಡಗುವುದು ಒಂದು ವಿಪರ್ಯಾಸ.

ಅವೈಜ್ಞಾನಿಕತೆಯನ್ನೇ ನಂಬಿದ ಜನರಿಗೆ ವೈಜ್ಞಾನಿಕ ಶಕ್ತಿಯಿಂದ ರೋಗ ಗುಣಪಡಿಸುವ ಡಾ. ಕುಬಿ ಜನರ ಪಾಲಿಗೆ ತ್ರಿಕಾಲಜ್ಞಾನಿಯಾಗುತ್ತಾನೆ.

ಪೋಲೀಸರಿಂದ ಏಟುತಿಂದವರಿಗೆ ಔಷಧಿಕೊಡುತ್ತಲೋ, ತಮ್ಮ ಕೈಗುಣಕ್ಕಾಗಿ ಕಂಡವರ ಶೀಷೆ ಮುಟ್ಟಿಕೊಡುತ್ತಲೋ ಕಾಲ ಕಳೆಯುತ್ತಿದ್ದ ಕುಬಿ ಒಂದು ಕಡೆಯಾದರೆ ''ಯಾವಯಾವುದೋ ಔಷಧ ಕೊಟ್ಟು ತಾನೇ ಡಾಕ್ಟರ್ ಎಂಬಂತೆ ಮೆರೆಯುವ ಕಾಂಪೌಂಡರ್ ರಾಮರಾಯರ ಸಾವು ಬದುಕಿನ ನಡುವೆ ಹೋರಾಟ ನಡೆಸುವಾಗ ಆತನನ್ನು ಬದುಕಿಸಿದಾಗ ಡಾ. ಕುಬಿಯು ಕೃಷ್ಣಪರಮಾತ್ಮನಾಗಿ ಕಾಣುತ್ತಾನೆ.''[7]

ಇಯಾಲಾಳು ತಾಯಿ ಬಾಯಮ್ಮನ ಆಜ್ಞೆಯ ಮೇರೆಗೆ ಕುಬಿಯ ಬಳಿ ಮುಟ್ಟಿಗೆ ಔಷಧ ಪಡೆಯಲು ಬಂದ ಸಂದರ್ಭವೂ ಬ್ರಹ್ಮಚಾರಿ ಕುಬಿಗೂ ಮತ್ತು ಇಯಾಲ ಇಬ್ಬರಿಗೂ ಒಂದು ರೀತಿಯ ಸಂಕೋಚಭಾವನೆ ಉದ್ಭವವಾಗುತ್ತದೆ. ಔಷಧ ಕೊಟ್ಟು ಕಳುಹಿಸುತ್ತಾನೆ.

ಆದರೆ ಮರುದಿನ ''ಡಾಕ್ಟರ್, ಇಯಾಲೀನ ಯಾರೋ ಕಡಿದು ಹಾಕಿದ್ದಾರಂತೆ' ಎಂದು ಮಾಣಿಯ ಮಾತು ಕೇಳಿದಾಗ ಕುಬಿಗೆ ಮಾನಸಿಕ ಆಘಾತವೇ ಆಯಿತು''[8]. ನಂತರ 'ಧೂಪದ ಮರದ ತಿರುವಿನ ಬಂಡೆಯ ಬಳಿಯ ಘಟನಾಸ್ಥಳಕ್ಕೆ ಧಾವಿಸಿ ಈಸಾವು ಖೂನಿಯೋ, ಅತ್ಯಾಚಾರವೋ ಎಂಬ ಸಮಸ್ಯೆಯುಂಟಾಯಿತು. ಏಕೆಂದರೆ ಇಯಾಲಿಗೆ ''ವಿಪರೀತ ಹೊಟ್ಟೆನೋವು, ಸೊಂಟನೋವು, ರಕ್ತಸ್ರಾವವು ಇದ್ದವಿಷಯ ಕುಬಿಗೆ ಗೊತ್ತಿತ್ತು. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ ನೀಡುವ ಪೋಲೀಸ್ ಇಲಾಖೆ, ಜಾತಿ ರಾಜಕಾರಣಗಳು, ಮಾನವೀಯ ಅನುಕಂಪಕ್ಕೆ ಬೆಂಕಿ ಹಾಕುವ ಜನತೆ, ರಸ್ತೆ ರಿಪೇರಿ ಮಾಡಿಸದ ಹಾಗೂ ಧೂಪದ ಬಂಡೆ ತೆಗಿಸದ ಕಂಟ್ರಾಕ್ಟರ್ ಸತ್ತಾರ್‌ಸಾಬ್, ಸೊಸೈಟಿಯ ಧಾನ್ಯ ತಾವೇ ಕದ್ದು ಹಮಾಲರಿಗೆ ಶಿಕ್ಷೆ ನೀಡುವ ಡೈರೆಕ್ಟರ್‌ಗಳು, ಮುಗ್ಧಳಾದ ಇಯಾಲಳ

---

7 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು , ಪುಟ-48

8 ಅದೇ ಪುಟ - 52

ಮೇಲೆ ಯಾರೋ ಅತ್ಯಾಚಾರ ಮಾಡಿ ಧೂಪದ ಬಂಡೆ ಹತ್ತಿರ ಕೊಲೆ ಮಾಡಿದ ಘಟನೆ, ಶಿವಣ್ಣ, ಗುರುರಾಯರ, ಬಸವಯ್ಯ ಮತ್ತು ಪ್ಲಾಂಟರ್ ಪಿಂಟೋ ಸೇರಿಕೊಂಡು ಇಯಾಲಳ ತಂದೆ ಒಬ್ರನನ್ನು ಒಪ್ಪಿಸಿ ಇಯಾಲಳಿಗೂ - ರಾಮಣ್ಣ ಗೌಡನಿಗೂ ಸಂಬಂಧ ಕಲ್ಪಿಸುವುದು. ಸಿ.ಬಿ.ಐ. ನವರು ಭಿಕ್ಷುಕ ವೇಷದಲ್ಲಿ ತನಿಖೆ ಮಾಡುತ್ತಿದ್ದಾರೆಂದು ಜನರ ಗುಸುಗುಸು ಇವೆಲ್ಲಾ ಒಂದು ಸಹಜವ್ಯಾಪಾರದಂತೆ ನಿಗೂಢ ಪೌರಭೌತಿಕ ಆಯಾಮವಾಗಿ ಬಿಡುತ್ತದೆ.

ಇಯಾಲ ಸಾವಿನ ನಿಗೂಢತೆಯು ಧೂಪದ ಬಂಡೆ ಹೊಡೆಯುವಾಗ ಸಿಡಿದ ಡೈನಾಮೇಟ್‌ನಿಂದಾಗಿ ಲೋರಿ ಸಾಯುವ ಸಂದರ್ಭ ಒದಗಿದಾಗ ಹೊರಹಾಕುತ್ತಾನೆ. ''ಅದೇ ತಾನೇ ಋತುಮತಿಯಾದ ಹುಡುಗಿಯನ್ನು ಸಂಭೋಗಿಸುವುದರಿಂದ ಸ್ತ್ರೀರೋಗ ತೊಲಗುತ್ತದೆ''[9] ಎಂಬ ಲೋರಿಯ ಅವೈಜ್ಞಾನಿಕ ಅಸಂಬಂಧ ತಿಳುವಳಿಕೆಗೆ ಮುಗ್ಧ ಇಯಾಲಳನ್ನು ಬಲಿತೆಗೆದುಕೊಳ್ಳುತ್ತದೆ. ಕುಬಿ ಜನರ ಪಾಲಿಗೆ ಅತಿಮಾನುಷ ವ್ಯಕ್ತಿಯಾಗುತ್ತಾನೆ. 'ಮೌಢ್ಯ,ತೊಲಗಿಸಬೇಕೆಂದು ಹವಣಿಸಿದ ಕುಬಿಯೇ ಆ ಜನರಿಗೆ 'ಮೌಢ್ಯದ ವಸ್ತುವಾಗುವಿಕೆಯು ಕಾಲಪುರುಷನ ಅಪಹಾಸ್ಯ ಮತ್ತು ಇತಿಹಾಸದ ವ್ಯಂಗ್ಯವಾಗುತ್ತದೆ.

ಕುಬಿಯ ವಿಚಾರವಾದ ಸೋಲುತ್ತದೆ. ಸತ್ಯದ ಮೂಲಕ ಜನರನ್ನು ತಲುಪಬೇಕೆಂಬ ಡಾಕ್ಟರ್, ಮಿಥ್ಯದ ಮೂಲಕ ತಲುಪಬೇಕೆಂಬ ಕಾಂಪೌಂಡರ್, ಡಾಕ್ಟರರಿಗೆ ವಿಜ್ಞಾನ ಮುಖ್ಯವಾದರೆ ಕಾಂಪೌಂಡರ್‌ನು ಜನರಿಗೆ ನಂಬಿಕೆ ಮುಖ್ಯ, ಒಟ್ಟಾರೆ ಇಡೀ ಜನತೆಯೇ ಮೂಢನಂಬಿಕೆಯ ಶಾಶ್ವತ ದಾಸರಾಗಿ ಬಿಡುತ್ತಾರೆ.

ಇದು ಕೇವಲ ಒಬ್ಬ ವ್ಯಕ್ತಿಯ ದುರಂತವಾಗದೆ ಇಡೀ ಸಮಾಜದ ಅಪಶ್ರುತಿಯೂ ದುರಂತವೂ ಆಗುತ್ತವೆ. ಇಯಾಲಳ ಕೊಲೆ ಒಂದು ಪುಟ್ಟ ಹುಡುಗಿಯೊಬ್ಬಳ ಸಾಮಾನ್ಯ ಕೊಲೆಯಾಗದೆ ಜಡ್ಡುಗಟ್ಟಿದ ಸಮಾಜದ ಅವನತಿಯನ್ನು ಪ್ರತಿಬಿಂಬಿಸುತ್ತದೆ.

ಗಾಂಧೀಜಿ ದೆಸೆಯಿಂದ

'ಊರ್ವಶಿ'ಕತೆಯಲ್ಲಿ ಆದರ್ಶವ್ಯಕ್ತಿಯಾಗಲು ವಿಫಲನಾದ ಸೋಮುವಿನ ಪಾತ್ರ ಚಿತ್ರಣ ಕಂಡರೆ 'ಗಾಂಧೀಜಿ ದೆಸೆಯಿಂದ' ಕತೆಯಲ್ಲಿ ಆದರ್ಶವ್ಯಕ್ತಿ ಗಾಂಧಿಯ ರೀತಿ-ನೀತಿಗಳನ್ನು ಅನುಸರಿಸಿ ಆದರ್ಶವ್ಯಕ್ತಿಯಾಗ ಬಯಸಿದ ಮೋಹನದಾಸನ

9 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು , ಪುಟ-60

ವಿಫಲತೆಯು ಪುನಃ ಸುಳ್ಳು ಹೇಳುವ ವ್ಯಕ್ತಿಯಾಗುವಂತೆ ಅವನ ತಂದೆ-ತಾಯಿಗಳೇ ಮಾರ್ಪಡಿಸುವುದನ್ನು ಕಾಣಬಹುದಾಗಿದೆ.

ಸತ್ಯ, ಅಹಿಂಸೆ, ನ್ಯಾಯ, ನೀತಿ, ಧರ್ಮ ಇತ್ಯಾದಿ ತಾತ್ವಿಕ ಹಾಗೂ ಮಾನವೀಯ ಮೌಲ್ಯಗಳು ಕೇವಲ ಪುಸ್ತಕಗಳಿಗೆ, ಭಾಷಣಗಳಿಗೆ ಮಾತ್ರ ಸೀಮಿತ. ಅದು ನಿಜಜೀವನದಲ್ಲಿ ಅಳವಡಿಸಿದರೆ ತತ್ವವಾಗಿ ಭರಿಸಬೇಕಾದಗ ಯಾತನೆಯನ್ನು ಇಲ್ಲಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಗಾಂಧೀಪಾಠದಿಂದ ಪ್ರಭಾವಿತನಾದ ಮೋಹನ ತಂಗಿಯ ಸುಳ್ಳುನಿಂದಾಗಿ ತಂದೆಯವರಿಂದ ಬೈಸಿಕೊಂಡು ತಾಯಿಯ ಹೊಡೆತ ತಿಂದು, ಅನಾರೋಗ್ಯದ ಅಪ್ಪನಿಗೆ ಔಷಧ ತರಲು ತೀರ್ಥಹಳ್ಳಿಗೆ ಬಂದು ಜಯರಾಮನ ರೂಮಿನಲ್ಲಿ ಕುಳಿತು ತಾನು ಶಾಲೆಗೆ ಚಕ್ಕರ್ ಕೊಟ್ಟದ್ದು ಬೀಡಿ ಸೇದಿದ್ದು, ಪೆನ್ಸಿಲ್ ಸಿದ್ಧನಿಗೆ ಕೊಟ್ಟು ಕಳೆದುಹೋಯ್ತೆಂದು ಸುಳ್ಳು ಹೇಳಿದ್ದು, ಶಾಂತಿ ಎಂಬ ಹುಡುಗಿಯನ್ನು ಪ್ರೀತಿಸುತ್ತಿದ್ದುದನ್ನು ಬಿಟ್ಟು ಏಕೆಂದರೆ ಅದು ಅಕ್ಷಮ್ಯ ಅಪರಾಧ ಎಂಬ ಕಾರಣದಿಂದ ಬರೆದಿರಲಿಲ್ಲ. ಇನ್ನು ಕಳ್ಳು, ಮಾಂಸದ ಸೇವನೆ ಅಪ್ಪನೇ ಮಾಡುತ್ತಿದ್ದರಿಂದ ಅದಕ್ಕೇ ಕ್ಷಮೆಯಾಚಿಸುವ ಅಗತ್ಯವಿಲ್ಲ ಎಂಬ ಭಾವನೆಯಿಂದ ಅಂತ್ಯದಲ್ಲಿ ತಾನು ಪಾತಕಿ, ಪಾಪಿ...ಎಂದೆಲ್ಲ ಬರೆದು ಮುಗಿಸುತ್ತಾನೆ.

ಊರಿಗೆ ಬಂದಾಕ್ಷಣವೇ ತಂದೆಯ ಸಿಟ್ಟಿನಿಂದ ಪ್ರೇರಿತಳಾದ ತಾಯಿ ಮಗನನ್ನು ಬಡಿಯುತ್ತಾಳೆ. ಆಗ ತಂದೆ 'ಹಾಕು ಇನ್ನೊಂದು ನಾಲ್ಕು ತಪರಾಕಿ---ಬೀಡಿ ಸೇದೋದು, ಮನೆ ಸಾಮಾನು ಮಾರೋದು, ಅಲ್ಲ ನಿನಗೆ ನನಗೇ ಬರೆಯುವಷ್ಟು ಸೊಕ್ಕು ಬಂತೇ ? ಲೇ ನಿನ್ನ ಮಗ ನಾಳೆ ಯಾವಳ ಜೊತೆಗಾದರೂ ಹಾದರ ಮಾಡಿ ಕಾಗದ ಬರೀದಿದ್ರೆ ಕೇಳು' ಎಂದಾಗ ಪತ್ರ ಬರೆದದ್ದು ತಾನಲ್ಲ ಎಂದು ಸುಳ್ಳು ಹೇಳುತ್ತಾನೆ. ಸುಳ್ಳಿಗಿರುವಷ್ಟು ಮರ್ಯಾದೆ, ಬೆಲೆ ಸತ್ಯಕ್ಕೆಲ್ಲಿ ಬರಬೇಕು. ಬಹುಶಃ ತಂದೆಯ ಮಾತುಗಳು ಇಂತಹವನ್ನೆಲ್ಲಾ ಹೇಳದೆಯೇ ಮರೆಯಲ್ಲೇ ಮಾಡುವಂತಹವುಗಳೆಂದು ಪುನಃ ಮಕ್ಕಳಿಗೆ ಸುಳ್ಳಿನದಾರಿಗೇ ಎಳೆಯುತ್ತವೆ. ಮಕ್ಕಳ ತಪ್ಪನ್ನು ತಿದ್ದದ ಪೋಷಕರು ಸ್ವತಃ ತಾವೇ ಮತ್ತೆ ತಪ್ಪುಮಾಡಿದಂತಾಗುತ್ತದೆ.

ರಂಗಪ್ಪ ಡಾಕ್ಟರರ ಔಷಧಿ ತಂದ ಮೋಹನ ತಂದೆಯ ಖಾಯಿಲೆಯಿಂದ ದುಃಖಿತನಾದದ್ದು. ಅದೇ ದುಃಖ ತಿಮ್ಮು ರಾಮರ ದುಃಖವಾಗಿ ಸಮಾಧಾನಿಸಿ ಮರಳುವಾಗ ಅಪ್ಪನಿಗೆ ತಕ್ಕ ಮಗ ಅಲ್ಲ ನಾನು. ಸುಳ್ಳು ಮೋಸ, ಪಾಪಿ ನಾನು'ಹೊಲಸುಕಲ್ಪನೆ

ಮರಣಶಯ್ಯೆಯಲ್ಲಿ ಮಲಗಿರುವ ತಂದೆ, ಅನಾಥ ತಾಯಿ, ನಿರ್ಗತಿಕ ಸುಶಿ, ಕಣ್ಣಂಚಿನಲ್ಲಿ ನಿರಾಡಿತವನಿಗೆ ಮಕ್ಕಳಿಗಿರುವ ಮನಸ್ಥಿತಿ ಹಿರಿಯರಿಗಿಲ್ಲದಂತಾಯಿತು. ನಾವು ಚಿಕ್ಕವರಿರಬೇಕಾದರೇನೆ ತುಂಬಾ ದೊಡ್ಡ ವ್ಯಕ್ತಿಗಳಾಗಿರುತ್ತೇವೆ. ಆದರೆ ದೊಡ್ಡವರಾಗುತ್ತಾ ಹೋದಾಗ ತುಂಬ ಸಣ್ಣವರಾಗಿ ಬಿಡುತ್ತೇವೆ. ಏಕೆಂದರೆ ಅಲ್ಲಿ ಸ್ವಾರ್ಥ, ಜಾತಿ, ಲಿಂಗ ಇತ್ಯಾದಿ ಮನೆಮಾಡುತ್ತೆ. ಆದರೆ ಚಿಕ್ಕವಯಸ್ಸಿನಲ್ಲಿ ಸ್ವಚ್ಛಂದವಾಗಿರುವಷ್ಟೇ ಪರಾರ್ಥಕ್ಕಾಗಿ ಬದುಕುವಿಕೆ ಸತ್ಯಕ್ಕೆ ಮುಖವಾಗುವಂತೆ ಕಂಡರೆ ಬೆಳೆಯುತ್ತಾ ಅದು ನಾಶಹೊಂದುವ ಸ್ಥಿತಿ ಕಾಣಬಹುದು.

ಸ್ವತಃ ತಪ್ಪುಗಳನ್ನು ಮಾಡುವ ತಂದೆ-ತಾಯಿಗಳಿಗೆ ಮಕ್ಕಳನ್ನು ದಂಡಿಸುವ ಇಲ್ಲವೇ ಕ್ಷಮಿಸುವ ಹಕ್ಕು ಕಳೆದುಕೊಳ್ಳುತ್ತಾರೆ. ಗಾಂಧಿ ಹೆಸರಿನ ಹೋಲಿಕೆ ವ್ಯಂಗ್ಯವಾಗಿ ಕಾಣಬಹುದು. ಆದರ್ಶ ತಂದೆ-ತಾಯಿಗಳಾಗಿದ್ದರೆ ಮಾತ್ರ ಮಕ್ಕಳಿಗೆ ನೀತಿ ಹೇಳಬಹುದು. ಆದರೆ ನಮ್ಮ ಸಮಾಜದ ವಿಪರ್ಯಾಸವೆಂದರೆ ಆದರ್ಶ ಎಂದರೆ ಯಾವುದು ಧರ್ಮ ಪರಿಪಾಲನೆ ಎಂದರೆ ಯಾವುದು ? ಎಂಬುದೇ ಗೋಜಿಗೆ ತರುವಂತದ್ದಾಗಿದೆ.

ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವುದೇ ಅಧರ್ಮವಾಗಿ, ಅಮಾನವೀಯವು, ಆದರ್ಶಯುತವಾಗಿಯು ಕಂಡುಬಂದರೆ ಮನುಷ್ಯನನ್ನು ಮೃಗೀಯವಾಗಿ ಬೇರ್ಪಡಿಸಿ ನೋಡುವುದೇ ಆದರ್ಶವಾಗಿ, ಧರ್ಮವಾಗಿ ಮಾನವೀಯವಾಗಿ ಕಂಡು ಅದೇ ಪರಮವೆಂದು ಪರಿಪಾಲಿಸುವ ರೂಢಿ ಪರಂಪರಾಗತವಾಗಿ ನೆಲೆಯೂರಿರುವುದರಿಂದ ಗಾಂಧೀ ತತ್ವವನ್ನು ಮರೆತು ಈ ಎಲ್ಲಾ ಅಚಾತುರ್ಯವೂ 'ಗಾಂಧೀ ದೆಸೆಯಿಂದಲೇ' ಎಂಬ ಶೀರ್ಷಿಕೆ ವ್ಯಂಗ್ಯವಾಗಿದೆ.

ಊರ್ವಶಿ

'ಹುಲಿಯೂರಿನ ಸರಹದ್ದಿನಲ್ಲಿ ತೀರ್ಥಹಳ್ಳಿ, ಶಿವಮೊಗ್ಗದತ್ತ ಹೊರಟ ಸೋಮುವೇ 'ಊರ್ವಶಿಯಲ್ಲಿ ಕಾಣಸಿಗುತ್ತಾನೆ. ಇಲ್ಲಿನ ಸೋಮನು ತಂದೆ-ತಾಯಿ, ಬಂಧುಗಳನ್ನು , ಪ್ರೇಯಸಿಯನ್ನು ಬಿಟ್ಟು ಏಕಾಂಗಿಯಾಗಿರುವುದನ್ನು ಕಾಣಬಹುದು.

ಪುರಾಣ ಪ್ರಖ್ಯಾತ 'ಪುರೂರವ - ಊರ್ವಶಿ' ಪ್ರೇಮದ ಸನ್ನಿವೇಶದ ಹಿನ್ನೆಲೆಯಲ್ಲಿಯೇ 'ಸೋಮು-ಸುಭದ್ರೆಯ' ಕಥೆಯನ್ನು ನಿರೂಪಿಸಲಾಗಿದೆ. ಸುಭದ್ರೆ ಸೋಮುವಿಗೆ ಮರೀಚಿಕೆಯಾಗುವ ಈಕತೆಯು ೧. ಶಾಪ ೨. ವಿರಹ ೩. ಮಿಳನ ಎಂಬ ಭಾಗವಾಗಿ ಮುಂದುವರೆದು ಅಂತಿಮವಾಗಿ ಮಾನವೀಯ ನೆಲೆಯ ವಿಫಲತೆಯ

ಶೋಧವನ್ನು ನೀಡುತ್ತದೆ. ಋಗ್ವೇದದಲ್ಲಿ 'ಸ್ತ್ರೀಯರ ಸ್ನೇಹವು ಸತ್ಯವಾದುದಲ್ಲ. ಅದು ತೋಳದಂತೆ ಹೃದಯವನ್ನು ಹರಿದುತಿನ್ನುತ್ತದೆ'' ಎಂಬ ಮಾತನ್ನು ಹೊಡೆದು ಪುರುಷರು ಪ್ರೀತಿಯ ಹೆಸರಿನಲ್ಲಿ ಸ್ತ್ರೀಯರಿಗೆ ಮೋಸ ಮಾಡಿ, ದಿಟ್ಟ ಪ್ರೇಮಿಯಾಗದೆ ಹೇಡಿಯಾಗುತ್ತಾರೆ ಎಂಬುದನ್ನು ಕಥಾಂತ್ಯವು ಧ್ವನಿಸುತ್ತದೆ. ಸೋಮುವಿನ ಮನಸ್ಥಿತಿಯನ್ನು ಗಮನಿಸಿದರೆ ಅಲ್ಲಮನಲ್ಲಿ ಹೆಣ್ಣು, ಹೊನ್ನು, ಮಣ್ಣು ಮಾಯೆಯಾಗದೆ ಮನದೊಳಗಿನ ಆಶೆಯೇ'' ಮಾಯೆ ಯಾಗುವಿಕೆಯನ್ನು ಸ್ಮರಿಸಬಹುದು. ಏಕೆಂದರೆ ಅವನು ಪರಂಪರೆ ರುವಾರಿಗಳಾದ ತಂದೆ-ತಾಯಿ -ಬಂಧುಗಳನ್ನು ಪ್ರೇಯಸಿಯನ್ನು ಪಡೆಯಲು ಧಿಕ್ಕರಿಸುತ್ತಾನೆ. ನಾಯಿ ಕಚ್ಚಿದ್ದರಿಂದ ಸಾವು ಸಮೀಪಿಸುತ್ತದೆ ಎಂದು ತಿಳಿದಾಗ 'ತಂದೆ-ತಾಯಿ ಮತ್ತು ಸುಭದ್ರೆ'ಯ ಮುಖ ಒಂದೇ ತೆರನಾಗಿಕಾಣುತ್ತದೆ. ೩೧ ದಿನವಾದನಂತರ ಪ್ರತ್ಯಕ್ಷವಾದ ನಾಯಿಯ ದರ್ಶನದಿಂದ 'ಜೀವನ್ಮುಕ್ತವಂತೆ'' ಸಂತುಷ್ಟವಾಗಿ ಸುಭದ್ರೆಯ ನೆನಪೇ ಆಗುವುದಿಲ್ಲ. ಇಲ್ಲಿ ಹೇಗಾದರೂ ಮಾಡಿ ಬದುಕಬೇಕು. ಆನಂತರ ಉಳಿದ ಸಂಬಂಧಗಳತ್ತ ಆಲೋಚನೆ ಎಂಬ ತಾತ್ವಿಕತೆ ಹೊರಡುತ್ತದೆ.

ಆದ್ದರಿಂದ ಪ್ರೀತಿ, ಪ್ರೇಮ, ವಾತ್ಸಲ್ಯ ಇವೆಲ್ಲ ಎರಡನೆಯ ಘಟ್ಟವಾಗುತ್ತವೆ. ಇಲ್ಲಿ ಪ್ರೀತಿಯ ಹುಚ್ಚಿಗೂ, ನಾಯಿಯ ಹುಚ್ಚಿಗೂ ಸಾಮ್ಯವನ್ನು ಕಲ್ಪಿಸಿದ್ದಾರೆ. ನಾಯಿ-ಪ್ರೇಯಸಿ ರ್‍ಯಾಬಿಸ್-ಪ್ರೇಮವಾಗಿ ಚಿತ್ರಿಸಿದ್ದಾರೆ. ಅಂತಿಮದಲ್ಲಿ ಪ್ರೀತಿಯ ಭ್ರಮಾಲೋಕದಲ್ಲಿರುವ ಸೋಮು ಸಾಯುತ್ತಿದ್ದರೂ ಸುಭದ್ರೆಗಾಗಿ ಸಾಯುತ್ತೇನೆಂದುಕೊಳ್ಳುತ್ತಾನೆ.

ರಸ್ತೆಯ ಮಧ್ಯೆ ಕಾರಿನ ಗಾಲಿಗೆ ಸಿಕ್ಕಬಹುದಾಗಿದ್ದ ಕೋಳಿಯ ಮರಿಗಳು ರಸ್ತೆಯ ಬದಿಗೆ ಓಡಿ ಬದುಕಿದಾಗ, ಇವನಲ್ಲೂ ಬದುಕಬೇಕೆಂದು ಬಯಕೆ ಪ್ರಬಲವಾಗುತ್ತದೆ. 'ಇಲ್ಲಿ ಬದುಕಬೇಕು. ಈ ಹಾಳು ಮಳೆ-ಗಾಳಿಗೆ, ಗುಡುಗಿಗೆ ಹುಚ್ಚು ನೆತ್ತಿಗೇರಿ ಸತ್ತರೆ, ಸುಭದ್ರೆ ತನಗಾಗಿ ಸತ್ತ ಅಂತ ತಿಳಿಯುವುದೇ ಇಲ್ಲ. ಸತ್ತರೂ ಸಾಕ್ರೇಟಿಸಿನಂತೆ ವಿಷಹೀರಿ 'ತೃಪ್ತಿಯಾಯಿತೆ ಎಂದು ಸುಭದ್ರಳಿಗೆ ಬರೆದು ಸತ್ತರೆ ಅದೊಂದು ಥರ' ಎಂದು ತನ್ನ ಸಾವಿನಲ್ಲೂ ಲಾಭವೆಣಿಸುವ ಪ್ರೇಯಸಿಯನ್ನು ಕನವರಿಸುವ ಸೋಮು ನಾಯಿ ಕಣ್ಣಿಗೆ ಕಂಡ ತಕ್ಷಣ ಸುಭದ್ರೆಯ ಪ್ರೇಮ ಎಲ್ಲವನ್ನೂ ಮರೆಯುತ್ತಾನೆ. ಆಧುನಿಕ ಪ್ರೇಮದ ಮನಃಸ್ಥಿತಿಯು ದುಃಸ್ಥಿತಿಗಿಳಿದಿರುವ ಸ್ಥಿತಿಯನ್ನು ಇಲ್ಲಿ ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ. ಪ್ರೇಮವೆಂದರೆ ಕಾಮವೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಸುಭದ್ರೆ ಕೊಟ್ಟ ಚೀಟಿಯನ್ನು

ಓದದ ಸೋಮು 'ಎಲ್ಲಿಂದಲೋ ಬೀಸಿದ ಗಾಳಿ ಅವಳ ಸೆರಗನ್ನು ದಿಗ್ಗನೆ ಎತ್ತಿದಾಗ, ಬರಿ ಕುಪ್ಪಸದ ಎದೆ ಬಟ್ಟಬಯಲಲ್ಲಿ ಆಸರೆಯೂ ಇಲ್ಲದೆ ನಿಂತಿದ್ದನ್ನು ಗಮನಿಸುತ್ತಾನೆ. ಅದೇ ಯೋಚನೆಯಲ್ಲಿ ಕಡಲೆ ತಿನ್ನುವಾಗ ಕೆಮ್ಮು-ಶೀನು ಬಂದು ನಾಯಿಯನ್ನು ತಿವಿಯುತ್ತಾನೆ. ಅದು ಕಚ್ಚಿದ್ದರಿಂದ 'ಕರಿಯ ನಾಯಾಗಲಿ ಊರ್ವಶಿಯಾಗಲೀ ಸಮಯ ಸಿಕ್ಕಾಗ ಕೈಕೊಟ್ಟು ಓಡುವುದೇ ಕೆಲಸ. ಭವಿಷ್ಯಗಳನ್ನು ವರ್ತಮಾನದಲ್ಲಿ ನಿಂತು ವೀಕ್ಷಿಸುವ ಮನುಷ್ಯನು ಸ್ವಾರ್ಥಕ್ಕಾಗಿ ಮಾತ್ರ ಬಳಸಬಹುದಾದ ಪರಿಕರಗಳೆಂಬ ತೀರ್ಮಾನಕ್ಕೆ ಬಂದು ನಿಲ್ಲುತ್ತಾನೆ. ಅಥವಾ ಇದು ಮಾನವಕುಲಕ್ಕೆ ಬಂದ ಶಾಪವೇ ಎಂಬ ತಾರ್ಕಿಕ ನೆಲೆಯಲ್ಲೇ ಕೊನೆಗೊಳ್ಳುತ್ತದೆ. ಇಲ್ಲಿ ಲೈಂಗಿಕತೆಯು ಮಾನವನ ಮೂಲಭೂತ ಅಗತ್ಯಗಳಲ್ಲಿ ಒಂದಾದ ಪ್ರಕೃತಿ ಸಹಜವಾದ ಕೊಡುಗೆಯೇ ಹೇಗೆ ಆಹಾರ, ಗಾಳಿ, ನೀರು,ವಸ್ತ್ರ,ಹಸಿವೆ, ಬಾಯಾರಿಕೆಯಂತೆ ಲೈಂಗಿಕತೆಯು ಸಹ. ದೇಹಧರ್ಮಕ್ಕು ದ್ರೋಹ ಬಗೆಯಬಾರದು ಎಂಬ ತಾತ್ವಿಕತೆಯಿದೆ.

'ವಿರಹ' ಎಂಬ ೨ನೇ ಘಟ್ಟದಲ್ಲಿ ಚಿಕಿತ್ಸೆ ನೀಡುವ ಡಾಕ್ಟರರು ದೇಹದ ಜೊತೆಗೆ ಮನಸ್ಸಿಗೂ ಚಿಕಿತ್ಸೆ ನೀಡುವವರಾಗಿದ್ದಾರೆ. ಒಂದು ಸಾರಿ ಹುಚ್ಚು ತಲೆದೋರಿದರೆ ಮುಗಿಯಿತು. ಮಂಚಕ್ಕೆ ಕಟ್ಟಿ ಬಿಡುತ್ತಾರೆ. ಬೊಗಳಿ ಬೊಗಳಿ ಸಾಯಬೇಕಾಗುತ್ತದೆ.....ಇದು ಸಾವೆಂದರೆ ಹೆಂಡತಿ ಮಕ್ಕಳನ್ನು ನೋಡುತ್ತಾ ನಿರಾತಂಕವಾಗಿ ಸಾಯಬೇಕು. ತಿನ್ನಲಿಕ್ಕಾಗದೇ ಕುಡಿಯಲಿಕ್ಕಾಗದೇ ನರಕ ಅನುಭವಿಸುತ್ತ ಸಾಯಬಾರದು. ಎಂದಾಗ ಪುನಃ ಅವಳ ಸಖ್ಯಕ್ಕಾಗಿ ನಾಯಿಯನ್ನು ಹುಡುಕುವ ನೆಪದಲ್ಲಿ ಸುಭದ್ರೆಯ ಹಾಸ್ಟೆಲಿನ ದಾರಿಯಲ್ಲಿ ಅಡ್ಡಾಡಿ ಸುಭದ್ರತೆಯ ದರ್ಶನವಿಲ್ಲದೆ ತನ್ನನ್ನು 'ಚಿರವಿರಹಿ' ಎಂದುಕೊಳ್ಳುತ್ತಾನೆ. 'ಅವಕಾಶವಂಚಿತರೆಲ್ಲ ಸ್ವಾಭಿಮಾನಿಗಳೇ ಆಗುತ್ತಾರೆ ಅಲ್ಲವೇ?'

'ಮಿಳನ' ಎಂಬ ೩ನೇ ಘಟ್ಟದಲ್ಲಿ ಡಾಕ್ಟರರ ಯಮಯಾತನೆಯ ಇಂಜೆಕ್ಷನ್ ತೆಗೆದುಕೊಳ್ಳಬೇಕಾದವನು ೭ಕ್ಕೆ ನಿಲ್ಲಿಸಿ ನಾಯಿಯನ್ನು, ಸುಭದ್ರೆಯನ್ನು ಮತ್ತೆ ಕಾಣದೇ ಸಾಯಬೇಕೋ, ಬದುಕಬೇಕೋ ನಿರ್ಧರಿಸಲಾರದ ತ್ರಿಶಂಕು ಅವಸ್ಥೆ ಅವನದಾಗುತ್ತದೆ. ನಾಯಿ ಪ್ರತ್ಯಕ್ಷವಾದ ಜೀವನೋತ್ಸಾಹ ಈಗ ಅವನಲ್ಲಿ ತುಂಬಿ ತಂದೆ-ತಾಯಿ, ಸುಭದ್ರೆ ಎಲ್ಲರನ್ನು ಮರೆತು ತನ್ನ ಬದುಕಿನ ಹೊಸಕನಸೊಂದನ್ನು ಮಾತ್ರ ಕಂಡು ಸುಭದ್ರೆಯನ್ನು ಮರೆಯುವಂತಹ ಸ್ಥಿತಿಯು ತಾನು ಸುಭದ್ರೆಯ ಮಿಳನಕ್ಕೆ ಹಾತೊರೆಯದೆ ತನ್ನ ಹೊಸಜೀವನದ ಮಿಳನಕ್ಕೆ ಹಾತೊರೆಯುವ ಹಾಗೂ ಪ್ರೀತಿಗೆ ಯಾವುದೇ ಅರ್ಥ ಶ್ರೀಮಂತಿಕೆ ತುಂಬಿದ ಸ್ವಾರ್ಥಿಯಾಗಿ ಸೋಮು ಕಾಣುತ್ತಾನೆ. ಆದರ್ಶವಿಲ್ಲದ ವ್ಯಕ್ತಿಯಾಗುತ್ತಾನೆ.

ಅಧ್ಯಾಯ - ೪

ಭಿನ್ನ ಸಂಸ್ಕೃತಿಗಳ ಆಕ್ರಮಣಗಳ ಪರಿಣಾಮ

ಈ ಬರವಣಿಗೆ ಸಮಾಜಮುಖಿಯಾಗಿದೆ. ಸಂಸ್ಕೃತಿಮುಖಿಯಾಗಿದೆ. ಇಲ್ಲಿ ವ್ಯಕ್ತಿಗಳ ಸಮಸ್ಯೆಗಳು ಕೇವಲ ವೈಯಕ್ತಿಕ ಸ್ವರೂಪದವಲ್ಲ ಮತ್ತು ವ್ಯಕ್ತಿಗಳು ಕೇವಲ ವ್ಯಕ್ತಿಗಳಲ್ಲ. ಅವರೆಲ್ಲ ನಿರ್ದಿಷ್ಟ ಸಾಮಾಜಿಕ ವರ್ಗಗಳಿಗೆ ಸೇರಿದವರೂ ಆಗಿರುತ್ತಾರೆ.

ಆಧುನಿಕ ನಾಗರೀಕತೆಯ ಆಕ್ರಮಣದಿಂದ ಉಂಟಾಗುವ ಮನುಷ್ಯನ ಆವಾಂತರ ಇಲ್ಲಿ ಸಹಜವಾಗಿ ಮೂಡಿಬಂದಿದೆ.

ಆಧುನಿಕ ನಾಗರೀಕತೆಯ ಪ್ರವೇಶಕ್ಕೆ ಪ್ರತೀಕವಾದ ಪೋಸ್ಟಾಫೀಸು ಅಬಚೂರಿನ ಬೋಬಣ್ಣನಿಗೆ ಹಂಗಾಮಿ ಉದ್ಯೋಗ ದೊರಕಿಸುವುದರ ಮೂಲಕ ಇದುವರೆಗೂ ಅವನ ಸಂಸಾರದಲ್ಲಿದ್ದ ನೆಮ್ಮದಿಯನ್ನು ಹಾಳುಮಾಡಿ ಅಲ್ಲಿ ಅಶಾಂತಿಯನ್ನು ತೊಂದರೆಯನ್ನೂ ಉಂಟು ಮಾಡುತ್ತದೆ.

ನಾಗರೀಕತೆಯಿಂದ ದೂರ ನಿಂತ ಸಮಾಜದಲ್ಲಿ ಗೊಂದಲಮಯ, ಅಸಮಾಧಾನ, ಮನಸ್ಥಾಪಗಳು ಇಡೀ ಊರಿನಲ್ಲಿ ಉದ್ಭವವಾಗುತ್ತದೆ.

ಅನಾಥನಾದ ಬೋಬಣ್ಣನನ್ನು ಅತ್ತೆ ಮಾಚಮ್ಮ ಮತ್ತು ಹೆಂಡತಿ ಕಾವೇರಿ ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಾರೆ.

ಜಾನ್‌ಸಾಹೇಬರ ಮಗ ಅಜೀಜನಿಗೆ ಬಂದ ಅರೆನಗ್ನಸ್ತ್ರೀಯೊಬ್ಬಳ ಫೋಟೋವಿರುವ ಕಾಗದವನ್ನು ಕದ್ದು ನೋಡಿದ ಬೋಬಣ್ಣ ಅತ್ತೆಯ ನಿಯಂತ್ರಣ ದಲ್ಲಿರುವ ಹೆಂಡತಿ ಕಾವೇರಿಯ ಸಂಗವನ್ನು ಬಯಸುವುದು ದುರಂತ ದಾಂಪತ್ಯಕ್ಕೆ ಪ್ರತಿನಿಧಿಯಾಗುತ್ತದೆ. ಜೊತೆಗೆ ಕಾವೇರಿಗೆ ಆಸಕ್ತಿಯಿದ್ದರೂ ತಾಯಿಯ ಮಾತನ್ನು ಮೀರದ ಸ್ಥಿತಿ ಅವಳದಾಗಿರುತ್ತದೆ. ಈ ರೀತಿ ಆ ದಾಂಪತ್ಯ ಅದಃಪತನಗೊಳ್ಳುತ್ತದೆ.

ಪೋಸ್ಟಾಫೀಸಿಗೆ ಆಶ್ರಯವಾಗಿದ್ದ ಮನೆ ಈ ಮಧ್ಯೆ ಪೋಸ್ಟಾಫೀಸಿನ ಸಮಸ್ಯೆಗಳಿಗೂ ಆಶ್ರಯವಾಗಿದ್ದು ಬೋಬಣ್ಣ ಮತ್ತು ಮನೆಯವರ ಮನಃಶಾಂತಿಯನ್ನು ಕದಡುತ್ತಾ ಹೋಗುತ್ತದೆ.

ಈ ಮಧ್ಯೆ ಸಾರಾಯಿ ಅಂಗಡಿಯ ಮರಕಾಪ್ಪನ ಆಳು ಬೇಲಾಯುಧನಿಗೆ ಮಗಳು ಪದ್ದಿ ಹಾದಿ ತಪ್ಪಿದ್ದು ಅವಳನ್ನು ತಿಂಗಳ ಮಟ್ಟಿಗೆ ತೋಟದ ಮನೆಯಲ್ಲಿ ಬಿಡಬೇಕೆಂದು ಮೂಗೂರಿನ ಸಾಹುಕಾರನ ತೋಟದ ಮೇಸ್ತ್ರಿ ಪದ್ದಿಯ ತಾಯಿಗೆ ನೂರು ರೂಪಾಯಿ ಕೊಟ್ಟ ವಿಷಯದ ಬಗ್ಗೆ ಬರುವ ಪತ್ರ ಹಾಗೂ ಅದನ್ನು ಪುನಃ ತಾನೇ ಬರೆದು ವೇಲಾಯುಧನ ನೆಂಟರಿಷ್ಟಗೆ ಬರೆದು ಕಳುಹಿಸುವ ಮಾರ್ಗವು ಪದ್ದಿಯ ಜೀವನಕ್ಕೆ ಮಸಿ ಬಳಿಯುವಂತದ್ದಾಗಿದೆ.

ಮೇಸ್ತ್ರಿ ಈ ವಿಷಯವಾಗಿ ಬೋಬಣ್ಣನ ಹೆಂಡತಿ ಕಾವೇರಿಯ ಬಗ್ಗೆ ಹಗುರವಾಗಿ ಮಾತನಾಡಿದಾಗ ಕಾವೇರಿ ಸುಮ್ಮನಿದ್ದರೂ ಬೋಬಣ್ಣ ಕೋಪತಾಳಲಾರದೆ ಮೇಸ್ತ್ರಿಗೆ ಗುದ್ದಿದಾಗ ಅತ್ತೆ ಮಾಚಮ್ಮನ ದೂರ್ತತೆ ಹೆಂಡತಿ ಕಾವೇರಿಯ ಅಸಹಾಕಾರ ವರ್ತನೆಯಿಂದ ರೋಸಿದ ಬೋಬಣ್ಣನಿಗೆ ಪುನಃ ಅನಾಥಪ್ರಜ್ಞೆ ಕಾಡುತ್ತದೆ. ಮೊದಲು ಪೋಕರಿಯಾಗಿ ನಂತರ ಸಂಸಾರಿಯಾಗಿ ನೆಮ್ಮದಿಯ ಕಾಲಹಾಕಿದ್ದ ಬೋಬಣ್ಣನ ಜೀವನದಲ್ಲಿ ಪೋಸ್ಟಾಫೀಸು ರಂಜನೀಯ ಚೇಷ್ಟೆಯಾದರೂ ಅದರಿಂದಲೇ ನೆಮ್ಮದಿ ಕಳೆದುಕೊಳ್ಳುವ ಸ್ಥಿತಿಗೆ ಇಳಿಯುವ ಸನ್ನಿವೇಷವು ನಗರೀಕರಣವು ಪ್ರಾರಂಭದಲ್ಲಿ ಆಕರ್ಷಣೀಯವಾದರೂ ನಂತರದ ಕಾಲದಲ್ಲಿ ವಿಷಕಾರಿಯಾಗುವಿಕೆಯ ದುರಂತತೆಯನ್ನು ಇಲ್ಲಿ ಕಾಣಬಹುದು. ಅಂದಮಾತ್ರಕ್ಕೆ ತೇಜಸ್ವಿ ನಾಗರೀಕತೆಯನ್ನೇನು ಅಲ್ಲಗೆಳೆಯುತ್ತಿಲ್ಲ. ನಾಗರೀಕತೆಯ ಪ್ರತೀಕವಾದ ಪೋಸ್ಟಾಫೀಸಿನಂತಹವುಗಳ ದುರ್ಬಳಕೆಯಿಂದ ವ್ಯಕ್ತಪಡೆಯುವ ಸಮಸ್ಯೆ ಸವಾಲುಗಳನ್ನು ಅವು ಸಂಸಾರದ ಮೇಲುಂಟುಮಾಡುವ ಪರಿಣಾಮವನ್ನು ಚಿತ್ರಿಸಿದ್ದಾರೆ.

ಬೋಬಣ್ಣ ಕೆಟ್ಟವನೇನಲ್ಲ. ನಗ್ನ ಚಿತ್ರ ನೋಡಿ ಉದ್ರೇಕಿತನಾಗಿ ಸೂಳೆಯ ಮನೆಗೂ ಹೋಗಲಿಲ್ಲ. ಅಥವಾ ಯಾವುದೇ ಹೆಂಗಸಿನೊಡನೆ ಅನ್ಯಾಸಕ್ತನೂ ಆಗಲಿಲ್ಲ. ಹೆಂಡತಿ ಕಾವೇರಿಯನ್ನು ನೋಡಿದಾಗ ಮಾತ್ರ ಅವನಿಗೆ ನಿಜವಾಗಿ ಕಾವೇರುತ್ತಿತ್ತು. ಆಗ ಆ ಸ್ತ್ರೀಯ ನಗ್ನ ಸ್ವರೂಪದ ಅನಂತ ಸಾಧ್ಯತೆಯನ್ನು ತನ್ನ ಹೆಂಡತಿಯಲ್ಲಿ ಕಾಣಬಯಸುತ್ತಾನೆ. ಆದರೆ ಈ ಚೇಷ್ಟೆಗಳು ಕಾವೇರಿಗೆ ಸರಿಕಾಣದಿರಲು ಕಾರಣ ಈಗಾಗಲೇ ತಮಗೆ ಬೆಳೆದು ದೊಡ್ಡವಳಾದ ಮಗಳು ನಂತರ ಒಂದು ಗಂಡುಮಗು ಅತ್ತೆ ಮಾಚಮ್ಮನಂತು ತಾನು ಗಂಡನಿಲ್ಲದೆ ಕಾವೇರಿಯನ್ನು ಸಾಕಿ ಸಲಹಿ ಬದುಕಿದಂತೆ ತನ್ನ ಮಗಳು ಕಾವೇರಿಯೂ ಗಂಡನಿಲ್ಲದೆ ಬದುಕಲಿ' ಎಂಬ ತೀರ್ಮಾನವಾದರೆ ಕಾವೇರಿಗೆ ಗಂಡನನ್ನು ಪ್ರೀತಿಯಿಂದ ಆಲಂಗಿಸಿದರೆ ಅಮ್ಮನಿಗೆ ದ್ರೋಹ ಬಗೆದಂತಾಗುತ್ತದೆ ಎಂಬ ಪುರಾಣದ ಪಾಪಪ್ರಜ್ಞೆ ಮಾನವೀಯ ಸಂಬಂಧಗಳ ಶೂನ್ಯತೆಯನ್ನೇ ಹೊರಹಾಕುತ್ತದೆ.

ಹೆಣ್ಣು ಮಗುವಾಗಿದ್ದಾಗ ಬೋಬಣ್ಣನನ್ನು ಉಪಚರಿಸಿ ಗಂಡುಮಗುವಾದ ತಕ್ಷಣ ಅವನ ಅನಗತ್ಯತೆಯ ತೀರ್ಮಾನಕ್ಕೆಬರುವ ಸ್ವಾರ್ಥಪರತೆಯು ಬೋಬಣ್ಣ ಅನ್ಯಸ್ತ್ರೀಯ ಚಟಕ್ಕೆ ಬಲಿಯಾಗಿದ್ದಾನೆ ಎಂಬ ಕಾರಣವೇ ಆಗಿರುತ್ತದೆ.

ತೇಜಸ್ವಿ ಕತೆಗಳಲ್ಲಿ 'ಕಾಮ' ಬಿಂಬಿತವಾದರೂ ಸಮಸ್ಯೆಯೇ, ಬಿಂಬಿತವಾಗದಿದ್ದರೂ ಅವನ ಪಂಚೇಂದ್ರಿಯಗಳಲ್ಲೇ ಏನೋ ಊನವಿದೆ ಎಂದು ತಿಳಿಯುವ ಸಮಾಜದ ಇಬ್ಬಗೆಯನ್ನು ಅನಾವರಣಗೊಳಿಸುತ್ತಾರೆ.

ಅಂತ್ಯದಲ್ಲಿ ಈ ವಿಷಮ ಪರಿಸರದಲ್ಲಿರಲು ಇಚ್ಛಿಸದ ಬೋಬಣ್ಣ ಸಿಟ್ಟಿನಲ್ಲಿ ತನ್ನ ತಡೆಯಲಿಕ್ಕೆ ಬಂದ ಜನಗಳನ್ನೆಲ್ಲಾ ಮುಷ್ಠಿಯಿಂದ ಮೋರೆಗೆ ಗುದ್ದಿ ಹಿಂದಕ್ಕೆ ನೋಡದೆ ಓಡಿಹೋಗುವ ಪ್ರಸಂಗವೂ ಬೋಬಣ್ಣನ ದುರಂತಕತೆಯನ್ನು ಚಿತ್ರಿಸುವುದರ ಜೊತೆಗೆ ಈಗ ಆವರಿಸಿದ ಕತ್ತಲು ಮತ್ತೊಂದು ದಿನದ ಬೆಳಕನ್ನು ಅರಸುವುದೇ ಆಗಿದೆ.

ತುಕ್ಕೋಜಿ

ಆಧುನಿಕತೆಯ ಆಕ್ರಮಣದಿಂದ ವ್ಯಕ್ತಿ ತತ್ತರಿಸಿ ಹೋಗುವ ಹಾಗೂ ನೆಮ್ಮದಿಯನ್ನು ಹಾಳುಮಾಡಿಕೊಳ್ಳುವ ಸ್ಥಿತಿಯನ್ನು ವೈಯಕ್ತಿಕವಾದ ದುರಂತಗಳು ಹೇಗೆ ಒಂದು ಇಡೀ ಸಮಾಜದ ಮೇಲೆ ಪರಿಣಾಮ ಬೀರಬಲ್ಲವು ಎಂಬುದನ್ನು ತೇಜಸ್ವಿಯವರು ಬಹುಪಾಲು ಕತೆಗಳಂತೆ ತುಕ್ಕೋಜಿ ಕತೆಯು ಸಾಗುತ್ತದೆ.

ಗುರುಗಳ್ಳಿಗೆ ಆಧುನಿಕತೆ ಪ್ರವೇಶಿಸಿದ್ದು ನಗರದ ರೀವಿಯನ್ನೇ ಬದಲಿಸಿ ಟೈಲರ್ ತುಕ್ಕೋಜಿ ಮಾತ್ರ ಜನರ ಅಭಿರುಚಿಗೆ ತಕ್ಕಂತೆ ಬದಲಾಗದಿರುವುದೇ ಅವನ ಚಿತ್ತಸ್ವಾಸ್ಥ್ಯ ಕೆಡಲುಕಾರಣವಾಗುತ್ತದೆ.

'ಕಾಲಾಯ ತಸ್ಮೈ ನಮಃ' ಎಂಬ ಶ್ಲೋಕದ ಸಾಲಂತೆ ಕಾಲಕ್ಕೆ ತಕ್ಕಹಾಗೆ ನಡೆಯುವ ಒಂದು ಸಮಾಜದ ದುರಂತವೇ ಇಲ್ಲಿನ ಕತೆಯ ವಸ್ತುವಾಗಿದೆ.

ವರದಕ್ಷಿಣೆ ನಿರಾಕರಿಸಿದ್ದರಿಂದ ಮನೆಯವರಿಂದ ದೂರವಾದ ತುಕ್ಕೋಜಿ ತಾನು ಇಷ್ಟಪಟ್ಟ ಸರೋಜಳನ್ನು ತಂದೆಯ ಇಚ್ಛೆಯ ವಿರುದ್ಧವಾಗಿಯೇ ಮದುವೆಯಾಗಿ ಗುರುಗಳ್ಳಿಗೆ ಬಂದು ಟೈಲರ್ ವೃತ್ತಿ ಆರಂಭಿಸಿ ಸ್ವಾಭಿಮಾನಿಯಾಗಿ ಬದುಕುವಲ್ಲಿ ತನ್ನ ಹೆಂಡತಿಯ ಸಹಾಯ ಹಸ್ತವು ಇತ್ತು. ಆತ ಹೊಲಿದು ಕೊಟ್ಟ ಬಟ್ಟೆ ಕಾಲೇಜಿನ ಹುಡುಗ-ಹುಡುಗಿಯರಿಗೆ, ಗಿರಾಕಿಗಳಿಗೆ ದೇವರು ಕೊಟ್ಟ ಚರ್ಮದಂತಿರುತ್ತಿತ್ತು. ನಂತರದ

ದಿನಗಳಲ್ಲಿ ತಮ್ಮ ಪ್ರೇಮಕ್ಕೆ ಸಂಕೇತವಾಗಿ ಕೃಷ್ಣೋಜಿ ಜನಿಸಿ ಬೆಳವಣಿಗೆ ಹೊಂದಲಾರಂಭಿಸಿದಂತೆ ಗುರುಗಳ್ಳಿಯ ಹೆಚ್ಚು ನಾಗರೀಕತೆಗೊಂಡಿದ್ದರಿಂದಾಗಿ ಕೃಷ್ಣೋಜಿಯ ತುಂಟತನವೂ ಸೇರಿ ಜನರ ಅಭಿರುಚಿಗೆ ತಕ್ಕಂತೆ ತಾನು ಬದಲಾಗದಿದ್ದರಿಂದ ತುಕ್ಕೋಜಿಯ ಏಕಾಗ್ರತೆ ಕುಂದುತ್ತದೆ.

ವೈಯಕ್ತಿಕ ಜೀವನದಲ್ಲಿ ಉಂಟಾದ ಕೆಲವು ವೈಪರೀತ್ಯಗಳು ಹಾಗೂ ರೈಲ್ವೇ ನಿಲ್ದಾಣ, ಆಸ್ಪತ್ರೆ, ಬಸ್‌ನಿಲ್ದಾಣ, ಪೋಸ್ಟಾಫೀಸು, ಸಿನಿಮಾ ಇತ್ಯಾದಿ ನಾಗರೀಕ ವ್ಯವಸ್ಥೆ ಹೆಚ್ಚಾದಂತೆ ತುಕ್ಕೋಜಿ ಕುಗ್ಗುತ್ತಾನೆ. ಇದರಿಂದಾಗಿ ತಮ್ಮ ದಾಂಪತ್ಯಜೀವನದಲ್ಲಿ ಅಶಾಂತಿ ತಲೆದೋರುತ್ತದೆ. ಸರಸದಲ್ಲಿ ಪ್ರಾರಂಭವಾದದ್ದು ವಿರಸದ ಕೊಂಪೆಯಾಗುತ್ತದೆ.

ಈ ಮಧ್ಯೆ ಊರ ರಸ್ತೆಯಲ್ಲಿ ಬುಲ್ಡೋಜರ್‌ನ ಪ್ರವೇಶವು ಕಿಟ್ಟಿಗೆ ಆಕರ್ಷಣೆಯಾದರೆ ತಂದೆತಾಯಿಗೆ ವಿಕರ್ಷಣೆಯಾಗುತ್ತಿದೆ. ರಸ್ತೆಗೆ ಅಡ್ಡಾಡಲಾರದಂತೆ ನೋಡಿಕೊಳ್ಳಬೇಕೆಂದು ಆತ ಹೇಳಿದಾಗ 'ಯೋಗ್ಯತೆಗೆ ತಕ್ಕಂತೆ ಮಕ್ಕಳು ಹುಟ್ಟುತ್ತವೆ' ಎಂಬ ಆತ್ಮನಿಂದನೆ ಮಾಡಿಕೊಂಡು ತುಕ್ಕೋಜಿಯು ಹೆಂಡತಿಯ ಮೇಲೆ ರೇಗುತ್ತಾನೆ.

ಕಿಟ್ಟಿ ತಮಗೆ ಬೇಡ ಎಂದು ಬುಲ್ಡೋಜರ್‌ನ ಡ್ರೈವರ್‌ಗೆ ಹೇಳಿದಾಗ ಅವನು ಕರೆದುಕೊಂಡು ಹೋಗಿ ಬಾರದಿದ್ದಾಗ ಮಗನನ್ನು ಕಾಣದ ತಂದೆ-ತಾಯಿಗಳು ದಿಗ್ಭ್ರಾಂತರಾಗಿ ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೇಂಟ್ ಕೊಡಬೇಕೆಂದುಕೊಳ್ಳುತ್ತಾರೆ. ಪರಸ್ಪರ ತಮ್ಮ ಕಚ್ಚಾಟದಿಂದಲೇ ಈ ದುರಂತಕ್ಕೆ ಕಾರಣವೆಂದು ಪಶ್ಚಾತ್ತಾಪಪಡುತ್ತಾರೆ. ನಾಗರೀಕತೆಯ ಮೇಲೆ ಜಿಗುಪ್ಸಿತರಾಗುತ್ತಾರೆ. ಡ್ರೈವರ್‌ನನ್ನು ಹಳಿದುಕೊಳ್ಳುತ್ತಾರೆ. ಆದರೆ ಪುನಃ ಕಿಟ್ಟು ಹಿಂದಿರುಗಿದಾಗ ತಮ್ಮ ಆಲೋಚನೆಗಳಿಗೆ ತಾವೇ ನಾಚಿಕೆಪಟ್ಟುಕೊಂಡು ಮಗದ ಸಿಕ್ಕಿದ್ದರಿಂದ ಭಾವುಕ ಸ್ಥಿತಿಯನ್ನು ತಲುಪುತ್ತಾರೆ. ಇಲ್ಲಿ ಒಂದು ಸಾಮಾಜಿಕ ಅನನ್ಯತೆಯನ್ನು ತೇಜಸ್ವಿ ಕಟ್ಟಲು ಬಯಸುತ್ತಾರೆ.

ಜಾಗತೀಕರಣ ಪ್ರಕ್ರಿಯೆಯ ಇಂದಿನ ಅಬ್ಬರದ ದಿನಗಳಲ್ಲಿ ಎಷ್ಟೋ ವೃತ್ತಿಗಳು ಅರ್ಥಕಳೆದುಕೊಳ್ಳುತ್ತಿರುವುದನ್ನು ನಾವಿಂದು ಕಾಣಬಹುದು. ವ್ಯಕ್ತಿಯ ವೃತ್ತಿಯಲ್ಲಿ ಆಗುತ್ತಿರುವ ವೈಪರೀತ್ಯಗಳು ಹಾಗೂ ಅದಕ್ಕೆ ತಕ್ಕಂತೆ ಹೊಂದಿಕೊಳ್ಳುವ ಪರಸ್ಪರ ಕೊಳ್ಳು-ಕೊಡುಗೆಗಳು ನಡೆದು ಸಾಮರಸ್ಯದ ಜೀವನ ನಡೆಸುವ ಸಂದೇಶವನ್ನು ಕತೆಯು ಅನಾವರಣಗೊಳಿಸುವಂತಿದೆ.

ತಬರನ ಕಥೆ

ತಬರನ ಕಥೆಯು 'ಹುಚ್ಚಿ'ನಿಂದ ಆರಂಭವಾಗಿ ಹುಚ್ಚಿನಿಂದಲೇ ಅಂತ್ಯವಾಗುತ್ತದೆ. ಆದರೆ ಆ ಹುಚ್ಚು ಕೇವಲಒಬ್ಬವ್ಯಕ್ತಿಯದಾಗದೇ ಇಡೀ ಸಮಾಜದ ಹುಚ್ಚು ಅದಾಗಿರುತ್ತದೆ.

ವ್ಯಕ್ತಿ ಮಾನವೀಯ ಸಂಬಂಧಗಳನ್ನು ಕಳೆದುಕೊಂಡಾಗ ಏಕಾಂಗಿತನದ ಹುಚ್ಚು ಕಾಡುತ್ತದೆ. ವ್ಯಕ್ತಿಗಳು ಹುಚ್ಚಾಗಲು ಕಾರಣ ಇಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿನ ಅವ್ಯವಸ್ಥೆಯೇ ಆಗಿದೆ. ಇದು ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯಿಸುತ್ತದೆ. ಬಹುಶಃ ಇದು ನಾಗರೀಕತೆಯ ಗಿಫ್ಟ್ ಇರಬಹುದು.

ಪ್ರಸ್ತುತದಲ್ಲಿ ತಬರನು ಬ್ರಿಟೀಷ್ ಆಳ್ವಿಕೆಯಲ್ಲಿ ನೌಕರಿಗೆ ಸೇರಿ, ಸ್ವಾತಂತ್ರೋತ್ತರ ಭಾರತದಲ್ಲಿ ನಿವೃತ್ತನಾಗಿ ತನ್ನ ಪೆನ್ಷನ್ ಹಣಕ್ಕಾಗಿ ನಾಯಿಯಂತೆ ಅಲೆದಾಡಿ ಹೆಂಡತಿಯನ್ನು ಕಳೆದುಕೊಂಡು ಮತಿಭ್ರಾಂತನಾಗುವ ಚಿತ್ರಣ ಇಲ್ಲಿದೆ.

ಬ್ರಿಟೀಷ್ ಮತ್ತು ಭಾರತೀಯ ಎರಡು ಆಡಳಿತ ವ್ಯವಸ್ಥೆಯಲ್ಲಿನ ಸೂಕ್ಷ್ಮತೆಯನ್ನು ಕಂಡವರಿಬ್ಬರು 'ಡಾಕ್ಟರ್‌ಸೆಲ್ವ ಮತ್ತು ತಬರಶೆಟ್ಟಿ'.

ತಬರನು ಪ್ರಾರಂಭದಲ್ಲಿ ಗಾಂಧಿವಾದವನ್ನು ಕೆಲವು ಸಂದರ್ಭಗಳಲ್ಲಿ ನಿರಾಕರಿಸಿ ಮತ್ತೆ ಕೆಲವು ಸಂದರ್ಭಗಳಲ್ಲಿ ಒಪ್ಪುತ್ತಿದ್ದವನು ಸತ್ಯಾಗ್ರಹದ ಸಂದರ್ಭದಲ್ಲಂತೂ ಬ್ರಿಟೀಷರ ಪರವಾಗಿರಬೇಕೋ ? ಭಾರತೀಯರ ಪರವಾಗಿರಬೇಕೋ? ಎಂದು ಅರಿಯದ ತಬರ 'ಮಾನವೀಯತೆ'ಯ ಪರ ವಹಿಸಲು ನಿರ್ಧರಿಸಿದನು. ಸ್ವಾತಂತ್ರ್ಯ ಬಂದ ೨೫ ವರ್ಷದ ನಂತರ ಕಾಫಿಬೋರ್ಡ್‌ನ ಸುಂಕ ವಸೂಲಿ'ಯ ಕೆಲಸ ಅವನದಾಗಿದ್ದು ಮೊದಲ ದಿನವೇ ಡಿಪೋ ಮೇನೇಜರನಿಗೂ ಕಾಫಿಬೆಳಗಾರರಿಗೂ ತೆರಿಗೆ ವಿಷಯವಾಗಿ ಜಗಳವಾದ್ದರಿಂದ ಬೆಳೆಗಾರರು ಸುಂಕ ಕೊಡುವುದಿಲ್ಲವೆಂದು ಚಳವಳಿ ಆರಂಭಿಸುವುದು ತಬರನಿಗೆ ಗಾಂಧಿ ಸತ್ತರೂ ಅವನ ಚಳವಳಿ ನಿರಂತರವಾಗಿ ಮುಂದುವರೆಯುವಂತೆ ಕಂಡಿತು. ಹಿಂದೆ ಬೇರೆಯವರ ವಿರುದ್ಧ ವೈಮನಸ್ಯ ಇದ್ದರೆ ಇಂದು ನಮ್ಮ ನಮ್ಮಲ್ಲೇ ವೈಮನಸ್ಯ ಇರುವಿಕೆ ಗುರ್ತಿಸಿದನು. ಈ ಜಗಳದ ಮಧ್ಯೆ ತಬರ ಕೆಲವರಿಗೆ ಸುಕಂದ ರಸೀತಿಯನ್ನು ಹರಿದಿದ್ದ. ಹೀಗಾಗಿ ಅರವತ್ತು ರೂಪಾಯಿ ಸಂಬಳಕ್ಕೆ ದುಡಿಯುತ್ತಿದ್ದ ತಬರ ಈಗ ಮುನ್ನೂರ ಅರವತ್ತು ರೂಪಾಯಿ ಕೈಯಿಂದ ಕೊಡುವ ಸ್ಥಿತಿಯು.ಇಲ್ಲಿನ ಅಧಿಕಾರಿಗಳ, ಜನಗಳ ಕ್ಷುದ್ರಮನ ಸ್ಥಿತಿಯ ಪ್ರತಿಬಿಂಬಿತವಾಗುತ್ತದೆ. ಬ್ರಿಟೀಷ್ ಆಡಳಿತವೇ ಸೂಕ್ತವಾದುದು, ಮಾನವೀಯ ಸ್ಥಿರದಲ್ಲಿ ಎಂದೆನಿಸುತ್ತದೆ.

ಅನಾಥ ತಬರನ ಏಕೈಕ ಬಂಧು ಮಡದಿ 'ಅಪ್ಪಿಯು' ದಿನೇ ದಿನೇ ಗ್ಯಾಂಗ್ರಿನ್ ಕ್ಯಾನ್ಸರ್‌ನಿಂದ ಬಳಲುವಿಕೆಯು ಆಕೆಗೆ ಮಕ್ಕಳಾಗದ ಕೊರಗಿದೆ. ಮುಖ್ಯ ದೇವರು ಕೊಡಿಲಿಲ್ಲ. ಅದಕ್ಕಿಂತ ಮುಖ್ಯ ನನಗೆ ಮಕ್ಕಳು ಮಾಡೋದಕ್ಕೆ ದೇವರು ಪುರುಸೊತ್ತನ್ನು ಕೊಡಲಿಲ್ಲ' ಎಂಬ ಮಾತು ಆಧುನಿಕ ಯಾಂತ್ರಿಕ ಯುಗವು ದಾಂಪತ್ಯದ ಸುಖವನ್ನೆ ಬಲಿತೆಗೆದುಕೊಂಡು ಭಗ್ನಗೊಳಿಸಿರುವುದನ್ನು ಕಾಣಬಹುದು ಎಂಬ ವಾಸ್ತವದ ಸತ್ಯಾಂಶವು ತಬರನ ಅವಿಶ್ರಾಂತ ದುಡಿಮೆಯ ಮೇಲೆ ಬೆಳಕು ಚೆಲ್ಲುತ್ತದೆ. ಇದು ಪ್ರಸ್ತುತ ಹೈಟೆಕ್ ದುಡಿಮೆಗೆ ತೊಡಗಿದ ಈಗಿನ ಕಾಲದ ದಂಪತಿಗಳ ದಾಂಪತ್ಯವೂ ಹೌದಾಗಿದೆ.

ಡಾಕ್ಟರ್ ಸಿಲ್ವ'ರವರು ಗ್ಯಾಂಗ್ರಿನ್ ಇರುವುದನ್ನು ಪತ್ತೆ ಹಚ್ಚಿದಾಗ ಅದರ ಚಿಕಿತ್ಸೆಗಾಗಿ ತಬರ ತನ್ನ ಪೆನ್ಷನ್ ಹಣ ಪಡೆಯಲು ಹೋರಾಡುವ ಸ್ಥಿತಿ ಮನಮುಟ್ಟುವಂತದ್ದಾಗಿದೆ. ತಹಶೀಲ್ದಾರರ ಕಛೇರಿಗೆ ಅಲೆದು ಬಸವಳಿದ ತಬರನು ಹೆಂಡತಿಯ ಕಾಯಿಲೆಗೆ ಪಂಡಿತರ ಬಳಿಯೇ ಮದ್ದು ಕೊಡಿಸಿದರಾಯಿತು ಎಂಬ ತೀರ್ಮಾನಕ್ಕೆ ಬರಲು ಮುಖ್ಯ ಕಾರಣ ಅವನಿಗೆ ಒಂದು ಹೊತ್ತು ಗಂಜಿಯನ್ನು ಕೂಡಿಹಾಕುವಷ್ಟು ಹಣವೂ ಇರುವುದಿಲ್ಲ. ಪೆನ್ಷನ್ ಹೆಸರಿನಲ್ಲಿ ಅನೇಕ ಸಣ್ಣಪುಟ್ಟ ಸಾಲದ ಭಾರವೇ ಅಧಿಕವಾಗಿದ್ದವನಿಗೆ ಯಾರು ತಾನೆ ಹಣಕೊಡಲು ಮುಂದಾಗುತ್ತಾರೆ. ತಬರನ ಈ ಅವಸ್ಥೆ ಕಂಡ ಅಪ್ಪಿಯು ''ಔಷಧಿ ಬೇಡ, ಏನೂ ಬೇಡ, ನಾಕಾಣೆ ಪಾಷಾಣ ತಂದುಕೊಡಿ''[33] ಎಂದು ನೋವಿನಿಂದ ಹೇಳಿದಾಗ ಸಾಯಲು ಇಲ್ಲಿ ದುಡ್ಡೇಬೇಕಾಗುತ್ತದೆ ಆದರೆ ಅದು ತಬರನಲಿಲ್ಲ.

ತಬರನ ಪೆನ್ಷನ್‌ಗೆ ಸಂಬಂಧಿಸಿದ ದಾಖಲೆಗಳನ್ನು ಪಟೇಲರು ಶಾನುಭೋಗರು ಹೀಗೆ ಅನೇಕ ಅಧಿಕಾರಿಗಳು ಕೇಳಿದಾಗ ಅವನಿಗೆ ನೆರವಾದ ಮುನಿಸಿಪಾಲಿಟಿಯ ಅಭ್ಯರ್ಥಿ ಬಂಡಪ್ಪನ ಹಿಂದೆಯೇ ಚುನಾವಣಾ ಸ್ವಾರ್ಥ ಸಾಧನೆಯೇ ಇದೆ. ಓಟ್‌ಬ್ಯಾಂಕ್ ಗಳಿಸುವುದಷ್ಟೇ ಇವನ ಉದ್ದೇಶ. ಬಂಡಪ್ಪ ತಬರನನ್ನು ತಹಶೀಲ್ದಾರ್ ಬಳಿ ಕೊಂಡೊಯ್ದಾಗ ''ತಬರ ಪ್ರಾವಿಡಂಟ್ ಫಂಡಿನ ಸ್ಕೀಮಿಗೆ ಸೇರಿದವನೋ, ಪೆನ್ಷನ್ ಸ್ಕೀಮಿಗೆ ಸೇರಿದವನೋ ? ಸ್ಪಷ್ಟವಿಲ್ಲ. ಆದ್ದರಿಂದ ಮೇಲಿನ ಅಧಿಕಾರಿಗಳೊಡನೆ ವ್ಯವಹರಿಸಬೇಕಾಗುತ್ತದೆ''[1] ಎಂಬ ಮಾತು ತಬರನಿಂದ ಲಂಚಪಡೆಯಲು ಆಡಿದ ನಾಟಕವೇ ಆಗಿದೆ. ಫೈಲು ಮೇಲಿಂದ ಕೆಳಕ್ಕೆ ಕೆಳಗಿಂದ ಮೇಲಕ್ಕೇ ಓಡಾಡತೊಡಗುತ್ತದೆ.

1 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು , ಪುಟ-101

ತಹಶೀಲ್ದಾರರು ಅವನ ಬಳಿ ಲಂಚ ಕೇಳಿದಾಗ ನನ್ನ ಫಂಡು ದುಡ್ಡು ಎಲ್ಲಾ ಬರಕೊಳ್ಳಿ ಸ್ವಾಮಿ ಎನ್ನುತ್ತಾನೆ. ಇದು ಇಡೀ ಇಂದಿನ ಸರ್ಕಾರಿ ಕಛೇರಿಗಳಲ್ಲಿ ನಡೆಯುವ ದುಃಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಇದು ನಮ್ಮ ಸುತ್ತಮುತ್ತ ನಡೆಯುವ ಘಟನೆಯೂ ಆಗುತ್ತದೆ. ಕೆಲವೊಮ್ಮೆ ತಬರನ ಸ್ಥಿತಿ ದುಃಖ ನಮ್ಮ ದುಃಖವಾಗಿಯೂ ಭಾಸವಾಗುತ್ತದೆ.

''ಥೆ, ದೊರೆಗಳ ಕಾಲದಲ್ಲಿ ಎಷ್ಟೊಂದು ಚೆನ್ನಾಗಿತ್ತು. ನಿಂತ ನಿಲುವಿನಲ್ಲಿ ಜಮೀನು ಮಂಜೂರು ಮಾಡ್ತಿದ್ದರು. ಎಷ್ಟು ಸಲೀಸು ಜನ. ಖುಷಿಯಾದರೆ ಇನಾಮು ಕೊಡುತ್ತಿದ್ದರು.''[35] ಎಂಬ ತಬರನ ಮಾತು ಬ್ರಿಟೀಷರ ಆಡಳಿತದ ಸುವ್ಯವಸ್ಥೆಯನ್ನು ನೆನಪಿಗೆ ತರುತ್ತದೆ. ಅಂದಿನ ದಿನಗಳು ನಮ್ಮವರ ಆಡಳಿತಕ್ಕಿಂತ ನಿಜವಾಗಿಯೂ ಸ್ವಚ್ಛವಾಗಿದ್ದಂತೆ ಎನ್ನಿಸಿತು. ''ಕೆಲವು ಸೂಳೆಯಮಕ್ಕಳು ರಾಜ್ಯ ಆಳ್ತಾರಂತೆ, ಕೊಡೋಕು ಗೊತ್ತಿಲ್ಲ. ತಗೋಳ್ಳಕೂ ಗೊತ್ತಿಲ್ಲ. ರಿಕಾರ್ಡು ಬೇಕಂತೆ ಸರ್ಟಿಫಿಕೇಟ್ ಬೇಕಂತೆ''[2] ಎಂದು ಸ್ವದೇಶಿ ಆಡಳಿತದ ಗೋಮುಖ ವ್ಯಾಘ್ರನನ್ನು ಜರಿಯುತ್ತಾನೆ. ಇದರಿಂದ ಲೇವಾದೇವಿ ಸುಬ್ಬಶೆಟ್ಟರು 'ಸರ್ಕಾರದ ಹಣ ಸ್ಮಶಾನದ ಹೆಣ ಎಂದೂ ಒಂದೇ ಕಣೋ.' ನಿನ್ನ ಹೆಂಡತಿ ಇರಲಿ ನೀನು ಸಾಯೋದಕ್ಕೆ ಮೊದಲು ಬರುವುದಿಲ್ಲ ಎಂಬ ಮಾತಿನ ನೆನಪು ನಮ್ಮ ಸರ್ಕಾರದ ಆಡಳಿತ ವ್ಯವಸ್ಥೆಗಿಡಿದ ಕನ್ನಡಿಯಾಗಿದೆ.

ಮಾನವನನ್ನು ಮಾನವೀಯತೆಯನ್ನು ಕರಕರ ಜಗಿದು ಉಗಿಯುತ್ತಾ ಇರುವ ಒಂದು ಸೈತಾನ ವ್ಯೂಹ ಕಂಡಿತು. ಮನುಷ್ಯನನ್ನು ಕೊಂದು ಒಣ ಮೀನಿಂತೆ ಒಣಗಿಸಿ ಜೀವಾತ್ಮಗಳನ್ನು ಫೈಲಿನಲ್ಲಿ ಕಟ್ಟಿ ಡೆಸ್ಕಿನಿಂದ ಡೆಸ್ಕಿಗೆ ರವಾನಿಸುವಂತೆ ಕಾಣುತ್ತಿತ್ತು. ಈ ರೌರವ ನರಕದ ಕಾರ್ಖಾನೆಯಲ್ಲಿ ತನ್ನ ಹೆಂಡತಿಯನ್ನು ನೆನೆದೂ ಇವರೂ ಜೀವಾತ್ಮರಲ್ಲವೇ ಎಂದು ತಟತಟ ನೀರೂರುವುದು ತಬರನ ನಿಸ್ಸಹಾಯಕ ಸ್ಥಿತಿಯು ಕರುಳು ಹಿಂಡುವಂತಹದ್ದಾಗಿದೆ.

ಸಕಲೇಶಪುರದ ಸರ್ಕಾರಿ ಆಸ್ಪತ್ರೆಗೆ ಹೆಂಡತಿಯನ್ನು ದಾಖಲಿಸೋಣವೆಂದರೆ ಅವರು ಸರ್ಕಾರಿ ಉದ್ಯೋಗಿ ಅಲ್ಲ ಎಂಬುದಕ್ಕೆ ಸರ್ಟಿಫಿಕೇಟ್ ತರಬೇಕೆಂದಾಗ ಜೀವವೇ ಕೈಲಿಹಿಡಿಯುತ್ತಾನೆ. ಈ ಅಮಾನವೀಯತೆಯೇ ಹೊಂದಿರುವ ಚಕ್ರವ್ಯೂಹದಿಂದ ಬಿಡುಗಡೆಯೇ ಇಲ್ಲದ ತಬರನಿಗೆ ಹೆಂಡತಿಯ ನೋವು, ಗೋಳು ನೋಡಲಾಗದೆ

2 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು , ಪುಟ-103

''ಮಾಂಸದಂಗಡಿಯ ಕಟುಕ ಯೂಸುಫ್‌ನಿಗೆ ಚನ್ನಹೆಂಡತಿಯ ಕಾಲನ್ನು ಮಂಡಿಯ ವರೆಗೆ ಕಡಿದುಕೊಡುತ್ತೀಯಾ''[3] ಎಂದು ಕೇಳುವ ಸ್ಥಿತಿಯಂತು ಧಾರುಣವಾದುದಾಗಿದೆ. ಕಾಲು ಕಳೆದಾಗಲಾದರೂ ತನ್ನ ಹೆಂಡತಿಯ ನೋವು ಕಡಿಮೆಯಾಗಿ ಹೆಂಡತಿಯನ್ನು ಉಳಿಸಿಕೊಳ್ಳಬೇಕೆಂಬ ತಬರನ ಹೆಂಡತಿಮೇಲಿನ ಪ್ರೇಮದ ಅಗಾಧತೆಯನ್ನು ತಿಳಿಸುತ್ತದೆ. ಆದರೆ ಅದೂ ಸಾಧ್ಯವಾಗದಾಗಿ ಮಡದಿ ಸಾವನ್ನಪ್ಪಿದಾಗ ತಬರನಿಗೆ ತಾನು ಎಂದೋ ತೀರಿಕೊಂಡಾಗ ಪ್ರೇತ ಪ್ರಪಂಚದಲ್ಲಿ ವ್ಯವಹರಿಸುತ್ತಿದ್ದೇನೆ' ಎಂದು ಹುಚ್ಚು ಹಿಡಿಯುತ್ತದೆ.

ನಂತರ ತಹಶೀಲ್ದಾರ್ ತಬರನ ಪರ ವಹಿಸಿದ್ದುತನಗೆ ಹುಚ್ಚು ಹಿಡಿಯುತ್ತದೆ. ನಂತರ ತಹಶೀಲ್ದಾರ್ ತಬರನ ಪರ ವಹಿಸಿದ್ದು ತನಗೆ ಹುಚ್ಚು ಹಿಡಿಯದಿರಲೆಂಬ ಭೀತಿಯಿಂದ ವ್ಯಕ್ತಿ ಆರೋಗ್ಯದಿಂದ ಇದ್ದಾಗ ಅವನ ವ್ಯಕ್ತಿತ್ವ ಅರ್ಥವಾಗದೆ ಸತ್ತಾಗ ಮಾಡುವ ಗುಣಗಾನ ವ್ಯರ್ಥ, ನಿಷ್ಪ್ರಯೋಜಕ ಎಂಬ ತಿಳುವಳಿಕೆ ಇಲ್ಲಿ ವ್ಯಕ್ತವಾಗುತ್ತದೆ.

ಕೃಷ್ಣೇಗೌಡನ ಆನೆ

ಕೃಷ್ಣೇಗೌಡನ ಆನೆ ಕತೆಯು ಪ್ರಾರಂಭದಲ್ಲಿಯೇ ನಾಗರೀಕತೆಯ ಪ್ರವೇಶವನ್ನು ಕಾಣಬಹುದು. ಅಲ್ಲೊಂದು ಗೌರ್ನಮೆಂಟ್ ಡಿಪಾರ್ಟ್‌ಮೆಂಟ್ ಪ್ರವೇಶದಿಂದ ಕಾರಿನ ಗೇರ್ ಬಾಕ್ಸ್ ರಿಪೇರಿ ಮಾಡುತ್ತಿದ್ದಾಗ ತಲೆಕೆಳಗಾಗಿ ನೋಡಿದ್ದರಿಂದ ಎರಡು ಖಾಕಿ ಪ್ಯಾಂಟ್‌ಧಾರಿಗಳು ಕಂಡಾಗ ತಕ್ಷಣ ಪೋಲೀಸರು ನೆನಪಾದರು ಬೂಡ್ಸ್ ಇಲ್ಲದ್ದರಿಂದ ಬೇರೆ ಡಿಪಾರ್ಟ್‌ಮೆಂಟ್ ಎಂದು ಕೊಳ್ಳುವ ಪ್ರಸಂಗವೂ ಒಂದು ನಿಗೂಢತೆಯನ್ನು ಹೊರಹಾಕುತ್ತದೆ.

ಈ ಕತೆಯು ತಲೆಕೆಳಗಾಗಿ ನೋಡುವ ವೈನೋಧಿಕ ವಾಸ್ತವವಾಗಿ ನೋಡುವ ಕ್ರಮಕ್ಕಿಂತ ಭಿನ್ನವಾಗಿ ನೋಡುವ ಕ್ರಮವಾಗಿದೆ. ಕೃಷ್ಣೇಗೌಡನ ಆನೆಯ ರಾದ್ಧಾಂತಗಳನ್ನು ಈ ನೆಲೆಗಟ್ಟಲ್ಲೇ ನೋಡಬೇಕಾಗುತ್ತದೆ. ಒಂದು ವೇಳೆ ವಾಸ್ತವಮಾರ್ಗದಲ್ಲಿ ನೇರವಾಗಿ ನೋಡಿದರೆ 'ತಾನು ಮಾಡದ ಅಪರಾಧಕ್ಕಾಗಿ ಆನೆ ಶಿಕ್ಷೆ ಅನುಭವಿಸಬೇಕಾದ ಪರಿಸ್ಥಿತಿ ಬಂದು ತಪ್ಪಿತಸ್ಥ ನೆಲೆಯಲ್ಲಿ ನಿಲ್ಲುತ್ತದೆ ಎಂಬ ಸುಳುಹು ಪ್ರಾರಂಭದಲ್ಲೇ ಕಾಣಬೇಕಾಗುತ್ತದೆ.

''ಮೂಡಿಗೆರೆಗೆ ನಾಗರೀಕತೆ ಎಂಟ್ರಿಯಾದದ್ದರ ಸಾಕ್ಷಿಯೆಂಬಂತೆ 'ಎಲ್ಲೆಂದರಲ್ಲಿ ಎಳೆದಿರುವ ತರತರದ ನೂರಾರು ತಂತಿಜಾಲ, ಮಲ್ಯದ ನಾಲ್ಕಂತಸ್ತಿನ ಲಾಜಿಂಗ್ ಹತ್ತಿ

3 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು , ಪುಟ-106

ಕೆಳಗೆ ನೋಡಿದರೆ ಈ ತಂತಿ ಜಾಲದೊಳಗೆ ಮೂಡಿಗೆರೆಯೇ ಬಲೆಯೊಳಗೆ ಬಿದ್ದು ಮಿಸುಕಾಡುವ ಮೃಗದಂತಿದೆ''[4] ಎಂಬ ಲೇಖಕರ ಮಾತು. ಪ್ರಸ್ತುತ ಭಾರತದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಅಧಿಕಾರಶಾಹಿಯ ಕರಾಳ ಸತ್ಯದ ಚಿತ್ರಣವಿದೆ. ಆದ್ದರಿಂದಲೇ ಮೂಡಿಗೇರಿಯ ಈ ತಂತಿ ಆಧುನೀಕತೆಯಲ್ಲಿ ಜರುಗುವ ಎಲ್ಲಾ ಅನಾಹುತಕ್ಕೆ ಸಾಕ್ಷಿಯಾಗುತ್ತದೆ. ಪೆಲಿಫೋನ್ ಲೈನ್‌ಮನ್ ತಿಮ್ಮ ಕಂಬದ ಮೇಲೆ ಮೃತನಾಗುವುದು ಇದಕ್ಕೇ ಕಾರಣ ಜ್ಯೂನಿಯರ್ ಎಂಜಿನಿಯರ್ ರಮೇಶ್‌ಬಾಬು. ಎಲೆಕ್ಟ್ರಾನಿಕ್ ಡಿಪಾರ್ಟ್‌ಮೆಂಟ್‌ನವರು ಎಳೆದ ಹೈವೋಲ್ಟೇಜ್ ಲೈನು ಟೆಲಿಫೋನ್ ತಂತಿಗೆ ತಲುಪಿದ್ದೇ ಕಾರಣ ಎಂಬ ತೀರ್ಮಾನಕ್ಕೆ ಬರುವುದು. ಇಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ದುರ್ಗಪ್ಪ ಮೊದಲಾದವರು ಆನೆ ಮೈತೂರಿಸಲು ಕಂಬಕ್ಕೆ ತಿಕ್ಕಿರುವುದೇ ಕಾರಣ ಎಂಬ ಸಮಜಾಯಿಸಿಕೊಡುತ್ತಾರೆ.

ಊರಿನವರೆಲ್ಲ ಒಂದು ರಾತ್ರಿ ಹಳೆಕೊಪ್ಪದ ಸುಬ್ಬಣ್ಣನ ಕೊಟ್ಟಿಗೆ ಉರುಳಿದ್ದರ ಕಾರಣವು ಮೇವು ಕದಿಯಲು ಬಂದ ಆನೆಯೇ ಉರುಳಿಸಿ ಮೇಕೆಗಳ ಸಾವಿಗೆ ಕಾರಣ ಎನ್ನುತ್ತಾರೆ. ಆದರೆ ಅಂದೇ ಶಿವೇಗೌಡರ ಸಾಮಿಲ್ಲಿಗೆ ಕಳ್ಳನಾಟಾ ಸಾಗಿಸುತ್ತಿದ್ದ ಲಾರಿ ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಆಘಾತಕ್ಕೂ ಆನೆಯೇ ಕಾರಣ ಎನ್ನುತ್ತಾರೆ. ಊರಿಗೆ ಅನೇಕ ಕಾಡಾನೆಗಳು ನುಗ್ಗಿ ಬೆಳೆ ನಾಶವಾಗಲು ಕಾರಣ ಕೃಷ್ಣಗೌಡನ ಆನೆಯೇ ಎಂಬ ಊಹಾಪೋಹವೂ ತಾಂಡವವಾಡುತ್ತದೆ. ಮೇಲಧಿಕಾರಿಯಿಂದ ಆರ್ಡರ್ ಪಡೆದು ಆನೆಯನ್ನು ಶೂಟ್ ಮಾಡಲು ಹೊರಟ ಫಾರೆಸ್ಟರ್ ನಾಗರಾಜ ಮರಳಿ ಬಾರದಿದ್ದಾಗ ಅವನ ಸಾವಿಗೂ ಆನೆಯೇ ಕಾರಣ ಎಂಬ ಊಹಾಪೋಹ ತಾಂಡವವಾಡುತ್ತದೆ. ಕೃಷ್ಣೇಗೌಡನ ಆಳು ಮಾವುತ ವೇಲಾಯುಧನು ತಮ್ಮ ಆನೆಯಿಂದ ತಿಳಿದು ಕಾಡಾನೆ ಶಿಕ್ಷಿಸಹೋಗಿ ಸತ್ತದ್ದು ಈ ಆನೆ ಮೇಲೆ ಬರುತ್ತದೆ.

ಒಟ್ಟಾರೆಯಾಗಿ ಮೂಡಿಗೆರೆಯ ಸಾರ್ವಜನಿಕರಿಗೆ ತಮ್ಮ ತರಲೆ, ತಾಪತ್ರಯ, ರೇಜಿಗೆಗಳಿಗೆ ಕೃಷ್ಣೇಗೌಡನ ಆನೆಯನ್ನು ಗುರಿಪಡಿಸುವ ಪರಿಪಾಠ ಬೆಳೆದು ಕೃಷ್ಣೇಗೌಡನ ಆನೆಯಪರ ವಿರುದ್ಧದ ಬಣಗಳು .ಹುಟ್ಟಿಕೊಳ್ಳುವುದು ಒಂದು ವಿಪರ್ಯಾಸ ಸಂಗತಿಯಾಗಿದೆ.

---

4 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕಿರುಗೂರಿನ ಗಯ್ಯಾಳಿಗಳು, ಪುಟ-58

ಆದರೆ ಕೃಷ್ಣೇಗೌಡನ ಆನೆ ಮೂಲತಃ ಗೂಳೂರು ಮಠದ್ದಾಗಿದ್ದು ಅದಕ್ಕೆ ಆಹಾರ ಪೂರೈಸಲು ಅಸಾಧ್ಯವೆನಿಸಿದಾಗ ಬಡತನದಲ್ಲಿದ್ದ ಕೃಷ್ಣೇಗೌಡನಿಗೆ ಆಶ್ರಮದ ಸ್ವಾಮಿಗಳಿಂದ ಉಡುಗೊರೆಯಾಗಿ ಬಂದದ್ದು ನಂತರ ಕೃಷ್ಣೇಗೌಡನ ಮಿಲ್ಲಿನಲ್ಲಿ ಎಲ್ಲಾ ಕಾರ್ಯಭಾರ ಇದೇ ಸಾಧಿಸಿ ಅವನನ್ನು ಶ್ರೀಮಂತನನ್ನಾಗಿ ಮಾಡಿದ ಭಾಗ್ಯದ ಲಕ್ಷ್ಮಿಯಾಗಿದೆ.

ಜನರ ನಡುವೆಯೂ ಬೆಳೆದ ಅಂಗಡಿ ಮುಂಗಟ್ಟುಗಳಲ್ಲಿ ಬಾಳೆಹಣ್ಣುಗಳನ್ನು ಬೇಡಿತಿನ್ನುತ್ತಿದ್ದ ಸಾತ್ವಿಕವಾದ ಆನೆ ಜನರ ಒಡನಾಡಿಯಾಗಿ ಬೆಳೆದಿರುತ್ತದೆ.

ಕೃಷ್ಣೇಗೌಡನ ಏಳ್ಗೆಯಿಂದ ಕರುಬಿದ ಜನರಿಂದ, ನಿಗೂಢ ಗುಪ್ತ ವ್ಯವಹಾರದಲ್ಲಿ ತೊಡಗಿದ ವ್ಯಕ್ತಿಗಳಿಂದ ಆನೆಯು ತಪ್ಪಿತಸ್ಥ ನೆಲೆಗೆ ನಿಲ್ಲಬೇಕಾಗುತ್ತದೆ. ಆದರೆ ಕೃಷ್ಣೇಗೌಡನೇ ಆ ಆನೆಯನ್ನು ಕೊಲ್ಲಿಬಿಡಬೇಕೆಂಬ ತೀರ್ಮಾನಕ್ಕೆ ಬರುವುದು, ಹಾಗೂ ಕಾಡಿಗೆ ಹೋದ ಆನೆ ಮತ್ತೆ ಹಿಂದಿರುಗಿದರೆ ಏನಪ್ಪಾ ಗತಿ ಎಂದು ಕಳವಳಕ್ಕೀಡಾಗುವುದು ಕೃಷ್ಣೇಗೌಡರ ಕ್ಷುದ್ರ ಸ್ಥಿತಿಯನ್ನೇ ತೋರ್ಪಡಿಸುತ್ತದೆ.

ಮನುಷ್ಯ ತನ್ನ ಬೇಜವಾಬ್ದಾರಿಯನ್ನೋ ಅಸಹಾಯಕತೆಯನ್ನೋ ಮುಚ್ಚಿಕೊಳ್ಳಲು ಬೇರೊಂದರ ಮೇಲೆ ಆರೋಪಿಸಿ ತಾನು ಮತ್ತೆ ಕರ್ತವ್ಯದ ವೃತ್ತದಿಂದ ಹೊರಗುಳಿಯುವುದು. ಮನುಷ್ಯನ ಸಣ್ಣತನ ಹಾಗೂ ಸ್ವಾರ್ಥಗಳಿಗೆ ತಾನೇ ಕಾರಣವಾದರೂ ಎಲ್ಲಾ ವೈರುಧ್ಯ ಹಾಗೂ ದುರಂತಗಳಿಗೆ ಆನೆಯೇ ತಪ್ಪಿತಸ್ಥ ನೆಲೆಗೆ ನಿಂತು ಅಪರಾಧಿಯಾಗುವುದು ದುರಂತದ ವ್ಯಂಗ್ಯವಾಗಿದೆ.

ಇಡೀ ಕತೆಯುದ್ದಕ್ಕೂ ಆನೆ ನಿರಪರಾಧಿಯಾಗಿದೆ. ಕೋತಿ ತಾನು ತಿಂದು ಮೇಕೆ ಮೂತಿಗೆ ಒರೆಸುವಂತೆ ಇಲ್ಲಿ ಆಧುನಿಕ ಮನುಷ್ಯ ಕೋತಿಗೆ ಅರ್ಥಾತ್ ಮೋಸಕ್ಕೆ ಸಂಕೇತಿಕವಾಗಿದ್ದಾನೆ.

'ಆನೆಯ ವಿರುದ್ಧ ಪಿತೂರಿ ಮಾಡುವ ಗುಂಪಿನ ನಡಾವಳಿಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸುವ ತೇಜಸ್ವಿ ಮನುಷ್ಯನ ಅಧಃಪತನವನ್ನು ಚಿತ್ರಿಸಿದ್ದಾರೆ'.

ಅಧ್ಯಾಯ - ೫

ಮನುಷ್ಯನಲ್ಲಿ ಕಾಣುವ ಸ್ವಾಭಾವಿಕ ಮತ್ತು ಪ್ರಜ್ಞಾಪೂರ್ವಕ ಕಲೆ

ಪಿಂಜ್ರೊಳ್ಳಿ ಪಿಶಾಚಿಯ ಸವಾಲು

ತೇಜಸ್ವಿಯವರು ದೇವರುಗಳ ಬೆನ್ನುಹತ್ತದೆ ದೆವ್ವ-ಪಿಶಾಚಿಗಳ ಬೆನ್ನು ಹತ್ತಿರುವುದು ಕುತೂಹಲಕಾರಿಯಾದುದಾಗಿದೆ. ಇದಕ್ಕೆ ಕಾರಣ ಬ್ರಾಹ್ಮಣ ವರ್ಗ ದೇವರ ಆರಾಧಕರು, ಬ್ರಾಹ್ಮಣೇತರರು ಪಿಶಾಚಿಗಳ ಆರಾಧಕರೂ ಆಗಿದ್ದು ಇಲ್ಲಿ ದಯವೇ ಧರ್ಮದ ಮೂಲವಾಗದೆ ಭಯವೇ ಧರ್ಮದ ಮೂಲ'ವಾಗಿರುವುದನ್ನು ಗಮನಿಸಿದ ತೇಜಸ್ವಿ ಪುರೋಹಿತರು ದೇವರನ್ನು ನಿಮಿತ್ತವಮಾಡಿ ಉಳಿದವರನ್ನು ತಮ್ಮ ಅಡಿಯಾಳಾಗುವಂತೆಯೂ ಇತರ ವರ್ಗದವರು ದೆವ್ವವನ್ನು ನಿಮಿತ್ತ ಮಾಡಿ ತಮ್ಮ ಅಡಿಯಾಳಾಗುವಂತೆಯೂ ಮಾಡಿರುವ ಒಂದು ಪ್ರಜ್ಞಾಪೂರ್ವಕವಾದಂತಹ ಕಲೆಯನ್ನು ಅನಾವರಣಗೊಳಿಸುತ್ತಾರೆ. ಬಹುಶಃ ಕಳ್ಳತನ, ಸುಳ್ಳುತನಗಳಂತಹ ಹಾಗೂ ಅಮಾನವೀಯತೆಗಳಂತಹ ಕ್ಷುಲ್ಲಕತನಗಳು ಮಕ್ಕಳಿಂದಾಗದಲೀ, ಆಳುಗಳಿಂದಾಗಲೀ, ನಡೆಯಕೂಡದು ಎಂದೇ 'ವಿಶಾಲಮತಿ'ಗಳು ಪಿಶಾಚಿಯ ಕಲ್ಪನೆ ಹುಟ್ಟಿಹಾಕಿರಬಹುದು. ಆದರೆ ಇದೇ ಒಂದು ಆರಾಧನೆಯಾಗಿ ಅದು ಡೆತ್‌ನ ವರೆಗೂ ಮುಂದುವರೆಯುವಷ್ಟು ವ್ಯಕ್ತಿಯಲ್ಲಿ ಮಡುಗಟ್ಟು ಹೋಗಿರುವುದು ಒಂದು ವಿಪರ್ಯಾಸವಾಗಿ ಲಿಂಗಬಂಧ, ಪಂಜ್ರೊಳ್ಳಿ ಪಿಶಾಚಿಸವಾಲು, ಮಾಯಾಮೃಗ, ತ್ಯಕ್ತ ಇತ್ಯಾದಿ ಕತೆಗಳಲ್ಲಿ ಕಾಣಬಹುದಾಗಿದೆ.

ತೇಜಸ್ವಿಯವರ ಬಹುತೇಕ ಕಥೆಗಳಲ್ಲಿ ಅಜ್ಜಿಮೊಮ್ಮಕ್ಕಳ ಬಾಂಧವ್ಯವೇ ಹೇರಳವಾಗಿ ಬರುವುದು ಗಮನಾರ್ಹವಾಗಿದೆ.

ಸಂಪ್ರದಾಯವೇ ಮೈವೆತ್ತಂತಿದ್ದ ಅಜ್ಜಿಹೇಳುವ 'ಪಂಜ್ರೊಳ್ಳಿಯ ಕಥೆ' ಯು ನಷ್ಟಕ್ಕೂ ಎಡೆಮಾಡಿಕೊಟ್ಟಿರುವುದು ಕತೆಯಿಂದ ತಿಳಿಯಲ್ಪಡುತ್ತದೆ.

ನಿರೂಪಕನಾದ ಅಜ್ಜಿಯ ಮೊಮ್ಮಗ, ಎಡ್ವರ್ಡ್, ಕಾಮಣ್ಣ, ರಂಗಣ್ಣ ಸಹಪಾಠಿಗಳ ಕಾಫಿಕಳ್ಳತನವು ಭಯವನ್ನೇ ಸ್ಥಾಯಿಯಾಗಿಸಿ ನಡೆಯುವಂತದ್ದಾಗಿದೆ.

'ಹುಷಾರಾಗಿ ಕದಿಯಬೇಕು..ಮಹಾರಾಯರೇ' ಎಂಬ ಎಚ್ಚರಿಕೆ ಶಾಮಣ್ಣನಾದರೆ 'ಅಜ್ಜಿಯದು ಕೋಳಿ ನಿದ್ರೆ' ಎಂಬ ಭಯ ನಿರೂಪಕನಿಗೆ. ಓದುವುದು ಕಾಲೇಜಿನಲ್ಲಿ

ಮಾಡೋದು ಕಳ್ಳತನ' ಎಂಬ ಮಂಗಳಾರತಿ ಎತ್ತುತ್ತಾನೆ. ಸಿಕ್ಕಿಬಿದ್ದರೆ ಏನು ಗತಿ? ಎಂಬ ಭಯ ಎಡ್ವರ್ಡನಿಗೆ. ಚಿಕ್ಕಮಾವ ಕಳ್ಳರೆಂದು ತೋಟಕೋವಿಯಲ್ಲಿ ಲಗಾಯಿಸಿದರೆ ಎಂಬ ಭಯ ನಿರೂಪಕನಿಗೆ. ಈ ಎಲ್ಲಾ ಭಯಕ್ಕಿಂತ ಮುಖ್ಯವಾದದ್ದು 'ಪಿಂಜ್ರೊಳ್ಳಿ ಪಿಶಾಚಿಯ' ಭಯ ನಿರೂಪಕನಿಗೆ. ಈ ಎಲ್ಲಾ ಭಯಕ್ಕಿಂತ ಮುಖ್ಯವಾದದ್ದು ಪಿಂಜ್ರೊಳ್ಳಿ ಪಿಶಾಚಿಯ ಭಯ ನಡುಕದಂತೆ ದೇಶಾದ್ಯಂತ ವ್ಯಾಪಿಸ್ತುದೆ. ಕದಿಯುವಾಗ ಏನೋ ಒಂದು ಕಾಲಿಗೆ ತಾಕಿದಾಗ ಅದು ಸಾಕುನಾಯಿ 'ಮಾಂಟಿ'ಯಾಗಿದ್ದು ಹಲವು ದಿನಗಳ ಹಿಂದೆ ಅಜ್ಜಿಯ ಮೆಚ್ಚಿನ ಕೋಳಿ 'ಪ್ಲೈಮತ್‌ರಾಕ್' ಮಾಯವಾಗಲು ಪಿಶಾಚಿಯಲ್ಲ ಈ ನಾಯಿಯೇ ಕಾರಣವೆಂದು ತಿಳಿಯಿತು. ಆದರೆ ಒಂದು ಕ್ಷಣದಲ್ಲೇ ನಮ್ಮಜ್ಜಿ ಕೈಲಿ ಹರಕೆ ಪಡೆಯುತ್ತಿದ್ದ ಪಿಂಜ್ರೊಳ್ಳಿ ಪಿಶಾಚಿಯೇ ಎಂದು ಭಾವಿಸಿದ್ದು ಹುಸಿಯಾಯಿತು. ಆ ನಂತರ ಮಾಂಟಿ ಬೀಳಿಸಿದ ಡಬ್ಬದಲ್ಲಿಯೇ ಕಾಫಿ ಹೊತ್ತೊಯ್ದು ಸಹಪಾಠಿಗಳೆಲ್ಲ ಹೀರಿದರು.

ಮರುದಿನ ಅಜ್ಜಿಯ ಮನೆಗೆ ಹೋದಾಗ ಚೆಂಬು ಕಳೆದುದಕ್ಕಾಗದಿ ಅಜ್ಜಿ ಅಳುವ ದಿನವನ್ನು ಬಯ್ಯುವ ಗದ್ದಲ ಕೇಳಿದ ನಿರೂಪಕನ ಮಾವನು ಅಟ್ಟದಿಂದ ಇಳಿದು 'ಒಂದು ಡಬ್ಬಿ ತಾನೆ, ಎಲ್ಲೋ ಬಾವಿಯಲ್ಲಿ ಬಿದ್ದಿರಬೇಕು' ಎನ್ನುತ್ತಾನೆ. 'ಆಂ ಏನೆಂದೆ ? ಎಂದು ಅಜ್ಜಿ ಹೌಹಾರಿ 'ಹಾಗಾದರೆ ಬಾವಿಯ ನೀರನ್ನೆಲ್ಲಾ ಎತ್ತಿಸಿ ಶುದ್ಧಿ ಮಾಡಿಸು' ಎನ್ನುತ್ತಾಳೆ. ಯಾಕೆಂದರೆ ಆಳುಗಳು ಕಕ್ಕಸಕ್ಕೆ ನೀರು ಒಯ್ಯಲು ಇಟ್ಟುಕೊಂಡ ಚೆಂಬು ಅದಾಗಿರುತ್ತದೆ. ಅಜ್ಜಿ ಹೇಳಿದ ಕತೆ ಅಜ್ಜಿಗೆ ತಿರುಮಂತ್ರವಾಗುತ್ತದೆ. ಆಗ ತಾನೆ ಬಾವಿಯ ನೀರಿನ ಮುಖ ತೊಳೆದುಕೊಂಡು ಬಂದ ಮಾವನಿಗೆ ವಾಕರಿಕೆಯಾಗುತ್ತದೆ. ಇನ್ನು ಕಕ್ಕಸ್ಸಿನ ಚೆಂಬಿನಲ್ಲಿಯೇ ಕಾಫಿಯನ್ನು ಕದ್ದೊಯ್ದು ಕುಡಿದವರ ಗತಿಯಂತು ಹೇಸಿಗೆಗೆ ಕಿರೀಟವಿಟ್ಟಂತೆ. ಕಾಫಿ ಗ್ರ್ಯಾಂಡಾಗಿದೆ ಕಣ್ರೋ' ಎಂಬ ರಂಗಪ್ಪನ ಮಾತು ಅದರ ನೆನಪು ಬರುತ್ತಲೇ ಕಾಫಿ ಕುಡಿದವರಿಗೆ ವಾಕರಿಕೆಯಾಗುತ್ತದೆ. ಇಲ್ಲಿ ಅಜ್ಜಿ ಹಾಕಿದ ಬಂಧನದಿಂದ ಎಲ್ಲರೂ ಇರುಸು ಮುರುಸಾಗುವಂತಾಯ್ತು.

ಲಿಂಗಬಂಧ

'ಪಿಶಾಚಿ'ಗೆ ಬಂಧನವೇ ಲಿಂಗನ 'ವಿಶಾಲಮತಿ'ಯಾಗಿದೆ. ಪಿಂಜ್ರೊಳ್ಳಿ ಪಿಶಾಚಿಯ ಅಜ್ಜಿಯ ರೀತಿಯೇ ಲಿಂಗನೂ ಸಹ ತನ್ನ ಧನಿಕನ ಮಗನ ಬೇಡಿಕೆಯನ್ನು ಸಹಿಸಲಾಗದೆ ಆ ಬೇಡಿಕೆಗೆ ಒಂದು ದಿಗ್ಬಂದನ ಹಾಕುತ್ತಾನೆ. ಅದೇ ಇಡೀ ಕತೆಯುದ್ದಕ್ಕೂ ಸ್ಥಾಯಿಯಾಗಿ ಮುಂದುವರೆಯುತ್ತದೆ.

ಗುಡುಗು ಮಿಂಚು ಮಿಶ್ರಿತ ಮಳೆಯ ಆರ್ಭಟ, ತಂದೆ ಹಾಗೂ ಆಳು ಲಿಂಗನ ಗೈರು ಹಾಜರಿಯ ರಾತ್ರಿ ಚಿನ್ನಮ್ಮನ ಮಗ ಕಿಟ್ಟಿಗೆ ಭಯವಾಗಿ ಪರಿಣಮಿಸಿತ್ತು. ತಂಗಿ ಸುಭದ್ರೆಯು ತಮ್ಮ ಸದಾನಂದ ಹ್ಯಾಂಗ್ ಹುಟ್ದ ?'' ಎಂಬ ಪ್ರಶ್ನೆಗೆ ಉತ್ತರ ಗೊತ್ತಿರದೆ ಅವನಿಗೆ ತನಗೆ ಅನೇಕ ವಿಚಾರಗಳು ಗೊತ್ತಿಲ್ಲ ಎಂಬುದು ಮಾತ್ರ ಗೊತ್ತಿತ್ತು. ಷೇಕ್ಸ್‌ಪಿಯರ್‌ನ 'ಐಡ್ಲ್ ಮೈಂಡ್ ಈಸ್ ಡೆವಿಲ್ಸ್ ವರ್ಕ್ ಶಾಪ್' ಎಂಬ ಮಾತಂತೆ ಆಲೋಚನೆಗಳಿಲ್ಲದೆ ಕಿಟ್ಟಿಯ ಮನಸ್ಸಿನ ಮೇಲೆ ಪ್ರಭಾವ ಬೀರಿತು.

ಕಿಟ್ಟಿ ಲಿಂಗನಿಗೆ 'ಏ ಒತ್ರೊ. ಇನ್ನೂ ಜಾಗ ಹೆಚ್ಚಿಗೆ ಬೇಕು'ಎಂದು ಕಿರಿಕಿರಿ ಮಾಡಿದಾಗ ಕಿರಿಕಿರಿ ತಡೆಯದ ಲಿಂಗ ಒಂದು ಕತೆ ಹೇಳಿದ. ಅದೇ ಕತೆಯನ್ನು ಈಗ ಸುಭದ್ರೆ ಕಿಟ್ಟಿಗೆ 'ಸ್ವಲ್ಪ ಒತ್ತಣ್ಣ' ಎಂದಾಕ್ಷಣ ಲಿಂಗ ಸುಭದ್ರೆಗೆ ಕತೆ ಹೇಳಿ ಹೆದರಿಸ ಬೇಕೆಂದುಕೊಂಡರೂ ಅದರಿಂದ ಕಿಟ್ಟಿಯು ಹೆದರಿ ಇಬ್ಬರೂ ಭಯದ ತೆಕ್ಕೆಗೆ ಶರಣಾಗುತ್ತಾರೆ.

''ನನಗೆ ಅದು ಹೆಚ್ಚಿಗೆ ಬೇಕು. ಇದು ಹೆಚ್ಚಿಗೆ ಬೇಕು'' ಎನ್ನುತ್ತಿದ್ದ ಇಂಗ್ಲೇಂಡಿನಲ್ಲಿ ಹಳೇ ಪೈಕಿದವನ ಹೆಂಡತಿಗೆ ಒಂದು ಮಗುವಾಗುತ್ತೆ ಅದು ಘಳಿಗೆ ಘಳಿಗೆಗೆ ಬೆಳೆದು ತೊಟ್ಟಿಲು ಭಾರವಾಗಿ ಮುರಿದು ಮಂಚವೂ ಮುರಿಯುತ್ತದೆ. ಅದಕ್ಕೆ ಕೋರೆಹಲ್ಲು ಬೆಳೆದು ಅದರ ಆಳು ಹುಲಿಯ ಗರ್ಜನೆಯಂತೆ ಕೇಳುತ್ತದೆ. ಅವನತಾಯಿ ಹೆದರಿ ಚೀರಿದಾಗ ಲಿಂಗನ ಅಜ್ಜ ಅದು ರಾಕ್ಷಸಮಗು ಕೊಲ್ಲಿ ಎಂದಾಗ ಊರಿನ ಜನರೆಲ್ಲ ಜಪ್ಪಿಕೊಲ್ಲುತ್ತಾರೆ.''

ಎಂಬ ಅವೈಜ್ಞಾನಿಕ ಕತೆಯೊಂದನ್ನು ಹೇಳುವಲ್ಲಿಯೂ ಅದರ ನಿವಾರಕ ಹೇಳಿದಾತ ಲಿಂಗನೇ ಎಂಬ ಸೂಚನೆಯನ್ನು ಕಿಟ್ಟಿ ಗಮನಿಸಿದ್ದರಿಂದಲೇ ಪ್ರಕೃತಿಯ ಗುಡುಗು, ಮಿಂಚು, ಕತ್ತಲೆ, ಮಳೆ, ಸಿಳ್ಳು ಹಾಕುವಗಾಳಿ - ಇವೆಲ್ಲ ಭಯವನ್ನು ಹೆಚ್ಚಿಸಿ ಆ ಪುಟ್ಟ ಮುಗ್ಧ ಹೃದಯಗಳಲ್ಲಿ ಭಯ ಹೆಚ್ಚಿ ಸದಾನಂದನ ಬಾಯಿಯ ಇಕ್ಕೆಡೆಯಲ್ಲಿ ಸೋರುವ ಜೊಲ್ಲು, ಅಲುಗಾಡುವ ದೀಪಕ್ಕೆ ಪಳಪಳ ಹೊಳೆದು ಕೋರೆಹಲ್ಲಿನಂತೆ ಭಾಸವಾಗುತ್ತದೆ. ದೀಪ ಅಲುಗಾಡಿದಂತೆಲ್ಲ ಸದಾನಂದನ ನೆರಳು ಬೆಳೆಯುವಂತೆ ಮೂಡುತ್ತದೆ. ತಂದೆಯ ಆಗಮನ ತಕ್ಷಣ ಅವರ ಭಯ ದೂರ ಮಾಡಿದರೂ ಸಹ ತನ್ನ ಸುಭದ್ರೆ ತನ್ನ ತಂದೆಯನ್ನು ''ಅಲ್ಲಾ, ಸದಾನಂದ ಬೆಳೆಯುತ್ತಾನೇನಣ್ಣ' ಎಂದಾಗ ಪೂರ್ವಾಪರ ಅರಿಯದೆ ಹೌದು ಎಂಬ ಉತ್ತರ ಎಳೆಯ ಹೃದಯದ ಮೇಲೆ ಗಾಢ ಪರಿಣಾಮ ಬೀರುತ್ತದೆ.

ತೇಜಸ್ವಿಯು ಪ್ರಕೃತಿಯ ಬಗ್ಗೆ ಮನುಷ್ಯರಲ್ಲಿ ಆವರಿಸಿರುವ ನಿಗೂಢತೆಯ ಭಯದ ಭಾವನೆಗಳನ್ನು ಇಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ತ್ಯಕ್ತ

ತ್ಯಕ್ತ ಕಥೆಯು ಭಾಷಾತೀತ ನೆಲೆಯಲ್ಲಿ ಮುಂದುವರೆಯುತ್ತದೆ. ಭಾಷೆ ಮನುಷ್ಯರ ನಡುವೆ ಸಂಬಂಧ ಕಲ್ಪಿಸುವ ಬದಲು ಹೇಗೆ ಗೋಡೆಯಾಗುತ್ತದೆ ಎಂಬುದನ್ನು ಹೊರಹಾಕುತ್ತದೆ.

'ಲಿಂಗಬಂಧ' ಮತ್ತು 'ಪಿಂಜ್ರೊಳ್ಳಿ ಪಿಶಾಚಿ ಸವಾಲು' ಕಥೆಯಲ್ಲಿ ಬರುವ ಪರಿಸರ, ವ್ಯಕ್ತಿಗಳೇ ಇಲ್ಲಿಯೂ ಬರುತ್ತಾರೆ. ಸೋಮು, ಬ್ರಾಹ್ಮಣ ಮಿತ್ರಹೇಮಂತ, ಆಳು ಲಿಂಗ, ಚಿಕ್ಕಪ್ಪ, ಅಜ್ಜ ಇಲ್ಲಿಯೂ ಇದ್ದಾರೆ. 'ಕಿಟ್ಟಿ' ಮಾತ್ರ ಲಿಂಗ ಬಂಧದಲ್ಲಿ ೧೦ ವರ್ಷದವನಾದರೆ ತ್ಯಕ್ತ ಕತೆಯಲ್ಲಿ ೬ ವರ್ಷದವನಾಗುತ್ತಾನೆ. ಇಬ್ಬರಲ್ಲೂ ಭಯಾ ಆವರಿಸಿದೆ ಮತ್ತು ಕತೆ ಕೇಳುವ ಕುತೂಹಲವಿದೆ. 'ಲಿಂಗಬಂಧ'ದಲ್ಲಿ 'ರಾಕ್ಷಸನ' ಪ್ರತಿಮೆಯಿದ್ದರೆ 'ತ್ಯಕ್ತ' ದಲ್ಲಿ ಗುಮ್ಮನ'ಪ್ರತಿಮೆಯಿದೆ.

ಕತೆಯ ಪೂರ್ವಾರ್ಧವು ಸ್ವರೂಪದಲ್ಲಿನ ಸೋಮು-ಹೇಮಂತ ಜೀವನಾನ್ವೇಷಣೆಯನ್ನೇ ಹೋಲುತ್ತದೆ. ಸ್ವಗತದ ಧಾಟಿ ಅಲ್ಲಿದ್ದರೆ ತ್ಯಕ್ತದಲ್ಲಿ ಪರಸ್ಪರ ಸಂಭಾಷಣೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಸ್ವರೂಪದಲ್ಲಿ ಸೋಮು, ಹೇಮಂತನ ಕೆಲಗುಣಗಳನ್ನು ಅನುಮಾನಿಸಿದರೆ ತ್ಯಕ್ತದಲ್ಲಿ ಹೇಮಂತನು, ಸೋಮುವಿನ ನಡಾವಳಿಯಿಂದ ಬೇಸರ ಪಡುತ್ತಾನೆ. ಜೊತೆಗೆ ಚಿಕ್ಕಪ್ಪ, ಚಿಕ್ಕಮ್ಮ, ಮಾವ ಎಲ್ಲರೂ ಸೋಮುವಿನ ನಡತೆ ಸರಿಯಲ್ಲ ಎಂಬ ತೀರ್ಮಾನಕ್ಕೆಬರುತ್ತಾರೆ. ಆದರೆ ಸೋಮುವಿನ ವಾಸ್ತವತೆಯ ಸತ್ಯಾನ್ವೇಷಣೆ, ಪ್ರವಾದಿತನದ ಮಾತುಗಳೇ ಈ ಅನುಮಾನಕ್ಕೆ ಕಾರಣ ಎಂಬುದು ಗಮನಾರ್ಹ.

ಮೈಸೂರಿನಿಂದ ಶಿವಮೊಗ್ಗಕ್ಕೆಬಂದ ಸೋಮುವನ್ನು ಮಾವ ಅನುಮಾನದ ಮಾತುಗಳಿಂದ ಸಂಭಾಷಣೆಗೆಳೆಯುತ್ತಾನೆ. ''ಅಲ್ಲಯ್ಯ, ನಿನಗೇನು ನಿನ್ನ ಸಂಬಂಧದೋರೆಲ್ಲಾ ಬೇಡವಾದರೇನಯ್ಯ?''[1] ಎಂಬ ಮಾವನ ಪ್ರಶ್ನೆಯಲ್ಲಿ ಸೋಮು ಬೇರೆ ಸಂಬಂಧಗಳನ್ನು ಅರಸುತ್ತಾ ಹೋಗಿರುವ ಸುಳುಹು ಕಾಣುತ್ತದೆ. ಅಂದರೆ

---

1 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು , ಪುಟ-116

''ಸೋಮು ಬೇರೆ ಜಾತಿಯ ಹುಡುಗಿಯ ಸಂಬಂಧ ಬೆಳೆಸಿರುವಂತೆಯೂ ಅದು ವಯೋಸಹಜಗುಣವಾಗಿದ್ದು ಪ್ರತಿಯೊಬ್ಬರು ಹರಯದಲ್ಲಿ ಮಾಡುವ ತಪ್ಪೇ ಆಗಿದ್ದು ತೊಂದರೆಗೆ ಸಿಕ್ಕಿಹಾಕಿಕೊಳ್ಳದಂತೆ ಹುಶಾರಾಗಿರಬೇಕು ಎಂಬೆಲ್ಲಾ ಮಾಸ್ಟರ್ ಪ್ಲಾನ್‌ಗಳ ಮಾತು ಕೇಳಿದಾಗ ಆ ಮಾತಿನ ಮೇಲೆ ಅವನಿಗೆ ಅಸಹ್ಯವಾಯ್ತು. ಕಾರಣ ಪ್ರಸ್ತುತ ಸಮಾಜದಲ್ಲಿ ವಿವಾಹ ಪೂರ್ವದಲ್ಲಿ ಯಾವುದೇ ಜಾತಿ -ಧರ್ಮದವರೊಂದಿಗಾದರೂ ದೇಹದ ಸಂಬಂಧಗಳನ್ನಿರಿಸಿಕೊಳ್ಳಬಹುದು. ಆದರೆ ತಾವು ಮದುವೆಯಾಗುವ ಸಂದರ್ಭವೊದಗಿದಾಗ ಮಾತ್ರ ಹಿಂದಿನ ಸಂಬಂಧಗಳನ್ನೆಲ್ಲಾ ಕಳೆದುಕೊಂಡು ತಮ್ಮದೇ ಆದ ಜಾತಿ, ಧರ್ಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕೆಂಬುದು ಪರಂಪರೆ ಮತ್ತು ಪ್ರಸ್ತುತ ಸಮಾಜದಲ್ಲಿರುವಂತಹ ಧರ್ಮವಾಗಿದೆ. ಇಲ್ಲಿ ಧರ್ಮದ ರುವಾರಿಗಳು ಎರಡು ದೇಹಗಳನ್ನು ಬೆಸೆಯಲು 'ಮದುವೆ' ಎಂಬ ಬಂಧನವನ್ನು ನಿರ್ಮಿಸಿರುವುದು ಅಮಾನವೀಯತೆಯನ್ನು ತೋರುತ್ತದೆ. ಆದರೆ ವಾಸ್ತವದಲ್ಲಿ ಮದುವೆ ಎಂಬುದು ದೇಹ ಮತ್ತು ಮನಸ್ಸುಗಳನ್ನು ಬೆಸೆಯುವ ಕೊಂಡಿಯಾಗಬೇಕೆ ವಿನಹ ಏಕಮುಖವಾಗಬಾರದು. ಈ ರೀತಿಯ ವಿಫಲತೆಯಿಂದಾಗಿಯೇ ಮದುವೆಯಾದವರೆಲ್ಲ ಪ್ರೀತಿಸುತ್ತಿರುವುದಿಲ್ಲ. ಪ್ರೀತಿಸಿದವರೆಲ್ಲರೂ ಮದುವೆ ಆಗುವುದಿಲ್ಲ.' ಈ ರೀತಿಯ ಸಂಬಂಧಕ್ಕೆ ಅರ್ಥವೇ ಇಲ್ಲ.

ಜಾತಿನಿಂದನೆ ಸಹಿಸದ ಸೋಮು ಹೇಮಂತನನ್ನು ಕಂಡು ''ಎಲೋ ಹಾರುವಾ ಶೂದ್ರರ ಊಟದ ಮನೆಯೊಳಗೆ ಬರೋದಿಕ್ಕೆ ಅಧಿಕಾರ ಕೊಟ್ಟವರು ಯಾರಯ್ಯ'' ಎಂದು ಕಿಚಾರಿಯಿಸಿದಾಗ 'ಹೇಮಂತನು ಹಾಗಂತ ಹೇಳೋದಕ್ಕೆ ಶೂದ್ರನಿಗೆ ಅಧಿಕಾರವಿಲ್ಲ ಗೊತ್ತಾಯ್ತೋ. ಈ ಶಾಸನ ಮಾಡೋಹಕ್ಕು ಪಾಲಿಸೋ ಹಕ್ಕು ನಮಗೆ ಮಾತ್ರ ಇರೋದು.' ಎಂಬ ಮಾತುಗಳು ಪರಂಪರೆಯಿಂದ ಬಂದ ವರ್ಣಾಶ್ರಮದ ಗುತ್ತಿಗೆದಾರರು ಮೇಲ್ವರ್ಗದವರೇ ಆಗಿದ್ದು ಅದು ತಮ್ಮ ಅನುಕೂಲ ಸ್ವಾರ್ಥಕ್ಕಾಗಿ ಹುಟ್ಟುಹಾಕಿಕೊಂಡದ್ದು ಎಂಬ ತೀರ್ಮಾನ ಸೋಮುವಿನದಾಗಿದೆ. ಜೊತೆಗೆ ಮೇಲ್ವರ್ಗದವರು ಕೆಳವರ್ಗವನ್ನು ಯಾವ ರೀತಿಯಾದರೂ ಒಳಗೆ ಬಿಡಬಹುದು. ಆದರೆ ವಿವಾಹ ಮಾತ್ರ ಜರುಗುವಂತಿಲ್ಲ. ಆ ರೀತಿಯ ಸಂಬಂಧಗಳೇನಾದರೂ ಇದ್ದರೆ ಅದು ಗುಪ್ತವಾಗಿ ನಡೆಯಬೇಕೆಂಬ ಧರ್ಮದಲ್ಲಿನ ಅಧರ್ಮದ 'ಮುಖವಾಡ'ವನ್ನು ಅನಾವರಣಗೊಳಿಸುತ್ತಾರೆ.

ಅಪರಾಧಿಯ ಹೆಂಡತಿಯ ಮೇಲೆ ಪೋಲೀಸರು ಅತ್ಯಾಚಾರ ಎಸಗಿ, ಅಪರಾಧಿ ನಿರಪರಾಧಿ ಎಂದು ರುಜುವಾತಾದ ಮೇಲೆ ತನ್ನ ಗೈರುಹಾಜರಿಯಲ್ಲಿ ಗರ್ಭಿಣಿಯಾದ

ಹೆಂಡತಿಯ ಕೊಲೆಗೆ ಯತ್ನಿಸಿದಾಗ ಅವಳು ಅವಮಾನ ತಾಳದೆ ಬಾವಿಗೆ ಹಾರಿದಾಗ ಆ ಕೊಲೆಯ ಆರೋಪ ಪುನಃ ಗಂಡನ ಮೇಲೆಯೇ ಬಂದ ಪ್ರಸಂಗವನ್ನು ಪೇಪರಿನವರು ಬರೆದ ಸಂಗತಿಯೂ ಸಹ. ಕೆಳವರ್ಗದವರ ಮೇಲೆ ಮೇಲ್ವರ್ಗ ನೆಡುಸುವ ದಬ್ಬಾಳಿಕೆಯ ಮುಖವಾಡವೇ ಆಗಿದೆ.

ಈ ಘಟನೆಗಳಿಂದ ಬೇಸತ್ತ ಸೋಮುವಿಗೆ ' ಈ ಹೆಣ್ಣು ಹೊನ್ನು ಮಣ್ಣಿನ ಪ್ರಪಂಚ'ದಲ್ಲಿ ನಿನಗೆ ಮಾತಾಡೋದಕ್ಕೆ ಒಂದು ವಿಷಯಾನೂ ಇಲ್ಲೇನೋ ಎಂದು ಹೇಮಂತ ಕೇಳುವ ಪ್ರಶ್ನೆಯು ಸೋಮು ಈಗಾಗಲೇ ಹೆಣ್ಣು, ಹೊನ್ನು, ಮಣ್ಣಿನ ಪ್ರಪಂಚದ ಆಚೆಗೆ ಏನೋ ಇದೆ ಅದೇ 'ದುರಾಸೆ' ಎಂಬ ತೀರ್ಮಾನಕ್ಕೆ ಬಂದಂತಿದೆ. ಇದು ಅಲ್ಲಮನ ಪ್ರಭಾವ ಸೋಮುವಿನ ಮೇಲೆ ಗಾಢ ಪ್ರಭಾವ ಬೀರಿದಂತೆ ಪ್ರತಿಯೊಬ್ಬನು ತನ್ನ ಆಸೆಗಾಗಿಯೇ ಬದುಕುವಂತಾಗಿದ್ದು ಆಸೆಯೇ ಮಾಯೆ ಎಂಬ ತೀರ್ಮಾನಕ್ಕೆ ಬರುತ್ತಾನೆ.

ಒಂದು ಉದಾಹರಣೆಯನ್ನು ನೀಡುತ್ತಾನೆ. "ಬೆಳೆದು ದೊಡ್ಡವರಾಗಿ ತಮ್ಮನ್ನು ಸಾಕಲಿ ಅಂತ ಇರೋ ತಂದೆ ತಾಯಿಗಳಿಗೆ ಮಗಳನ್ನು ಕಟ್ಟಿಕೊಂಡು ಹೆಗಲ ಮೇಲಿನ ಭಾರ ಕಡಿಮೆ ಮಾಡಲಿ ಅನ್ನೋ ಮಾವಂದಿರಿಗೆ, ಪ್ರೇಮಿಸಿ ಮದುವೆಯಾಗಿ ಸಲಹಲಿ ಅಂತ ಅನ್ನೋ ಹುಡುಗಿಯರಿಗೆ ಗೊತ್ತೇ ಆಗದ ನನಗೆ ಈ ರೀತಿ ಅನ್ನಿಸಿರೋದು ನಿನಗೆ ಗೊತ್ತಾಗಬಹುದು.

ಹೀಗೆ ಇವರಿಗೆ ಮುಂದೇನಾಗಬಹುದೋ ಅನ್ನೋದು ಗೊತ್ತಾಗೋಲ್ಲ. ಅದು ನನಗೆ ಗೊತ್ತಿದೇ ಅನ್ನೋದು ಗೊತ್ತಾಗೋಲ್ಲ. ಕ್ಯಾಸಾಂಡ್ರಾಗೆ ಗ್ರೀಕ್‌ಪುರಾಣದಲ್ಲಿ ಇತರರಿಗೆ ಮುಂದೇನಾಗುತ್ತದೆ ಅನ್ನೋದು ಗೊತ್ತಾಗುತ್ತಿತ್ತು. ಆದರೆ ಅದು ಇತರರಿಗೆ ಗೊತ್ತಾಗೋಲ್ಲ ಅನ್ನೋದು ಗೊತ್ತಿರೋದು."[2] ಎಂಬಿತ್ಯಾದಿ ಮಾತುಗಳನ್ನು ಆಡುವ ಸೋಮು ಭವಿಷ್ಯ ನುಡಿಯುವವನಂತೆ ಸಮಾಜದ ಬದಲಾವಣೆಗೆ ಹಾತೊರೆಯುವ ಅಲ್ಲಮಪ್ರಭುವಿನಂತೆ ಕಾಣುತ್ತಾನೆ.

ಇವನ ಈ ವರ್ತನೆ ದುರಂತದ ಪ್ರವಾದಿಯಂತಾಗಿದ್ದು ಅದನ್ನು ಬಿಟ್ಟು ತಾನು ಪ್ರೀತಿಸಿದ ಹುಡುಗಿಯ ಜೊತೆ ಖುಷಿಯಾಗಿ ನಾಲ್ಕು ದಿನ ಕಳೆಯುವ ಸುಯೋಗ ಕಳೆದು ಕೊಳ್ಳಬೇಡ ಎಂಬ ಹೇಮಂತನ ಹಿತನುಡಿ ಅವನಿಗೆ ರುಚಿಸದಂತಾಗುತ್ತದೆ. ಕಾರಣ

---

2 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು , ಪುಟ-119

ಪ್ರೇಮಿಗಳಿಗೆ ತಾತ್ಕಾಲಿಕ ರೋಮ್ಯಾನ್ಸ್‌ಗಿಂತ ಜೀವನವಿಡೀ ತಾವು ದಾಂಪತ್ಯ ಜೀವಿಗಳಾಗಬೇಕೆಂಬ ಹೆಬ್ಬಯಕೆಯಿರುತ್ತದೆ. ಕೇವಲ ದೇಹದ ಆಕರ್ಷಣೆಯಿದ್ದವರು ಮಾತ್ರ ಆ ಕ್ಷಣದಲ್ಲಿ ಪ್ರೀತಿ ಕಳೆದುಕೊಳ್ಳುತ್ತಾರೆ.

ಏಕೆಂದರೆ ಜನ ಹೇಳುವುದೇ ಒಂದಾದರೆ ಮಾಡುವುದೇ ಇನ್ನೊಂದೆಂಬುದಕ್ಕೆ ಚಿಕ್ಕಪ್ಪನನ್ನೇ ಉದಾಹರಿಸುತ್ತಾರೆ. 'ಜೀವನವೇ ನಶ್ವರ ಭಗವಂತನೆ ಶಾಶ್ವತ' ಎಂಬೆಲ್ಲಾ ಬೋಧಿಸತ್ವನ ಕತೆಯನ್ನು ಕಟ್ಟಿ ಹೇಳಿದವರು ಹರೆಯದ ಚಿಕ್ಕಮ್ಮನ ಜೊತೆ ಏಕಾಂತ ಹುಡುಕಿ ಸಾಲುಮರದಲ್ಲಿ ಚಕ್ಕಂದ ಆಡುವುದು, ಮಾವ ಸೋಮುವಿಗೆ ಹೇಳುವ ವಯೋಸಹಜಗುಣ. ಪೋಲೀಸರು ಅಪರಾಧಿಯ ಹೆಂಡತಿಯ ಜೊತೆ ನಡೆದುಕೊಳ್ಳುವ ರೀತಿಯೆಲ್ಲ ಯಾವ ಪುರುಷಾರ್ಥಕ್ಕೆ ? ಛೆ ? ಭಾಷೆ ಸಾಹಿತ್ಯ ಜೀವನಧರ್ಮ, ನ್ಯಾಯ ಎಲ್ಲ ಎಂಥ ನಿಕಟ ಬಂಧದಲ್ಲಿ ತಳುಕುಹಾಕಿಕೊಂಡಿದೆ ಎಂದು ಕೊಳ್ಳುತ್ತಾರೆ. ಋಜುಮಾರ್ಗದ ಇತ್ಯರ್ಥಕ್ಕೆಬರುತ್ತಾರೆ. ''ಇತ್ಯರ್ಥಕ್ಕಾಗಿ ಹೋರಾಡೋದೆಂದರೆ ತಮ್ಮೊಳಗೆ ಅಖಾಡಕ್ಕೆ ಬಿದ್ದಿರುವ ಕುಸ್ತಿ, ನಾನು ವರ್ಸಸ್ ನಾನೇ, ಇದೇ ದುರಂತವನ್ನು ನಿರ್ಧರಿಸಲಾಗದ ದುರಂತದಿಂದ ಪಾರಾಗುವ ದಾರಿ. ಇದನ್ನು ಅರ್ಥೈಸುವ ಒಂದೇ ಮಾರ್ಗ ಎಂದರೆ ಬರೆಯೋದು, ಸೃಷ್ಟಿಸೋದು.''[3]

ಆದರೆ ಈ ಧಾಟಿ ಬೇರೆಯವರಿಗೆ ಹಿಡಿಸದು ಎಂಬ ಸತ್ಯ ಸೋಮುವಿಗೆ ಈಗಾಗಲೇ ಗೊತ್ತು. 'ಲೋಕ ಒಂದೆಂದಡೆ ತಾನೊಂದೆನಬೇಡ ಮತ್ತಾರೇನಂದಡೆಯೂ ತನ್ನ ನೆಂದರೆಬೇಡ' ಎಂಬ ವಚನಕಾರರ ಮಾತಿನ ತಿರುಳೇ ಇಲ್ಲಿ ನೆನಪಾಗುತ್ತದೆ.

ತನ್ನ ಮೇಲೆ ಅನುಮಾನ ಪಡುವ ಬಾಂಧವರು 'ನಿಗಾಮಡಗುವವರ'' ಕಣ್ಣಿನಲ್ಲಿ 'ಹಳಬನಾಗೆ' ಉಳಿದು 'ಹೊಸಬನಂತೆ' ಕಾಣುವುದು ಇಡೀ ಸಮಾಜವು ತನಗೆ ವಿರುದ್ಧವಾಗಿ ನಡೆಯುವವರನ್ನು ಕಾಣುವ ಧಾಟಿಯೇ ಆಗಿದೆ.

ಒಟ್ಟಾರೆಯಾಗಿ ಆಧ್ಯಾತ್ಮದ ಶೋಧದಲ್ಲಿ ಜೀವನದ ಸಾರವನ್ನು ಕಂಡುಕೊಳ್ಳುತ್ತಾರೆ.

'ತ್ಯಕ್ತ'ಕತೆಯ ಉಳಿದರ್ಧದಲ್ಲಿ ಸೋಮುವೇ ತನ್ನದೇ ಆದ ಆಲೋಚನೆಯ ಕತೆಯನ್ನು ಕಿಟ್ಟಿಯ ಬಲವಂತದಿಂದ ಹೆಣೆಯುವ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತಾನೆ.

---

2 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು , ಪುಟ-121

ಊರಲ್ಲೊಂದು ದೊಡ್ಡಮನೆ, ಅದರಲ್ಲೊಂದು ದೊಡ್ಡ ಕೋಣೆ, ಆ ಕೋಣೆಯಲ್ಲೊಂದು ಗೂಬ್-ಗುಮ್ಮ' ಅದಕ್ಕೆ ಕೆಂಪನೆಯ ಕಣ್ಣು. ಚೂಪಾದ ಕೊಕ್ಕು' ಅದು ಎಂಥ ಕಿಟಕೀಲು ನುಗ್ಗುತ್ತೆ ಎಬ ಕತೆ ಕಿಟ್ಟಿಯಲ್ಲಿ ಭಯ ಹುಟ್ಟಿಸಿದ್ದರಿಂದ ಮತ್ತೊಂದು ತ್ಯಕ್ತ ಪ್ರವಾದಿ' ಕತೆ ಹೇಳಿದಾಗ ಅದು ಕಿಟ್ಟಿಯನ್ನೇ ಹೋಲುವುದರಿಂದ ಅದನ್ನು ಅವನು ಒಪ್ಪದಿರುವಾಗ ಅಜ್ಜಿ ಸೋಮುವನ್ನು ಪ್ರಶಂಸಿಸುತ್ತಾಳೆ. ಆಗದ ಜನರು ಪರಿಚಿತವಾದದ್ದು ಒಪ್ಪದೆ ಅಪರಿಚಿತವಾದದ್ದನ್ನೇ ಒಪ್ಪುತ್ತಾರೆ ಎಂಬ ವಾಸ್ತವ ಸತ್ಯ ಹೊರಬೀಳುತ್ತದೆ. 'ದೇವರು-ದೆವ್ವದ'ಪರಿಕಲ್ಪನೆ ನಂಬುಗೆಗಳೂ ಈ ರೀತಿಯಿಂದ ಹುಟ್ಟಿರಬೇಕೆಂಬುದೇ ತೇಜಸ್ವಿಯ ತೀರ್ಮಾನ ವಾಗಿದೆ.

ಇದೇ ರೀತಿಯ ಮತ್ತೊಂದು ಭಾಷಾತೀತವಾದ ಪರಿಹಾರತೀತವಾದ ಆದ್ಯಂತದಾಚೆಗಿನ ಸಂಗತಿ ಅಜ್ಜಿಯ ಸಾವಿನ ಸಂದರ್ಭ ''ಯಾರೂ ಕರಕೊಂಡು ಹೋಗಲಿಲ್ಲೋ ಅಜ್ಜಿ ಸತ್ತು ಹೋದರು ಅವರನ್ನು ಬೆಂಕಿಗೆಕೊಟ್ಟು ಬರ್ತಾರೆ'' ಎಂದಾಗ ಕಿಟ್ಟಿ ತಂದೆ ಸೋಮುಗೆ ಹಾಗೆ ಹೇಳಬಾರದು, ದೇವರ ಹತ್ತಿರಕ್ಕೆ ಹೋದರು, ಸ್ವಾಮಿ ಹತ್ತಿರಕ್ಕೆ ಹೋದರು' ಎನ್ನಬೇಕೆಂದಾಗ 'ಮತ್ತೆ ಮತ್ತೆ ಇಬ್ಬಗೆಯ ಬದುಕನ್ನು ಬಲಾತ್ಕರಿಸುವ ಜಗತ್ತಿನ ಮೇಲೆ ಜನಗಳ ಮೇಲೆ ಸೋಮುಗೆ ರೇಜಿಗೆಯಾಗುತ್ತದೆ. ಈ ರೀತಿ ಇಡೀ ಸಮಾಜವೇ ಭಯಾನಕವಾದ ವಿರೋಧಾಭಾಸಗಳಿಂದ ತದ್ವಿರುದ್ಧಗಳಿಂದಾದ ಸತ್ಯವನ್ನು ಅನಾವರಣಗೊಳಿಸಿದ್ದಾರೆ. ಇಲ್ಲಿ ಹಿಂದಿನ ಕಥೆಗಳ ರೋಷವೇ ಚಿಂತನೆಯಾಗಿ, ಉದ್ವೇಗವೇ ಜಿಜ್ಞಾಸೆಯಾಗಿ ಮೂಡಿರುವುದು ಕಂಡುಬರುತ್ತದೆ.

ಮಾಯಾಮೃಗ

ಮಾಯಾಮೃಗ ಕತೆಯಲ್ಲಿ 'ನಾಯಿಯು' ಮಾಯಾಮೃಗವಾಗಿ ಕಾಡುತ್ತದೆ. ದೆವ್ವ ಮತ್ತು ದೇವರುಗಳು ಇರುವಿಕೆಯ ಬಗ್ಗೆ ನಂಬಿಕೆಯಿಲ್ಲದ ತೇಜಸ್ವಿಯು ಮನುಷ್ಯನಿಗಿರುವ ಭಯ-ಭೀತಿಯೆಂಬುದೇ ದೆವ್ವ-ದೇವರುಗಳಾಗಿ ಪರಿಣಮಿಸುತ್ತದೆ ಎಂಬ ತೀರ್ಮಾನಕ್ಕೆ ಬರುವ ಚಿತ್ರಣ ಇಲ್ಲಿದೆ.

ಪ್ರಸ್ತುತ ಕತೆಯಲ್ಲಿ ದೆವ್ವದ ಅಸ್ತಿತ್ವ, ಸ್ವರೂಪ ಕುರಿತ ಚರ್ಚೆಯಿದೆ. ದೆವ್ವ ಒಂದು ಭೌತವಾಸ್ತವವೆ ? ಅಭೌತವಾಸ್ತವವೆ ? ಅಭೌತವಾಸ್ತವವನ್ನು ನಾವು ಗ್ರಹಿಸುವುದು ಹೇಗೆ ? ಎಂಬ ಗಂಭೀರ ಪ್ರಶ್ನೆಗಳು ಲೇಖಕರಿಗಿದೆ.

ದೆವ್ವ ಇದೆಯೆಂದಾದರೆ ಅದಕ್ಕೊಂದು ರೂಪ, ಆಕಾರ ಬೇಕು ಇಲ್ಲದಿದ್ದರೆ ಗ್ರಹಿಸಲು ಅಸಾಧ್ಯ ಎಂಬ ಸ್ವಾರಸ್ಯಕರ ಜಿಜ್ಞಾಸೆಯಿಂದ ಕತೆಯ ನಿರೂಪಕ ಮತ್ತು ಗೆಳೆಯ

'ಷಾ'ರವರಿಗೆ ಬಂದು ಅದನ್ನು ಪ್ರತ್ಯಕ್ಷ ಮಾಡಿಕೊಳ್ಳಲು ದೆವ್ವದ ಆವಾಸಸ್ಥಾನವೆಂದು ಕರೆಯಲ್ಪಡುವ ಸ್ಮಶಾನಕ್ಕೆ ಹೋಗುತ್ತಾರೆ.

ಆದರೆ ಲೇಖಕರು 'ದೆವ್ವಇರುವುದರ ಬಗೆಗಾಗಲೀ ಅದು ಮನುಷ್ಯರಿಗೆ ಕಾಣಿಸುತ್ತದೆಂಬ ಬಗೆಗಾಗಲಿ ಸುತರಾಂ ನಂಬುಗೆ ಇಲ್ಲ ಆದರೆ ದೆವ್ವನನ್ನು ನಂಬದಿರುವುದಕ್ಕೂ ಭಯಕ್ಕೂ ಯಾವ ಸಂಬಂಧವು ಇಲ್ಲೆಂದು ತೋರುತ್ತದೆ. ನಾವು ಆಲೋಚಿಸುವಾಗ ನಾಸ್ತಿಕರೂ, ವಿಚಾರವಾದಿಗಳೂ ಆಗಿರುತ್ತ ಕತ್ತಲ ಏಕಾಂತದಲ್ಲಿ ಹೃದ್ಗತ ಭಾವನೆಗಳನ್ನು ಮೆಲುಕು ಹಾಕುವಾಗ ದೆವ್ವ ಇದ್ದೀತೇನೋ ಎಂಬ ಗುಮಾನಿಂದ ಪುಕ್ಕಲರಾಗುತ್ತೇವೆ ಎಂಬ ತೀರ್ಮಾನಕ್ಕೆ ಬರುತ್ತಾರೆ.

ಕಾದು ಕಾದು ದೆವ್ವ ಕಾಣದಾದಾಗ ಸ್ಮಶಾನದಿಂದ ಊರಿಗೆ ಹಿಂದಿರುಗುವಾಗ ಒಂದು ನಾಯಿ ಮರಿ ಹಿಂಬಾಲಿಸುತ್ತದೆ. ಆಗ ಷಾ ಹೇಳುತ್ತಾರೆ. ''ಟಾಮೀನೂ ಅಲ್ಲ. ಟೈಗರೂ ಅಲ್ಲ ಅದರ ಹೆಸರು ಡೆತ್, ಸಾವು , ಮೃತ್ಯು ಅದಕ್ಕೇ ಅದು ಸ್ಮಶಾನದಲ್ಲಿತ್ತು ಎನ್ನುತ್ತಾರೆ.''[4]

ಬೆನ್ನು ಹತ್ತಿದ ನಾಯಿಮರಿಯನ್ನು ಒಂದು ಮನೆಯ ಕಾಂಪೌಂಡಿನಲ್ಲಿ ಹಾಕಿದಾಗಲೂ ಅದನ್ನು ಪದೇ ಪದೇ ಮನೆಮಾಲಿಕನಾದ ದಡೂತಿ ವ್ಯಕ್ತಿ ಹೊರಹಾಕುತ್ತಾನೆ. ಇವರು ಪದೇ ಪದೇ ಗೇಟಿನ ಒಳಗೆ ಬಿಡುತ್ತಿರುತ್ತಾರೆ.

ಪದೇ ಪದೇ ಒಳಬರುವ ನಾಯಿ-ದೆವ್ವ ಎಂಬ ನಂಬಿಕೆಯಿಂದಲೇ ವಿಚಿತ್ರಸ್ಥಿತಿ ತರುವ ಮೂಲಕ ಸಾಯುತ್ತಾನೆ. ತಮ್ಮ ಬೆನ್ನು ಹತ್ತಿದ ಇದು ಸಾಕ್ಷಾತ್ ದೆವ್ವವೇ ಇರಬೇಕೆಂಬ ಗುಮಾನಿ ಇದ್ದರೂ ಅನಂತರದಲ್ಲಿ ದೆವ್ವವಿರುವುದು ಸ್ಮಶಾನದಲ್ಲಲ್ಲ ತಮ್ಮ ಮನದಲ್ಲಿ ಎಂಬ ತೀರ್ಮಾನಕ್ಕೆಬರುತ್ತಾರೆ. ಮಾನವ ಮೆದುಳು ಹುಟ್ಟುಹಾಕುವ ಕಲ್ಪಿಸುವ ಭಯವೇ ದೆವ್ವ. ಅದು ಪಂಚೇಂದ್ರಿಯತೀತವಾದದ್ದು. ಮನೆಯ ಮಾಲೀಕರು ತಕ್ಷಣ ದೆವ್ವ ಎಂದು ನಂಬದೆ ಈ ಕೆಲಸದ ಹಿಂದೆ ಏನೋ ಬುದ್ಧಿವಂತಿಕೆ ಇದೆ ಎನ್ನುವ ಅನುಮಾನದಿಂದ ಗೇಟು ಹಾಕಿದವನ ಒಳಗೆ ಹೋಗದೆ ಗೇಟಿನ ಮೇಲೆ ತಲೆಇಟ್ಟುಕೊಂಡು ಕಾಯತೊಡಗಿದ ನಂತರ ಡೆತ್ ತಮ್ಮೆದುರೇ ಬಾಲವಾಡಿಸುತ್ತ ನಿಂತಿದ್ದರಿಂದ ಇವರಿಗೂ ಭಯವಾಯಿತು. ಸ್ವಲ್ಪ ಕ್ಷಣದಲ್ಲಿ ತಮ್ಮಿಂದ ಮಾಯವಾದ ಡೆತ್ ಆ ಮನುಷ್ಯನ ಕಡೆ

4 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕಿರುಗೂರಿನ ಗಯ್ಯಾಳಿಗಳು, ಪುಟ-101

ಹೆಜ್ಜೆ ಹಾಕಿದಾಗ ಆತನ ದೇಹ ಹಾಸುಗಲ್ಲಿನ ಮೇಲೆ ದೊಪ್ಪನೆ ಬಿದ್ದು ಡೆತ್ ಅವನನ್ನೂ ದಾಟಿ ಅವನ ಮನೆಯೊಳಗೆ ಹೋಯ್ತು. ಹೀಗೆ ದೆವ್ವದ ಮೇಲಿನ ನಂಬುಗೆಯೇ ದೇವರ ಮೇಲೂ ಇರಬೇಕೆಂಬ ತೀರ್ಮಾನಕ್ಕೆ ಬರುತ್ತಾರೆ. ಇಲ್ಲಿ 'ಮನಸ್ಸಿದ್ದಂತೆ ಮಾದೇವ' ಎಂಬ ಗಾದೆಮಾತಿನಂತೆ ತಮ್ಮ ತಮ್ಮ ಭಾವನೆಯಂತೆ ಆಕಾರಗಳು, ನಂಬಿಕೆಗಳು ಮೈತಾಳುತ್ತವೇ ವಿನಹ ವಸ್ತುತಃ ಯಾವುದೂ ಸತ್ಯವಾಗಿರುವುದಿಲ್ಲ. ಬದಲಿಗೆ ಭಯವೇ ಧರ್ಮದ ಮೂಲಸ್ಥಾಯಿ ನೆಲೆಯಾಗುವುದನ್ನು ಹೊರಹಾಕುತ್ತಾರೆ.

ವಿಶ್ವರಹಸ್ಯ

ವಿಶ್ವರಹಸ್ಯ ಕತೆಯು ನಿರೂಪಕನಾದ ಸಣ್ಣ ಬಾಲಕನ ಮನಸ್ಸಿನಲ್ಲಿ ತನ್ನ ಪೂರ್ವಿಕರು ಹೇಳಿದ ತಾತ್ವಿಕ ಸಿದ್ಧಾಂತಗಳನ್ನು ಅವಲೋಕಿಸುವುದೇ ಆಗಿದೆ. ಪರಂಪರೆಯು ಕಟ್ಟಿಕೊಡುವ ಸತ್ತ ಮೇಲೆ ಪಾಪಗಳಿಗೆ ನರಕದ ದರ್ಶನವು, ಪುಣ್ಯವಂತರಿಗೆ ಸ್ವರ್ಗದ ದರ್ಶನವು ಪ್ರಾಪ್ತವಾಗುತ್ತದೆ ಎಂಬ ಜನಜನಿತ ತಾತ್ವಿಕತೆಯು ಬಾಲಕ ಪುಟ್ಟುವಿನ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ.

ಸೈಕಲ್ ಕಲಿಯುವ ಭರದಲ್ಲಿರುವವನ ಸೈಕಲ್ ಇಳಿಜಾರಿನಲ್ಲಿ ಸಾಗಿದ್ದು ಆಕಾಶದಲ್ಲಿನ ಪುಷ್ಪಕವಿಮಾನದಂತೆ ಇವನಿಗೆ ಭಾಸವಾಗುತ್ತಿರುತ್ತದೆ. ಸುತ್ತಮುತ್ತಲ ಪ್ರಕೃತಿಯು ದೇವಲೋಕದ ಉದ್ಯಾನವನದಂತಿರುತ್ತದೆ.

ರಾಕ್ಷಸಿಯಂತೆ ಕಾಣುತ್ತಿದ್ದ ಬೃಹತ್ಕಾಯದ ರಂಗಮ್ಮ ಎಂಬ ಹೆಂಗಸಿಗೆ ಡಿಕ್ಕಿ ಹೊಡೆದ ಸಂದರ್ಭದಲ್ಲಿ ಬಾಲಕನಲ್ಲಾಗುವ ತನ್ನ ಚಿತ್ತಏಕಾಗ್ರತೆ ಬಗ್ಗೆಯಾಗಲೀ ರಂಗಮ್ಮನ ಮೇಲೆ ಅನುಮಾನ ಪಡುವುದಕ್ಕಾಗಲೀ ಮೂಲ ಕಾರಣ ಮನೆಮಂದಿಯೆಲ್ಲಾ ಅವಳ ಬಗ್ಗೆ ತನ್ನ ಮನೆಯಲ್ಲಿ ಪಿಸುಗುಡುವ ಮಾತಿನಿಂದ ಅಸ್ಪಷ್ಟವಾಗಿ ಅರ್ಥೈಸಿಕೊಂಡಂತ ಈತ ಒಟ್ಟಿನಲ್ಲಿ ಅವಳೊಬ್ಬಳು ದುಷ್ಟ ಹೆಂಗಸಿರಬೇಕೆಂಬ ತೀರ್ಮಾನಕ್ಕೆ ಬರುವುದೇ ಕಾರಣವಾಗಿದೆ.

ಅವಳಿಗೆ ಸೈಕಲ್ ಡಿಕ್ಕಿ ಹೊಡೆದು ಅವಳ ಸೀರೆಯೊಳಗೆ ತೂರಿಕೊಂಡು ತಾನು ಸತ್ತೇಹೋದನೆಂದು ಭಾವಿಸಿಕೊಂಡು ತಾನಿರುವುದು ಸ್ವರ್ಗದಲ್ಲಿ. ಆ ರಂಗಮ್ಮ ಈಗ ನರಕದಲ್ಲಿರಬಹುದೆಂದು ಆಲೋಚಿಸುತ್ತಾ ಸ್ವರ್ಗ-ನರಕಗಳಲ್ಲಿ ದೊರೆಯಬಹುದಾದ ಸನ್ಮಾನಗಳನ್ನು ನೆನೆದು ಏನಾಗುತ್ತಿದೆ ಎಂದು ಅವನಿಗೆ ಗೊತ್ತಾಗುವಷ್ಟರಲ್ಲಿ

"ಕೆಳಗೆ ಉರುಳಿಬಿದ್ದು ಸೀರೆ ಒಳಗೆ ತಲೆ ಎತ್ತುತ್ತಾ ಇದ್ದ ಇವನನ್ನು ಹುಳು ಕೆಡವಿದಂತೆ ಸೀರೆ ಕೊಡವಿ ಆಚೆ ತಳ್ಳಿದಾಗ"[5] ತಾನು ಇದುವರೆಗೆ ಸ್ವರ್ಗ ಎಂದು ತಿಳಿದದ್ದು ಅವಳ ಸೀರೆ ಸುರುಳಿಯ ಒಳಭಾಗ ಎಂದು ಗೊತ್ತಾಗುತ್ತದೆ.

ರಂಗಮ್ಮನ ಪರಿಪರಿಯಾದ ನವನವೀನ ಬಯ್ಗುಳಗಳು ಅವನು ಇದುವರೆಗೆ ಕಂಡು ಕೇಳಿರದ ಹೊಸಹೊಸ ಶಿಕ್ಷೆಯ ಸಾಧ್ಯತೆಯನ್ನು ಕುರಿತದ್ದಾದರಿಂದ ಆ ಎಲ್ಲಾ ಬೈಗುಳಗಳು ಒಂದು ರೀತಿಯ ಹೊಗಳಿಕೆಯ ರೋಮಾಂಚನವೇ ಆಗಿ ಮತ್ತೆ ಮತ್ತೆ ಹೊಸ ಹೊಸ ಬೈಗುಳಗಳನ್ನೇ ನಿರೀಕ್ಷಿಸುತ್ತಿರುತ್ತಾನೆ.

ನಾನು ಅವಳಿಗಾದ ಭಯಂಕರ ಅನ್ಯಾಯಕ್ಕೆ ವಿಷಾದ ಸೂಚಿಸಿ ಅಳುತ್ತಿಲ್ಲ ಎಂಬ ರೋಷ ಅವಳದಾಗಿತ್ತು ಎಂದು ಭಾವಿಸುತ್ತಾರೆ.

ರಂಗಮ್ಮ ಇವನನ್ನು ಎದುರಿಸುವ ಮತ್ತೊಂದು ಮಾರ್ಗ ಹುಡುಕಿ ನಡೀ ನಿಮ್ಮನೆಗೆ. ಸೀರೆ ಹರ್ದ್ಹಾಕಿದೆಯಲ್ಲಾ, ಸೀರೆ ಕೊಟ್ಟು ಸೈಕಲ್ ತೆಗೆದುಕೊ ಎಂದು ಸೈಕಲ್‌ನ್ನು ಅವನನ್ನು ಆಟದ ಗೊಂಬೆಗಳಂತೆ ತಬ್ಬಿಕೊಂಡು ಅವರ ಮನೆಯತ್ತ ಸಾಗಿದಾಗ ಅವರ ಮನೆ ಸಮೀಪಿಸುತ್ತಿದ್ದಂತೆ ರಂಗಮ್ಮನ ಮಾತಿನದಾಟಿಯೇ ಬದಲಾಯಿಸಿ ಅಜ್ಜಿಯನ್ನು ಕಂಡೊಡನೆ ಹಿಂಗಾ ಮಾಡೋದು ? ಈ ಚಿಕ್ಕ ಹುಡುಗನ್ನ ಕೂರಿಸಿ ಇಳಿಜಾರಿನಲ್ಲಿ ತಳ್ಳಿ ಬಿಟ್ಬೋಡಾದ ಸೈಕಲ್ಲಾ' ಎನ್ನುತ್ತಾ ಆಕೆ ಸರ್ವೇ ಸಾಮಾನ್ಯ ಹೆಂಗಸಿನಂತೆ ಹೊರಟಾಗ ಸೀರೆಯನ್ನು ಕೇಳಲಿಲ್ಲ ನಡೆದದ್ದನ್ನು ಹೇಳಲಿಲ್ಲ. ಬಹುಶಃ ಇದರಿಂದ ದಿಗ್ಮೂಢನಾದ ಬಾಲಕ ಪ್ರಪಂಚದಲ್ಲಿ ಕೆಲವು ಹೇಳಲೇ ಬಾರದಂತಹ ಸಂಗತಿಗಳಿವೆಯೆಂಬ ತೀರ್ಮಾನಕ್ಕೆ ಬಂದು "ತಾನು ಯಾರಿಗೂ ಹೇಳಲಾಗದ, ತನಗೇ ತಾನೇ ಹೇಳಿಕೊಳ್ಳಬಹುದಾದ ವಿಶ್ವದ ರಹಸ್ಯ ಅವನಲ್ಲೇ ರೂಪುಗೊಳ್ಳತೊಡುಗುತ್ತದೆ."[6]

ಕೆಲವು ಸಂಗತಿಗಳು ಸರಳವಾಗಿದ್ದರೂ ಭಾಷೆಗೆ ಸಿಗದ ಅನುಭವಕ್ಕೆ ಮಾತ್ರ ದಕ್ಕಲಿಲ್ಲದ ವಿಷಯದ ಬಗ್ಗೆ ಕುತೂಹಲ ತಾಳುತ್ತಾರೆ.

---

5 ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕಿರುಗೂರಿನ ಗಯ್ಯಾಳಿಗಳು, ಪುಟ-110

6 ಅದೇ ಪುಟ-123

ಸಮಾರೋಪ

ನಾವೆಲ್ಲರೂ ಸಧ್ಯದ ಮತಧರ್ಮಗಳ ವಿವರಣೆಯಲ್ಲಿ ಸಿಕ್ಕುವ ಜಗತ್ತಿನ ಸ್ವರೂಪಕ್ಕೆ ಬದಲಾಗಿ ಯಾವ ವಿವರಣೆಯನ್ನು ಆಶ್ರಯಿಸದೆ ಸುಮ್ಮನೆ ಪ್ರಪಂಚದ ವಿಸ್ಮಯಕ್ಕೆ ತೆರೆದುಕೊಳ್ಳಬೇಕೆಂಬ ಅಪೇಕ್ಷೆ ತೇಜಸ್ವಿಗೆ ಬಲವಾಗಿತ್ತು. ಈ ಗಾಢ ಪ್ರಜ್ಞೆಯಿಂದಾಗಿಯೇ ಅವರಿಗೆ ಜಾತಿ ಮತಗಳು, ಅದರ ಗಲಭೆಗಳು, ಅದರ ಹಿಂದಿನ ರಾಜಕೀಯ ಎಲ್ಲವನ್ನೂ ತಾತ್ಸಾರದಿಂದ ಕಾಣಲು ಅವರಿಗೆ ಸಾಧ್ಯವಾಗಿದೆ. ದೇವರಿಲ್ಲದ ಜಗತ್ತಿನಲ್ಲಿ ಮತಧರ್ಮಗಳ ಸೋಂಕಿಲ್ಲದೆ ಬದುಕಬೇಕೆಂಬ ಅಪೇಕ್ಷೆ ಅವರದು.

ಸಮಾಜದ ಆಗುಹೋಗುಗಳು ಅವರ ಸಾಹಿತ್ಯದ ಎಳೆಗಳಾಗಿದ್ದರೆ ಹೊಸತನದ ಹುಡುಕಾಟ ಸಾಹಿತ್ಯದ ಮೂಲಸೆಲೆಯಾಗಿಸಿಕೊಂಡು ಅದರಂತೆ ಹೊಸತನದ ಹೆಜ್ಜೆ ಇಟ್ಟವರಿವರು.

ತೇಜಸ್ವಿಯವರು ಮುಜುಗರವಿಲ್ಲದೆ ವಿಸ್ಮಯ ವಿನೋದದಿಂದ ತಮ್ಮ ಭಾವನಾ ಲೋಕದಲ್ಲಿರುವ ಎಲ್ಲಾ ಭಾವನೆಗಳನ್ನು ಅನಾವರಣಗೊಳಿಸಿದ್ದಾರೆ. ಉದಾ ಕಿರುಗೂರಿನ ಗಯ್ಯಾಳಿಗಳು, ವಿಶ್ವರಹಸ್ಯ ಇತ್ಯಾದಿ. ಅವರು ಪ್ರಾರಂಭದ ಬರವಣಿಗೆಯಿಂದ ಅಂತ್ಯದ ಬರವಣಿಗೆಯವರೆಗೂ ಎಂದೂ ಕೃತಕರಾಗಿರಲಿಲ್ಲ. ಒಬ್ಬ ಲೇಖಕನಾದವನು ಆಕರ್ಷಕವಾಗಲೆಂದೋ, ಉದಾತ್ತತೆ ತೋರಲೆಂದೋ ತಮ್ಮ ಭಾವನೆಗಳಲ್ಲಿ ಸುಳ್ಳುವಾದರೆ ಆತನ ಬರವಣಿಗೆಯ ಶೈಲಿಯೂ ಕೃತಕವೆನಿಸುತ್ತದೆ ಎಂದು ನಂಬಿದ್ದ ಇವರು ನೈಜ ರೀತಿಯಲ್ಲೇ ವಾಸ್ತವತೆಯಲ್ಲಿನ ಘಟನೆಗಳನ್ನು ತಮ್ಮ ಬರಹದಲ್ಲಿ ದುಡಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಈಗಾಗಲೇ ತಮ್ಮ ಚಿಂತನಾಪ್ರಜ್ಞತೆಯಲ್ಲಿರುವ ಕಥಾಹಂದರಕ್ಕೆ ವಾಸ್ತವಲೋಕದಲ್ಲಿ ಪುರಾವೆ ಹುಡುಕುವ ಪ್ರಯತ್ನ ಮಾಡುವಂತಿದೆ.

ತೇಜಸ್ವಿಯವರಿಗೆ ನವೋದಯ ಪಂಥದವರಲ್ಲಿದ್ದ ಆಧ್ಯಾತ್ಮಿಕ ಪ್ರಪಂಚದಿಂದ ತೀರಾ ಪ್ರಭಾವಿತರಾಗಿರುವುದನ್ನು ಆದರೆ ಅಲ್ಲಿ ಕೆಲವರಲ್ಲಿರುವ ಬದುಕುವುದು ಮತ್ತು ಕಲಾಸೃಷ್ಟಿಗಳನ್ನು ತಮ್ಮಲ್ಲಿ ಭಿನ್ನವಾಗಿ ಅಳವಡಿಸಿಕೊಂಡಿರುವುದನ್ನು ಕಾಣಬಹುದು. ಆದ್ದರಿಂದಲೇ ಏನೋ ಕುವೆಂಪುವಿಗೆ ಕಾಜಾಣ ಇತ್ಯಾದಿ ಹಕ್ಕಿಪಕ್ಷಿಗಳ ಸೌಂದರ್ಯಗಳು ಮುಖ್ಯವಾದಾಗ ತೇಜಸ್ವಿಗೆ ಅವುಗಳ ಬದುಕಿನ ಹಿಂದಿರುವ ರೀತಿನೀತಿಗಳು ಮುಖ್ಯವಾಗುವುದು. ಕಾರಂತರ ಬದುಕುವ ಕ್ರಮವನ್ನೂ ಸರಿಯಾಗಿಯೇ ಗ್ರಹಿಸಿದ್ದಾರೆ. ನಿಗೂಢ ಮನುಷ್ಯರಲ್ಲಿ ಬರುವ ರಾಮಯ್ಯ ಎಂಬ ಸಂಗೀತಗಾರನು ತನ್ನ ಸರ್ವಾಂಗಗಳಿಗೂ

ಪಾರ್ಶ್ವವಾಯು ಬಡಿದಾಗಲೂ ಛಲದಿಂದ ಸಂಗೀತ ನುಡಿಸುತ್ತಿದ್ದುದು ಇಲ್ಲಿ ಅವನು ಬದುಕಲು ಎರಡು ಸಾಧ್ಯತೆಗಳಿವೆ. ಒಂದು ಎಡಗೈಲಿ ಬ್ಲೇಡಿನಿಂದ ಕತ್ತನ್ನು ಕೊಯ್ದುಕೊಳ್ಳುವುದು ಮತ್ತೊಂದು ಇತರರ ಹಂಗಿನಲ್ಲಿ ಬದುಕುದೂಡುವುದು ಆದರೆ ಆತ ಮೊದಲನೆಯದನ್ನ ಆಯ್ಕೆ ಮಾಡಿಕೊಳ್ಳುವಲ್ಲಿ ಆತ್ಮಹತ್ಯೆಯಲ್ಲಿಯೇ ತನ್ನ ಸ್ವಾತಂತ್ರ್ಯ ಕಂಡುಕೊಳ್ಳುವ ಆತ ಇಲ್ಲಿ ದಿಟ್ಟ ವ್ಯಕ್ತಿಯಾಗಿ ನಿಲ್ಲುತ್ತಾನೆ. ಲೋಹಿಯಾರವರ ತತ್ವಚಿಂತನೆಯು ಬಹುಮಟ್ಟಿಗೆ ಯಶಸ್ವಿಗೊಳಿಸಿದ್ದಾರೆ. ಹಿಂದೂ ಮತೀಯತೆಯನ್ನು ತಿರಸ್ಕರಿಸಿದ ತೇಜಸ್ವಿಯವರು ತಮ್ಮ ಭಾವನೆಗಳನ್ನು ತಮ್ಮೊಳಗೆ ತಿಳಿಯುವುದರಲ್ಲೂ, ವ್ಯಕ್ತಪಡಿಸುವುದರಲ್ಲೂ ಅಪ್ಪಟರಾದ ಮಾನವತಾವಾದಿಯಾಗಿದ್ದಾರೆ.

ತೇಜಸ್ವಿಯಲ್ಲಿ ಭೂತಾನು ಇಲ್ಲ. ಭವಿಷ್ಯಾನೂ ಇಲ್ಲ. ಬದಲಿಗೆ ವರ್ತಮಾನವಿದೆ. ಉತ್ತಮ ಲೇಖಕನಾಗಲು ಉತ್ತಮಗುಣಗಳಿರಬೇಕಾದುದು ಅನಿವಾರ್ಯ ಜಾತಿ ಮೋಹದಿಂದ ವರ್ಗಮೋಹದಿಂದ, ಅಧಿಕಾರದ ಮೋಹದಿಂದ ಮುಕ್ತನಾದಾಗ ಮಾತ್ರ ಆತನಲ್ಲಿ ಉತ್ತಮ ಗುಣಗಳಿರುತ್ತವೆಂದು ಸಾಮಾನ್ಯವಾಗಿ ತಿಳಿಯಬಹುದು. ಈ ಎಲ್ಲಾ ಗುಣಗಳು ತೇಜಸ್ವಿಯವರಲ್ಲಿರುವುದರಿಂದಲೇ 'ಬದುಕಿನ ಬಗ್ಗೆ ಪ್ರೀತಿ ಹುಟ್ಟಿಸುವ, ಬದುಕನ್ನು ಕಲಿಸುವ ವ್ಯಕ್ತಿಯಾಗಿದ್ದಾರೆ.

ಇವರ ಎಲ್ಲಾ ಕಥೆಗಳಲ್ಲಿಯೂ ಏಕಕಾಲಕ್ಕೆ ವಾಸ್ತವಿಕವೂ, ಗ್ರಹಿಕೆಯ ವಿಶಿಷ್ಟತೆಯಿಂದಾಗಿ ಸಾಂಕೇತಿಕವೂ ಆಗಿದೆ. ಜೊತೆಗೆ ಯಾವ ಮಡಿವಂತ ನಿರ್ಧಿಷ್ಟ ಭಾಷೆಗೆ ಒಗ್ಗಿಕೊಳ್ಳದೆ ಬರವಣಿಗೆಯನ್ನು ಸಡಿಲಗೊಳಿಸಿದ್ದರಿಂದಲೋ ಏನೋ ಹೆಚ್ಚೆಚ್ಚು ವಿಷಯ ಒಳಗೊಳ್ಳುವ ಸಾಧ್ಯತೆಯನ್ನು ಪಡೆದಿದೆ. ಬರಹದ ಶೈಲಿಯು ಆರಾಮಾಗಿ, ಸಹಜವಾಗಿ ಬರೆದಿದ್ದರಿಂದಲೇ ಅದು ಅರ್ಥೈಸಿ ಓದಿಸಿಕೊಂಡು ಹೋಗುವ ಗುಣವನ್ನು ಪಡೆದಿದೆ. 'ನಿಗೂಢ ಮನುಷ್ಯರಲ್ಲಿ' ಮರಸರನು ಮಂಗನನ್ನು ತಿಂದು ಅದರ ತಲೆಯನ್ನು ಬಿಡಾರದಲ್ಲಿ ಬಿಸಾಡುವುದರಿಂದ ಇತರರಿಗೆ ಹೆದರಿಕೆ ಹುಟ್ಟಿಸುತ್ತದೆ. ಈ ಮಂಗ ತಿನ್ನುವ ಪ್ರಸಂಗ 'ಅವನತಿ' ಕಥೆಯಲ್ಲಿ ಮಾವ ತನ್ನ ಗೂರಲಿನ ನಿವಾರಣೆಗೆ ಮಂಗತಿನ್ನುವ ಪ್ರಸಂಗ ಇಲ್ಲೆಲ್ಲ ಬೈನರಿ ಆಪೋಸಿಷನ್‌ನ ರೀತಿಯಲ್ಲಿ ಗ್ರಹಿಸಬೇಕಾಗುತ್ತದೆ. ಇಲ್ಲಿ ಪರಂಪರೆ ಕೋತಿ ತಿನ್ನುವುದು, ಸತ್ತ ಮಗುವನ್ನು ಹೂಳದೆ ಹೊರಹಾಕಿ ಆ ಶವನ್ನೇ ಬೇಟೆಯ ಅಸ್ತ್ರವಾಗಿಸುವಿಕೆಯನ್ನು ಕಾಣಬಹುದು. ತೇಜಸ್ವಿಯು ತಮ್ಮ ಬರವಣಿಗೆಯಲ್ಲಿ ಒಂದು ಪಾತ್ರವಾಗಿ ಬರುತ್ತಾರೆ. ಪಾತ್ರವಾಗಿ ಬರುತ್ತಾರೆ ಅನ್ನುವುದಕ್ಕಿಂತ ವಿಸ್ಮಯದ ಕಣ್ಣಾಗಿರುತ್ತಾರೆ. ಎಲ್ಲವನ್ನೂ ವಿಸ್ಮಯದಿಂದ ನೋಡುವ ಕಣ್ಣಾಗಿರುತ್ತಾರೆ.

ನಾವೆಲ್ಲರೂ ಸದ್ಯದ ಮತಧರ್ಮಗಳ ವಿವರಣೆಯಲ್ಲಿ ಸಿಕ್ಕುವ ಜಗತ್ತಿನ ಸ್ವರೂಪಕ್ಕೆ ಬದಲಾಗಿ ಯಾವ ವಿವರಣೆಯನ್ನು ಆಶ್ರಯಿಸದೆ ಸುಮ್ಮನೆ ಪ್ರಪಂಚದ ವಿಸ್ಮಯಕ್ಕೆ ತೆರೆದುಕೊಳ್ಳಬೇಕೆಂಬ ಅಪೇಕ್ಷೆ ತೇಜಸ್ವಿಗೆ ಬಲವಾಗಿದೆ. ಈ ಗಾಢ ಪ್ರಜ್ಞೆಯಿಂದಾಗಿಯೇ ಅವರಿಗೆ ಜಾತಿ ಮತಗಳು ಅದರ ಗಲಭೆಗಳು. ಅದರ ಹಿಂದಿನ ರಾಜಕೀಯ ಎಲ್ಲವನ್ನೂ ತಾತ್ಸಾರದಿಂದ ಕಾಣಲು ಅವರಿಗೆ ಸಾಧ್ಯವಾಗಿದೆ. ದೇವರಿಲ್ಲದ ಜಗತ್ತಿನಲ್ಲಿ ಮತಧರ್ಮಗಳ ಸೋಂಕಿಲ್ಲದೆ ಬದುಕಬೇಕೆಂಬ ಅಪೇಕ್ಷೆ ಅವರದು.

ಜಾಗತೀಕರಣ, ಖಾಸಗೀಕರಣ, ಕಂಪ್ಯೂಟರ್, ಇಂಟರ್‌ನೆಟ್ ಜಾತಿವಾದದ ಕೆಲವು ಕೆಡುಕುಗಳು ಅವರಿಂದ ರೈತರಿಗೆ ಉಂಟಾಗುತ್ತಿರುವ ಸಮಸ್ಯೆಗಳು, ಈ ಕುರಿತೆಲ್ಲ ಗಂಭೀರವಾಗಿ ಚಿಂತಿಸುತ್ತಿದ್ದರೂ ನಮ್ಮ ಧಾರ್ಮಿಕ ಅಸಂಗತತೆ, ಮೂಢನಂಬಿಕೆಗಳ ಅಸಂಗತತೆ ಮುಂತಾದವೆಲ್ಲ ಈ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದರೆ ಹೋಗಲಿ ಆದರೆ ಭಾಷೆ ನಾಶವಾಗಕೂಡದು ಎಂಬ ಅಪೂರ್ವ ಕಾಳಜಿ ಅವರಲ್ಲಿದ್ದಿದ್ದರಿಂದಲೇ ಕುವೆಂಪು ನೀಡಿ ತಂತ್ರಾಂಶವನ್ನು ಹೊರತಂದರೆಂದು ತೋರುತ್ತದೆ.

೭೦ರ ದಶಕದಲ್ಲಿ ಜಾತಿವಿನಾಶ ಆಂದೋಲನ, ಜೆ.ಪಿ. ಚಳವಳಿ ರೈತಚಳವಳಿ ಹಾಗೂ ಭಾಷಾ ಚಳವಳಿಗಳನ್ನು ಹುಟ್ಟುಹಾಕಿದಗ ತ್ರಿವಳಿಗಳಲ್ಲೊಬ್ಬರಾಗಿದ್ದರು (ಉಳಿದವರು ಪಿ.ಲಂಕೇಶ, ಎಂ.ಡಿ. ನಂಜುಂಡಸ್ವಾಮಿ) ಬೆಳಗಾವಿಯ ಮೇಯರ್ ಮುಖಕ್ಕೆ ಕಪ್ಪುಮಸಿ ಬಳಿದ ಸಂದರ್ಭದಲ್ಲಿ 'ಕನ್ನಡ ದ್ರೋಹಿ ಮುಖಕ್ಕೆ ಮಸಿಬಳಿಯದೆ ಫೇರ್ ಅಂಡ್ ಲೌಲಿ ಹಚ್ಚುವುದಕಾಗುತ್ತಾ ಎಂಬ ದಿಟ್ಟ ಪ್ರತಿಕ್ರಿಯೆ ಅವರದು.

ಉಪನ್ಯಾಸಕರು ಸಮಾಜಕ್ಕೆ ಹೊಸದನ್ನು ಹೇಳಬೇಕು. ಸಮಾಜ ತಪ್ಪುದಾರಿಗೆ ಹೋಗುತ್ತಿದ್ದರೆ ಅದನ್ನು ತಿದ್ದಬೇಕು. ಅದನ್ನು ಬಿಟ್ಟು ತಿಂಗಳಿಗೆ ಸಂಬಳ ಬರುತ್ತೆ ತಗೊಂಡು ತಾವಾಯಿತು ತಮ್ಮ ಕುಟುಂಬವಾಯಿತು ಎನ್ನುವಂತಿದ್ದರೆ ಏನನ್ನೂ ನಿರೀಕ್ಷಿಸಲಾಗದು ಎಂದು ೨೦೦೨ರ ಸೆಪ್ಟೆಂಬರ್‌ನಲ್ಲಿ ಮೈಸೂರು ಮಾನಸಗಂಗೋತ್ರಿ ಸಭಾಂಗಣದಲ್ಲಿ ಮುಲಾಜು, ಮುಖವಾಡವಿಲ್ಲದೆ ನೈಜವಾಗಿ ಹೇಳಿದ ಬುದ್ಧಿಜೀವಿ ಇವರು.

ತಮ್ಮ ವಿಚಾರಧಾರೆ, ವೈಚಾರಿಕ ಪ್ರಜ್ಞೆಯಿಂದ ವಿಶೇಷವಾಗಿ ಎದ್ದು ಕಾಣುವ ತೇಜಸ್ವಿ ವಿವಾದ, ನಿಷ್ಠುರಗಳಿಗೆ ಸಿಲುಕಿ, ಜನವಿರೋಧಿ ಎಂಬ ನೇಪಥ್ಯಕ್ಕೆ ಸಿಲುಕಿದ್ದೂ ಉಂಟು ಒಂದು ರೀತಿ ೧೨ನೇ ಶತಮಾನದ ಅಲ್ಲಮಪ್ರಭುವಿನಂತೆ ಆಧುನಿಕ

ಅಲ್ಲಮನಾಗಿದ್ದಾರೆ. ಇಬ್ಬರ ಬರವಣಿಗೆಯಲ್ಲಿ ಬೆರಗು, ವಿಸ್ಮಯ, ವಿರೋಧಾಭಾಸಗಳಿವೆ. 'ಬೆತ್ತಲೆ ಸಮಾಜದಲ್ಲಿ ಬಟ್ಟೆ ಧರಿಸಿನಿಂತ ಧೀಮಂತ ವ್ಯಕ್ತಿಯಾಗಿದ್ದಾರೆ'.

ಉದಾರೀಕರಣ ನೀತಿಯು ಜನಜೀವನವನ್ನು ಸುಧಾರಿಸಬೇಕೇ ವಿನಃ ಅದನ್ನು ಹಾಳುಗೆಡಬಾರದೆಂಬುದು ಅವರ ಒಳಾರ್ಥವಾಗಿದೆ. ಪ್ರಕೃತಿ, ಪರಿಸರ, ಮಾನವ ಸಂಬಂಧ, ಜನರ ಜೂಜಾಟವನ್ನು ಕೇಂದ್ರೀಕರಿಸಿ ಬರೆದ ತೇಜಸ್ವಿ ಅದ್ಭುತ ಮಾನವತಾವಾದಿ, ಸಮಾಜದ ಆಗುಹೋಗುಗಳು ಅವರ ಸಾಹಿತ್ಯದ ಎಳೆಗಳಾಗಿದ್ದರೆ, ಹೊಸತನದ ಹುಡುಕಾಟವನ್ನು ಸಾಹಿತ್ಯದ ಮೂಲಸೆಲೆಯಾಗಿಸಿಕೊಂಡು ಅದರಂತೆ ಹೊಸತನದ ಹೆಜ್ಜೆ ಇಟ್ಟವರಿವರು. ಎಷ್ಟು ನಿಷ್ಠುರವಾದಿಯೋ ಅಷ್ಟೇ ಮನರಂಜನೆಯ ಸಂಭ್ರಮ, ಸಡಗರದ ವ್ಯಕ್ತಿಯೂ ಹೌದು. ಇಲ್ಲಿ ಅವರು ಮಾತ್ರ ಪಯಣಿಗರಾಗದೆ ಪ್ರತಿಯೊಬ್ಬ ಓದುಗನೂ ಪಾತ್ರಧಾರಿ. ಇಲ್ಲಿ ಎಲ್ಲರೂ ನಕ್ಕುನಲಿಯಬೇಕು. ನಗುತ್ತಲೇ ಹೊಸ ಹೊಳಹುಗಳನ್ನು ಪಡೆಯಲೇಬೇಕು. ಈ ರೀತಿ ದರ್ಶಿಸುವ ಇವರ ಸಾಹಿತ್ಯಕ್ಕೆ ವಯೋಮಾನದ ಅಡೆತಡೆಗಳಿಲ್ಲ. ಕಾಲದ ಹಂಗಿಲ್ಲ. ಅದು ಕಾಲಾತೀತವಾದುದು.

ದಾರಿಗಳಿಲ್ಲದ ಕಾಡಿನಲ್ಲಿ ಓಡಾಡಿ ತಾವು ನಡೆದದ್ದನ್ನೇ ದಾರಿಮಾಡಿಕೊಂಡಿದ್ದರಿಂದಲೇ ಇತರರು ಕಾಣಲು ಸಾಧ್ಯವಾಗದುದನ್ನು ತಾವು ಕಾಣಲು ಸಾಧ್ಯವಾಯಿತು. ಸಾಹಿತ್ಯವಲಯದಲ್ಲಿಯೂ ಏನನ್ನೂ ನಿರೀಕ್ಷಿಸದೆ ತಮ್ಮದೇ ಆದ ಸಾಹಿತ್ಯದ ದಾರಿಯನ್ನು ತುಳಿದು ಇತರರಿಗೂ ಕೈಮರ, ಕೈದೀವಿಗೆಯಾದರು. ಎಲ್ಲಾ ಜಂಜಾಟಗಳನ್ನು ತಾತ್ಸಾರದಿಂದ ಕಂಡು 'ಬದಲಾವಣೆ'ಯಾಗಲೇ ಬೇಕೆಂಬ ಮಹದಾಸೆ ಹೊತ್ತಂತಹ ತೇಜಸ್ವಿಯವರು ಯಾವುದೇ ವಿಮರ್ಶೆ, ಹೊಗಳಿಕೆ, ತೆಗಳಿಕೆ, ಪ್ರಶಸ್ತಿ ಪುರಸ್ಕಾರಗಳನ್ನು ಅರಸದೆ ಸಾಹಿತಿಗಳ ಜೊತೆ ಮಾತ್ರ ಇರೋದು ಬಹಳ ಅಪಾಯಕಾರಿ ಎಂಬುದನ್ನು ಬಲ್ಲಂತಹ ತೇಜಸ್ವಿಯವರು 'ಏಕಾಂಗಿ'ಯಾಗಿ ಇದ್ದುದರಿಂದಲೇ ಅವರು ಎಲ್ಲಾ ಸಾಹಿತ್ಯ ಪಂಥದವರ ಮನದಾಳದ ಮಿತ್ರರಾದರೇನೋ ?

ನಮ್ಮಲ್ಲಿ ವಿಸ್ಮಯವನ್ನು ಹುಟ್ಟಿಸುವಂತೆ ಬದುಕಿ ಬರೆದ ಬರಹಗಾರರೊಬ್ಬರು ಈಗ ಬದುಕಿನ ಕ್ಷಣಿಕತೆಯನ್ನು ವಿಸ್ಮಯಗೊಳಿಸುವಂತೆ ತಮ್ಮ ೬೯ನೇ ವಯಸ್ಸಿನಲ್ಲಿ ಮೂಡಿಗೆರೆಯ ನಿವಾಸದಲ್ಲಿ ಏಪ್ರಿಲ್ ೫, ೨೦೦೭ರ ಗುರುವಾರ ಮಧ್ಯಾಹ್ನ ೧.೪೫ ರ ಸಮಯದಲ್ಲಿ ಹೃದಯಾಘಾತದಿಂದ ಪ್ರಾಣಪಕ್ಷಿ ಹಾರಿ ನಮ್ಮನ್ನು ಅಗಲಿದ್ದಾರೆ. ಏಪ್ರಿಲ್ ೬ರಂದು ತಂದೆ ಕುವೆಂಪು ಸಮಾದಿಸ್ಥಳವಾದ 'ಕವಿಶೈಲ' ದಲ್ಲಿ ಅಂತ್ಯಸಂಸ್ಕಾರ ಮಾಡಲಾಗಿದೆಯಾದರೂ ಅವರು ಸದಾ ನಮ್ಮ ಅಂತರ್ಯದಲ್ಲಿಯೇ ಹುದುಗಿರುತ್ತಾರೆ.

ಅಡಿಟಿಪ್ಪಣಿ

ಅಧ್ಯಾಯ - 1

1. ಡಾ.ಎಚ್.ಎಂ. ಮಹೇಶ್ವರಯ್ಯ, ವಿಜಯಕರ್ನಾಟಕ ದಿನಪತ್ರಿಕೆ, ಏಪ್ರಿಲ್-6, 2007
2. ತೇಜಸ್ವಿ ಕಥನ, ಟಿ.ಪಿ . ಅಶೋಕ, ಪುಟ-22.
3. ತೇಜಸ್ವಿಯೊಳಗೊಬ್ಬ ಕಲಾವಿದ, ಪುಟ - 05
4. ಅದೇ ಪುಟ-06
5. ಅದೇಪುಟ-05
6. ತೇಜಸ್ವಿ ಸಾಹಿತ್ಯ ಕೃಷಿ, ಪ್ರೊ. ಟಿ.ಬಿ. ಭೈರಪ್ಪ ಮತ್ತು ಡಾ. ಎಂ. ಭೈರೇಗೌಡ, ಪುಟ-20.
7. ತೇಜಸ್ವಿ ಸಾಹಿತ್ಯ ಕೃಷಿ, ಅದೇಪುಟ-109

ಅಧ್ಯಾಯ - 2

1. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ-93
2. ಅದೇ ಪುಟ-94
3. ಅದೇ ಪುಟ-95
4. ಅದೇ ಪುಟ-97
5. ಅದೇ ಪುಟ-98
6. ಅದೇ ಪುಟ-99
7. ಅದೇ ಪುಟ-101
8. ಅದೇ ಪುಟ-109
9. ಅದೇ ಪುಟ-124
10. ಅದೇ ಪುಟ-55
11. ಅದೇ ಪುಟ-58
12. ಅದೇ ಪುಟ-65
13. ಅದೇ ಪುಟ-63
14. ನಮ್ಮೊಳಗೊಬ್ಬ ನಾಜೂಕಯ್ಯ (ನಾಟಕ) ಟಿ.ಎನ್. ಸೀತಾರಾಮ್

15. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ-66

16. ಅದೇ ಪುಟ-78

17. ಅದೇ ಪುಟ-42

18. ಅದೇ ಪುಟ-43

ಅಧ್ಯಾಯ - 3

1. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಪುಟ-28

2. ಕೆ.ಪಿ. ಪೂರ್ಣಚಂದ್ರ ತೇಜಸ್ವ, ಹುಲಿಯೂರಿನ ಸರಹದ್ದು, ಪುಟ-21

3. ಅದೇ ಪುಟ-21

4. ಅದೇ ಪುಟ-21

5. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಪುಟ-91

6. ಕೆ.ಪಿ.ಪೂರ್ಣಚಂದ್ರತೇಜಸ್ವಿ, ಕಿರುಗೂರಿನ ಗಯ್ಯಾಳಿಗಳು, ಪುಟ-49

7. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಪುಟ-48

8. ಅದೇಪುಟ-52

9. ಅದೇಪುಟ-60

ಅಧ್ಯಾಯ - 4

1. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಪುಟ-101

2. ಅದೇಪುಟ-103

3. ಅದೇಪುಟ-106

4. ಕೆ.ಪಿ.ಪೂರ್ಣಚಂದ್ರ ತೇಜಸ್ವಿ,ಕಿರುಗೂರಿನ ಗಯ್ಯಾಳಿಗಳು, ಪುಟ-58

ಅಧ್ಯಾಯ - 5

1. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಪುಟ-116

2. ಅದೇಪುಟ-119

3. ಅದೇಪುಟ-121

4. ಕೆ.ಪಿ. ಪೂರ್ಣಚಂದ್ರತೇಜಸ್ವಿ, ಕಿರುಗೂರಿನ ಗಯ್ಯಾಳಿಗಳು, ಪುಟ-101

5. ಅದೇಪುಟ-110

6. ಅದೇಪುಟ-123

ತೇಜಸ್ವಿಯವರ ಕೃತಿಗಳ ಪರಿಚಯ

ಕಾದಂಬರಿಗಳು

೧.	ಕರ್ವಾಲೊ	:	1980
೨.	ಚಿದಂಬರ ರಹಸ್ಯ	:	1985
೩.	ಜುಗಾರಿ ಕ್ರಾಸ್	:	1994
೪.	ಮಾಯಾಲೋಕ	:	2006

ಕಿರು ಕಾದಂಬರಿಗಳು

೫.	ಸ್ವರೂಪ	:	1966
೬.	ನಿಗೂಢ ಮನುಷ್ಯರು	:	1973

ಜೀವನ ಚರಿತ್ರೆ, ಹಾಗೂ ಆತ್ಮ ಚರಿತ್ರೆ

೭.	ಅಣ್ಣನ ನೆನಪುಗಳು	:	1996

ಕಥಾಸಂಕಲನಗಳು

೮.	ಹುಲಿಯೂರಿನ ಸರಹದ್ದು	:	1962
೯.	ಅಬಚೂರಿನ ಪೋಸ್ಟಾಫೀಸು	:	1973
೧೦.	ಕಿರುಗೂರಿನ ಗಯ್ಯಾಳಿಗಳು	:	1991

ಪರಿಸರ ಮತ್ತು ವೈಜ್ಞಾನಿಕ ಕಥಾ ಸಂಕಲನಗಳು

೧೧	ಪರಿಸರದ ಕಥೆ	:	1991
೧೨.	ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು	:	1993
೧೩.	ಕಾಡಿನ ಕಥೆಗಳು ಭಾಗ-೧	:	1993
೧೪.	ಕಾಡಿನ ಕಥೆಗಳು ಭಾಗ-೨	:	1993
೧೫.	ಕಾಡಿನ ಕಥೆಗಳು ಭಾಗ-೩	:	1994
೧೬.	ಕಾಡಿನ ಕಥೆಗಳು ಭಾಗ-೪	:	1995
೧೭.	ರುದ್ರ ಪ್ರಯಾಗದ ಭಯಾನಕ ನರಭಕ್ಷಕ	:	1991

೧೮. ಕಿರಿಯರಿಗಾಗಿ ಪರಿಸರ : 1964

೧೯. ವ್ಯಕ್ತಿವಿಶಿಷ್ಟ ಸಿದ್ಧಾಂತ : 1964

೨೦. ಸಹಜಕೃಷಿ : 1992

ಪ್ರವಾಸ ಕಥನ

೨೧. ಅಲೆಮಾರಿನ ಅಂಡಮಾನ್ ಮತ್ತು
ಮಹಾನದಿ ನೈಲ್ : 1990

ಕವನ ಸಂಕಲನ

೨೨. ಸೋಮುವಿನ ಸ್ವಗತ ಲಹರಿ : 1962

ನಾಟಕ

೨೩. ಯಮಳ ಪ್ರಶ್ನೆ : 1964

ಸಂಶೋಧನೆ ಮತ್ತು ವೈಜ್ಞಾನಿಕ ಬರವಣಿಗೆ

೨೪. ಫ್ಲೈಯಿಂಗ್ ಸಾಸರ್ಸ್ ಭಾಗ-೧ : 1993

೨೫. ಪ್ಲೈಯಇಂಗ್ ಸಾಸರ್ಸ್ ಭಾಗ-೨ : 1993

೨೬. ಮಿಸ್ಸಿಂಗ್ ಲಿಂಕ್ : 1991

೨೭. ವಿಸ್ಮಯ ಭಾಗ-೧ : 1994

೨೮. ವಿಸ್ಮಯ ಭಾಗ-೨ : 1993

೨೯. ವಿಸ್ಮಯ ಭಾಗ-೩ : 1994

ಪರಿಸರ ಮತ್ತು ವಿಜ್ಞಾನ

೩೦. ದಕ್ಷಿಣ ಭಾರತದ ಹಕ್ಕಿಗಳು : 1993

೩೧. ಮಿಂಚುಳ್ಳಿ ಕನ್ನಡನಾಡಿನ ಹಕ್ಕಿಗಳು ಭಾಗ-೧ : 1994

೩೨. ಹೆಜ್ಜೆ ಮೂಡದ ಹಾದಿ
(ಕನ್ನಡನಾಡಿನ ಹಕ್ಕಿಗಳು ಭಾಗ-೨)

೩೩. ಹಕ್ಕಿಪುಕ್ಕ : 1996

೩೪. ನಡೆಯುವ ಕಡ್ಡಿ ಹಾರುವ ಎಲೆ
(ಹುಳುಗಳ ಕೋಶ-೧) : 1997

ಗ್ರಂಥಸೂಚಿ

೧. ಟಿ.ಪಿ. ಅಶೋಕ (ಸಂ.) : ತೇಜಸ್ವಿ ಕಥನ
ಅಕ್ಷರ ಪ್ರಕಾಶನ, ಹೆಗ್ಗೋಡು,
೧ನೇ ಮುದ್ರಣ ೨೦೦೪.

೨. ಪ್ರೊ. ಜಿ.ಬಿ. ವೀರಪ್ಪ (ಸಂ.) : ತೇಜಸ್ವಿ ಸಾಹಿತ್ಯ ಕೃಷಿ
ಡಾ. ಎಂ. ಭೈರೇಗೌಡ
ಕರ್ನಾಟಕ ಸಾಹಿತ್ಯ ಅಕಾಡೆಮಿ,
೧ನೇ ಮುದ್ರಣ, ೨೦೦೪.
ಬೆಂಗಳೂರು

೩. ಹೆಚ್.ಎಂ. ಮಹೇಶ್ವರಯ್ಯ (ಸಂ.): ಪೂರ್ಣಚಂದ್ರ ತೇಜಸ್ವಿ

೪. ಲೇ. ಪೂರ್ಣಂದ್ರ ತೇಜಸ್ವಿ : ಹುಲಿಯೂರಿನ ಸರಹದ್ದು,
ಪುಸ್ತಕ ಪ್ರಕಾಶನ, ಸರಸ್ವತಿ ಪುರಂ,
ಮೈಸೂರು, ೧೯೭೩೫.

೫. ಲೇ. ಪೂರ್ಣಂದ್ರ ತೇಜಸ್ವಿ : ಅಬಚೂರಿನ ಪೋಸ್ಟಾಫೀಸು
ಪುಸ್ತಕ ಪ್ರಕಾಶನ, ಸರಸ್ವತಿ ಪುರಂ,
ಮೈಸೂರು, ೧೯೭೩೫.

೬. ಲೇ. ಪೂರ್ಣಂದ್ರ ತೇಜಸ್ವಿ : ಕಿರುಗೂರಿನ ಗಯ್ಯಾಳಿಗಳು
ಪುಸ್ತಕ ಪ್ರಕಾಶನ, ಸರಸ್ವತಿ ಪುರಂ,
ಮೈಸೂರು, ೧೯೭೩೫.

೭. ಕೆ.ವಿ. ನಾರಾಯಣ : ಬೇರು - ಕಾಂಡ-ಚಿಗುರು

೮. ಜಿ.ಎಸ್. ಅಮೂರ : ಕನ್ನಡ ಕಥನ ಸಾಹಿತ್ಯ